
# ವಿಪ್ರನುಡಿ


ಸ್ವಾವಲಂಬನೆ–ಸಂಘಟನೆ–ಸಂಸ್ಕಾರ

ಸಂಪುಟ–36 ಶ್ರೀಶುಭಕೃತ್/ಶೋಭಕೃತ್ ನಾಮ ಸಂವತ್ಸರ, ಚೈತ್ರ–ವೈಶಾಖ ಮಾಸ ಎಪ್ರಿಲ್–2023, ಸಂಚಿಕೆ–2, ಪುಟಗಳು–44 ಬೆಲೆ ರೂ.15/–

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ 41ನೇ ವಾರ್ಷಿಕ ಸರ್ವಸದಸ್ಯರ ಸಭೆ











# ಉದಾರ ದೇಣಿಗೆ



ಹಿರಿಯ ವಕೀಲರಾದ ಶ್ರೀ ಎಂ.ಎನ್. ಶೇಷಾದ್ರಿ ಅವರು ನಿವೃತ್ತ ಮುಖ್ಯ ನ್ಯಾಯ ಮೂರ್ತಿಗಳಾದ ಶ್ರೀ ಎಂ.ಎನ್. ವೆಂಕಟಾಚಲಯ್ಯ ಅವರ ಸಮ್ಮುಖದಲ್ಲಿ ಅವರ ಆಶೀರ್ವಾದ ಪಡೆದು ಮಹಾಸಭಾದ ಸಮಾಜಮುಖಿ ಚಟುವಟಿಕೆಗಳಿಗೆ 10 ಲಕ್ಷ ರೂಪಾಯಿಗಳ ದೇಣಿಗೆಯನ್ನು ನೀಡಿರುತ್ತಾರೆ, ಅವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ತುಂಬು ಹೃದಯದಿಂದ ಕೃತಜ್ಞತೆ ಸಲ್ಲಿಸುತ್ತದೆ, ಈ ಸಂದರ್ಭದಲ್ಲಿ ಮಹಾಸಭಾ ಅಧ್ಯಕ್ಷರು ಶ್ರೀ ಅಶೋಕ ಹಾರನಹಳ್ಳಿ, ಖಜಾಂಚಿಗಳಾದ ವೆಂಕಟೇಶ್ ನಾಯಕ್‌ರವರು ಜತೆಯಲ್ಲಿದ್ದರು.

ರಾಜ್ಯ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಎಸ್.ಎನ್. ಮೂರ್ತಿರವರು ಸಪ್ತರ್ಷಿ ಫೌಂಡೇಶನ್‌ಗೆ 5,00,000 ರೂಪಾಯಿಗಳ ಉದಾರ ದೇಣಿಗೆ ನೀಡಿರುತ್ತಾರೆ.



**ದಾನಿಗಳಿಗೆ ಆಯುರಾರೋಗ್ಯ ಐಶ್ವರ್ಯ ನೀಡಲೆಂದು ದೇವರನ್ನು ಬೇಡುತ್ತ ದಾನಿಗಳನ್ನು ಹೃತ್ಪೂರ್ವವಾಗಿ ಮಹಾಸಭೆ ಅಭಿನಂದಿಸುತ್ತದೆ**







**26-3-2-23**
**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಮಹಿಳಾ ವಿಭಾಗ ವತಿಯಿಂದ ಅಯೋಜಿಸಿದ್ದ ಮಹಿಳಾ ದಿನಾಚರಣೆಯ ಕಾರ್ಯಕ್ರಮವು**



**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**

ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎನ್**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

ಸಂಘಟನಾ ಕಾರ್ಯದರ್ಶಿ
**ಡಾ। ಜಿ.ಎಸ್. ರಾಘವೇಂದ್ರ ಭಟ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
**ಜ್ಯೋತಿಷಿ ಬ॥ ಡಾ। ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಅನಭಿಜ್ಞಾಯ ಶಾಸ್ತ್ರಾರ್ಥಾನ್ ಪುರುಷಾಃ ಪಶುಬುದ್ಧಯಃ ।**
**ಪ್ರಾಗಲ್ಭ್ಯಾನ್ ವಕ್ತುಮಿಚ್ಛಂತಿ ಮಂತ್ರೇಷು ಅಭ್ಯಂತರೀಕೃತಾಃ ॥**

"ಮಂತ್ರಿಗಳಲ್ಲಿ ಪಶುಬುದ್ಧಿಯ ಜನರು ಸೇರಿಕೊಂಡಿರುತ್ತಾರೆ. ಅವರು ಯಾವ ಶಾಸ್ತ್ರಾರ್ಥವನ್ನೂ ಅರಿತುಕೊಳ್ಳದೇ ದುಡುಕಿನ ಮಾತನ್ನು ಆಡುತ್ತಾ ಸಲಹೆ ಕೊಡಲು ಬಯಸುತ್ತಾರೆ."

ಯಾವ ಪ್ರಾಯೋಗಿಕ ಕೆಲಸವನ್ನೂ ಜೀವನದಲ್ಲಿ ಮಾಡದೇ ಕೇವಲ ಬೇರೆಯವರಿಗೆ ಸಲಹೆ ಕೊಡುವ ಜನರನ್ನು ಕುರಿತ ಸುಭಾಷಿತವಿದು. ರಾಮಾಯಣ ಯುದ್ಧಕಾಂಡದಲ್ಲಿ ಕುಂಭಕರ್ಣನು ತನ್ನ ಅಣ್ಣ ರಾವಣನಿಗೆ ತಿಳಿಸುವ ಪ್ರಸಂಗವಿದು. ರಾಮ–ರಾವಣ ಯುದ್ಧ ನಡೆಯುತ್ತಿದ್ದಾಗ, ರಾಮನ ಕೈ ಮೇಲಾಗುತ್ತಾ ಬಂದಿತು. ರಾವಣನಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ನಿದ್ದೆಯಲ್ಲಿದ್ದ ಕುಂಭಕರ್ಣನನ್ನು ಎಬ್ಬಿಸುವಂತೆ ರಾಜಭಟರಿಗೆ ತಿಳಿಸಿ, ಅವನು ರಾಜಸಭೆಗೆ ಬಂದಾಗ, ಸೀತಾಪಹರಣ, ತಾನು ಸೋಲುತ್ತಿರುವುದನ್ನು ತಿಳಿಸುತ್ತಾನೆ. ಆಗ ಕುಂಭಕರ್ಣನು 'ಅಣ್ಣ ಮೊದಲನೆಯದಾಗಿ ನೀನು ಸೀತೆಯನ್ನು ಅಪಹರಿಸಿದ್ದು ತಪ್ಪು. ಯಾರ ಸಲಹೆಯನ್ನು ಕೇಳಿ ಇಂತಹ ದುಷ್ಕಾರ್ಯ ಮಾಡಿದೆ? ಅವನೊಂದಿಗೆ ಯುದ್ಧವನ್ನೇಕೆ ಕೈಗೊಂಡೆ? ನಮ್ಮ ಸಹೋದರ ವಿಭೀಷಣ ಮಹಾಬುದ್ಧಿಶಾಲಿ, ರಾಜನೀತಿಯಲ್ಲಿ ಪಳಗಿದವನು. ಅವನ ಸಲಹೆ ಏನಾದರೂ ತೆಗೆದುಕೊಂಡೆಯಾ? ಪಶುಬುದ್ಧಿಯುಳ್ಳ ಸ್ವಾರ್ಥಿಗಳಾದ ಮಂತ್ರಿಗಳ ಮಾತನ್ನು ಕೇಳಿದ್ದೀಯ. ಸೀತೆಯನ್ನು ಅಪಹರಿಸುವಾಗ ಯುಕ್ತ, ಅಯುಕ್ತ ಎಂಬ ವಿಷಯವನ್ನು ನೀನು ಚಿಂತಿಸಲಿಲ್ಲ. ಅದರ ಘೋರ ಪರಿಣಾಮದ ಬಗೆಯೂ ಆಲೋಚಿಸಲಿಲ್ಲ. ಕೇವಲ ಅಹಂಕಾರ–ದರ್ಪಗಳಿಂದ ಈ ರೀತಿ ವರ್ತಿಸಿದ್ದೀಯೆ. ಇನ್ನೂ ಕಾಲ ಮಿಂಚಿಲ್ಲ. ಸೀತೆಯನ್ನು ರಾಮನಿಗೆ ಒಪ್ಪಿಸಿ ನಿನ್ನನ್ನು ರಕ್ಷಿಸಿಕೊಂಡು, ದೇಶವನ್ನು ರಕ್ಷಿಸಿಕೋ ।' ಎಂದು ಬುದ್ಧಿ ಮಾತು ಹೇಳುತ್ತಾನೆ.

ಇವತ್ತಿನ ರಾಜಕೀಯ ದೃಷ್ಟಿಕೋನದಿಂದ ನೋಡಿದ್ದರೆ, ರಾಜಕೀಯವು ವಿಪರೀತ ಭ್ರಷ್ಟಾಚಾರದಿಂದ ಕೂಡಿದೆ. ಎಲ್ಲರೂ ಸ್ವಾರ್ಥಸಾಧನೆಗಾಗಿ ದೇಶವನ್ನು ಬಲಿಕೊಡಲು ಸಿದ್ಧಾರಿದ್ದಾರೆ. ಕೇವಲ ಸಮುದಾಯ ಬಲದಿಂದ ಚುನಾವಣೆಗೆ ನಿಂತು, ಹೇಗಾದರೂ ಗೆದ್ದು, ಅಧಿಕಾರ ಹಿಡಿಯುವ, ಹಣ ಮಾಡುವ ದೃಷ್ಟಿಯಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ನಾಯಕರಿಗೆ, ಅವರು ನಡೆಸುವ ಸಂಘ–ಸಂಸ್ಥೆಗಳಿಗೆ ಬೇಕಾಗುವ ಶಾಸ್ತ್ರಾರ್ಥ, ಮಂತ್ರಾಲೋಚನೆ, ನಿಶಿತಮತಿ, ದೂರಾಲೋಚನೆಗಳನ್ನು ಸೂಚಿಸುವ ನಾಯಕರ ಅವಶ್ಯಕತೆ ತಿಳಿಸುವ ಮಹತ್ತರವಾದ ರಾಮಾಯಣ ಶ್ಲೋಕವಿದು.

**ಪ್ರೊ. ಎಂ.ಕೆ. ಶ್ರೀಧರ್**

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**–ಸಂಪಾದಕ ಮಂಡಳಿ**

ಹಿಂದಿನ ಸಂಚಿಕೆಯಿಂದ

# ತತ್ವ ಬೋಧ

ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ಪಂಚೀಕರಣಂ ಕಥಮ್?**

**ಏತೇಷು ಭೂತೇಷು ಏಕಮೇಕಂಭೂತಂ ದ್ವಿಧಾ ಸಮಂವಿಭಜ್ಯಏಕಮೇಕಮ್ ಅರ್ಧಂತಷ್ಣೀಂವ್ಯವಸ್ಥಾಪ್ಯ ಅಪರಮಪರಮ್ ಅರ್ಧಂಚತುರ್ಧಾಸಮಂ ವಿಭಜ್ಯಸ್ವಾರ್ಧಭಿನ್ನೇಷು ಅರ್ಧೇಷುಸ್ವಭಾಗಚತುಷ್ಟಯ ಸಂಯೋಜನಂ ಪಂಚೀಕರಣಂ ಭವತಿ।**

**ಅನುವಾದ :** ಪಂಚೀಕರಣವು ಹೇಗೆ?

ಈ ಭೂತಗಳಲ್ಲಿ ಒಂದೊಂದು ಭೂತವನ್ನೂ ಸಮವಾಗಿ ಎರಡಾಗಿ ವಿಭಜಿಸಿ, ಪ್ರತಿಯೊಂದರ ಒಂದೊಂದು ಅರ್ಧವನ್ನು ಸುಮ್ಮನಿರಿಸಿ, ಪ್ರತಿಯೊಂದರ ಎರಡನೆಯ ಅರ್ಧವನ್ನು ಸಮವಾದ ನಾಲ್ಕು ಭಾಗಗಳಾಗಿ ವಿಭಜಿಸಿ, ಒಂದೊಂದರ ಆ ನಾಲ್ಕು ಭಾಗಗಳನ್ನು ತನಗಿಂತ ಭಿನ್ನವಾದ ಭೂತಗಳ ಅರ್ಧದಲ್ಲಿ ಸೇರಿಸುವುದೇ ಪಂಚೀಕರಣ.

**ವಿವರಣೆ :** ಆಕಾಶಾದಿಸೂಕ್ಷ್ಮಭೂತಗಳ ತಾಮಸಾಂಶಗಳ ಪಂಚೀಕರಣ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತವೆ. ಮೊದಲು ಒಂದೊಂದು ಭೂತವೂ ಎರಡು ಸಮಾನವಾದ ಭಾಗಗಳಾಗಿ (1/2+1/2) ವಿಭಜಿಸಲ್ಪಡುತ್ತದೆ. ಅನಂತರ ಪ್ರತಿಯೊಂದು ಭೂತದ ಎರಡನೆಯ ಅರ್ಧವನ್ನು ಪುನಃ ನಾಲ್ಕು ಭಾಗಗಳಾಗಿ ಮಾಡಲಾಗುತ್ತದೆ. ಈ ರೀತಿಯಾಗಿ ಒಂದೊಂದು ಭೂತದ ನಾಲ್ಕು 1/8 ಅಂಶಗಳಾಗುತ್ತವೆ. ಪ್ರತಿಯೊಂದು ಭೂತದ ಈ ನಾಲ್ಕು ಭಾಗಗಳಲ್ಲಿ ಒಂದೊಂದು ಭಾಗವನ್ನು ಉಳಿದ ನಾಲ್ಕು ಭೂತಗಳ ಅರ್ಧದೊಂದಿಗೆ ಸೇರಿಸಲಾಗುತ್ತದೆ. ಆಗ ಪ್ರತಿಯೊಂದು ಭೂತವೂ ಅರ್ಧಭಾಗ ತನ್ನ ಅಂಶವನ್ನೂ ಉಳಿದ ಅರ್ಧಭಾಗ ಉಳಿದ ನಾಲ್ಕು ಭೂತಗಳನ್ನೂ ಒಳಗೊಂಡಿರುವಂತಾಗುತ್ತದೆ. ಉದಾಹರಣೆಗೆ ಆಕಾಶದಲ್ಲಿ 1/2 ಅಂಶ ಆಕಾಶವೇ ಆಗಿದ್ದು 1/8 ಅಂಶ ವಾಯು, 1/8 ಅಂಶ ಅಗ್ನಿ, 1/8 ಅಂಶ ಜಲ ಹಾಗೂ 1/8 ಅಂಶ ಪೃಥ್ವಿ ಆಗಿರುತ್ತದೆ. ಇದೇ ರೀತಿ ಉಳಿದ ಭೂತಗಳಲ್ಲೂ ತಿಳಿದುಕೊಳ್ಳಬೇಕು. ಈ ಭೂತಗಳ ಪರಸ್ಪರ ಮಿಶ್ರಣದ ಪ್ರಕ್ರಿಯೆಯನ್ನು ಪಂಚೀಕರಣ ಎನ್ನುವರು. ಪಂಚೀಕರಣವನ್ನು ಹೊಂದಿದ ಭೂತವನ್ನು ಪಂಚೀಕೃತ ಭೂತ ಅಥವಾ ಸ್ಥೂಲಭೂತ ಎನ್ನುವರು.

**ಏತೇಭ್ಯಃ ಪಂಚೀಕೃತ ಪಂಚಮಹಾಭೂತೇಭ್ಯಃ ಚತುರ್ವಿಧಸ್ಥೂಲಶರೀರಂ ಬ್ರಹ್ಮಾಂಡಂಬ್ರಹ್ಮಾಂಡ ಮಧ್ಯೇಚತುರ್ದಶ ಭುವನಾನಿ ಸಂಭೂತಾನಿ ।**

**ಅನುವಾದ :** ಈ ಪಂಚೀಕೃತ ಪಂಚ ಮಹಾಭೂತಗಳಿಂದ ನಾಲ್ಕು ವಿಧದ ಸ್ಥೂಲ ಶರೀರಗಳೂ ಬ್ರಹ್ಮಾಂಡವೂ ಬ್ರಹ್ಮಾಂಡದ ಒಳಗಿನ ಹದಿನಾಲ್ಕು ಲೋಕಗಳೂ ಉಂಟಾಗಿವೆ.

**ವಿವರಣೆ :** ಸ್ವೇದಜ, ಅಂಡಜ, ಉದ್ಭಿಜ್ಜ ಹಾಗೂ ಜರಾಯುಜ ಎನ್ನುವ ನಾಲ್ಕು ಪ್ರಕಾರದ ಸ್ಥೂಲಶರೀರಗಳಿವೆ. ಸ್ವೇದಜ ಎಂದರೆ ಬೆವರು ಅಥವಾ ತೇವದಲ್ಲಿ ಹುಟ್ಟಿಕೊಳ್ಳುವ ಜಂತುಗಳು. ಅಂಡಜ ಎಂದರೆ ಮೊಟ್ಟೆಯಿಂದ ಹುಟ್ಟಿಕೊಳ್ಳುವ ಪಕ್ಷಿ ಇತ್ಯಾದಿಗಳು. ಉದ್ಭಿಜ್ಜ ಎಂದರೆ ಭೂಮಿಯನ್ನು ಒಡೆದು ಹುಟ್ಟಿಕೊಳ್ಳುವ ಮರಗಿಡಗಳು. ಜರಾಯುಜ ಎಂದರೆ ಗರ್ಭದಲ್ಲಿ ಹುಟ್ಟಿಕೊಳ್ಳುವ ಪಶುಗಳು ಹಾಗೂ ಮನುಷ್ಯರು. ಈ ನಾಲ್ಕು ರೀತಿಯ ಸ್ಥೂಲಶರೀರಗಳು ಐದು ಸ್ಥೂಲಭೂತಗಳಿಂದಲೇ ನಿರ್ಮಿತವಾಗಿವೆ. ಅಷ್ಟೇ ಅಲ್ಲದೆ ಬ್ರಹ್ಮಾಂಡ ಎಂದು ಕರೆಯಲ್ಪಡುವ ಈ ಸಮಸ್ತ ಸ್ಥೂಲ ಪ್ರಪಂಚ ಹಾಗೂ ಅದರೊಳಗೆ ಇರುವಂತಹ ಹದಿನಾಲ್ಕು ಲೋಕಗಳು ಸ್ಥೂಲ ಭೂತಗಳಿಂದಲೇ ನಿರ್ಮಿಸಲ್ಪಟ್ಟಿವೆ. ಕೆಲವೆಡೆ **ಏತೇಭ್ಯಃ ಪಂಚೀಕೃತ ಪಂಚ ಮಹಾಭೂತೇಭ್ಯಃ ಸ್ಥೂಲಶರೀರಂ ಭವತಿ** ಎಂದು ಮಾತ್ರ ಇದೆ.

**ಏವಂಪಿಂಡಬ್ರಹ್ಮಾಂಡಯೋರೈಕ್ಯಂಸಂಭೂತಮ್।**

**ಅನುವಾದ :** ಹೀಗೆ ಪಿಂಡ ಹಾಗೂ ಬ್ರಹ್ಮಾಂಡಗಳ ಐಕ್ಯವು ಸಂಭವಿಸಿದೆ.

**ವಿವರಣೆ :** ಪಿಂಡ ಎಂದರೆ ಜವದ ಉಪಾಧಿಯಾದ ವ್ಯಷ್ಟಿ ಸ್ಥೂಲಶರೀರ. ಅದು ಬ್ರಹ್ಮಾಂಡದ ಭಾಗವೇ ಆಗಿದೆ. ಪಿಂಡ ಹಾಗೂ ಈ ಬ್ರಹ್ಮಾಂಡ ಪಂಚ ಭೂತಗಳಿಂದಲೇ ನಿರ್ಮಿತವಾಗಿದೆ. ಈ ಪಂಕ್ತಿ ಕೆಲವು ಪಾಠಗಳಲ್ಲಿ ಕಂಡು ಬರುವುದಿಲ್ಲ.

**ಸ್ಥೂಲ ಶರೀರಾಭಿಮಾನಿ ಜೀವನಾಮಕಂ ಬ್ರಹ್ಮಪ್ರತಿಬಿಂಬಂ ಭವತಿ । ಸಃ ಏವ ಜೀವಃ ಆತ್ಮನ್ಯೇವಪ್ರಕೃತ್ಯಾಜೀವೇಶ್ವರ ಭೇದದೃಷ್ಟಿಂಕಲ್ಪಯತಿ ।**

**ಅನುವಾದ :** ಸ್ಥೂಲ ಶರೀರಾಭಿಮಾನಿಯಾಗಿ ಜೀವ ಎಂದು ಕರೆಯಲ್ಪಡುವುದು ಬ್ರಹ್ಮನ ಪ್ರತಿಬಿಂಬವೇ ಆಗಿರುತ್ತದೆ. ಆ ಜೀವನೇ ಪ್ರಕೃತಿಯಿಂದ ಆತ್ಮನಲ್ಲೇ ಜೀವೇಶ್ವರ ಭೇದದೃಷ್ಟಿಯನ್ನು ಕಲ್ಪಿಸುತ್ತಾನೆ.

**ವಿವರಣೆ :** ಜೀವ ಹಾಗೂ ಬ್ರಹ್ಮ ಇವೆರಡರಲ್ಲಿ ವಾಸ್ತವ ಭೇದ ಇಲ್ಲದಿದ್ದರೂ ಪರಸ್ಪರ ಭಿನ್ನವಾಗಿರುವಂತೆ ಕಂಡುಬರುತ್ತವೆ. ಆಕಾಶದಲ್ಲಿರುವ ಸೂರ್ಯನ ಪ್ರತಿಬಿಂಬವು ಮಡಕೆಯಲ್ಲಿರುವ ನೀರಿನಲ್ಲಿ ಕಂಡುಬರುತ್ತದೆ. ಪ್ರತಿಬಿಂಬ ಸೂರ್ಯ ಹಾಗೂ ಬಿಂಬ ಸೂರ್ಯರಲ್ಲಿ ನಿಜವಾಗಿ ಭೇದವಿಲ್ಲ. ಆದರೂ ಮೂರ್ಖರು ಮಡಕೆಯಲ್ಲಿರುವುದು ಬೇರೆ ಸೂರ್ಯ ಎಂದು ಭಾವಿಸುತ್ತಾರೆ. ಅದೇ ರೀತಿ ಜೀವ ಎಂದರೆ ಬ್ರಹ್ಮನ ಪ್ರತಿಬಿಂಬ. ಅದು ವಾಸ್ತವವಾಗಿ ಬ್ರಹ್ಮನೇ ಆದರೂ ಬೇರೆಯಾಗಿ ತೋರಿಕೊಳ್ಳುತ್ತದೆ. ಈ ಜೀವವು ಶರೀರದೊಂದಿಗೆ ಅಭಿಮಾನವನ್ನು ಹೊಂದಿ 'ನಾನು ಶರೀರಕ್ಕೆ ಸೀಮಿತನು' ಎಂದು ತಿಳಿದುಕೊಂಡಿರುತ್ತಾನೆ. ಅಷ್ಟೇ ಅಲ್ಲದೆ ತನ್ನನ್ನು ಈಶ್ವರನಿಂದ ಬೇರೆ ಎಂದು ತಿಳಿದುಕೊಂಡಿದ್ದಾನೆ. ಈ ರೀತಿಯ ಭ್ರಮೆಗೆ ಅಜ್ಞಾನ ಅಥವಾ ಅವಿದ್ಯೆಯೇ ಕಾರಣ. ಅವಿದ್ಯೆಯನ್ನೇ ಆಚಾರ್ಯರು 'ಪ್ರಕೃತಿ' ಎಂದಿದ್ದಾರೆ. ಕೆಲವೆಡೆ "ಸ ಏವ ಜೀವಃ ಪ್ರಕೃತ್ಯಾಸ್ವ ಸ್ಮಾಶ್ವರಂಭಿನ್ನತ್ವೇನಜಾನಾತಿ ।" ಎಂದಿದೆ. ಆಗ ಆ 'ಜೀವನೇ ಅಜ್ಞಾನದಿಂದ ತನ್ನಿಂದ ಈಶ್ವರನನ್ನು ಬೇರೆಯೆಂದು ತಿಳಿಯುತ್ತಾನೆ.' ಎಂದು ಕನ್ನಡಿಸಬೇಕು.

# ಅಧ್ಯಕ್ಷರ ನುಡಿ



**ವಿಪ್ರಬಾಂಧವರಿಗೆ ನಮಸ್ಕಾರಗಳು,**

ಶ್ರೀ ಶಂಕರಭಗವತ್ಪಾದ ಹಾಗೂ ಶ್ರೀ ರಾಮಾನುಜಾಚಾರ್ಯರ ಜಯಂತಿಯ ಸಂದರ್ಭದಲ್ಲಿ ಆಚಾರ್ಯದ್ವಯರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು.

ಮುಂದಿನ ಚುನಾವಣೆಯ ಸಂಧರ್ಭದಲ್ಲಿ ಪಕ್ಷಾತೀತವಾಗಿ ಎಲ್ಲಾ ಪಕ್ಷಗಳು ವಿಪ್ರ ಅಭ್ಯರ್ಥಿಗಳಿಗೆ ಚುನಾವಣಾ ಕಣದಲ್ಲಿ ಸ್ಪರ್ಧೆಗೆ ಪಾಲ್ಗೊಳ್ಳುವ ಅವಕಾಶವನ್ನು ಎಷ್ಟರಮಟ್ಟಿಗೆ ಕೊಟ್ಟಿವೆ ಎಂದು ಒಮ್ಮೆ ಪರಾಮರ್ಶನ ಮಾಡಬೇಕಿದೆ. ಈ ಅವಲೋಕನ ಕೇವಲ ವಿಧಾನಸಭೆಯ ಅಥವಾ ಲೋಕಸಭೆಯ ಚುನಾವಣೆಗಳಿಗೆ ಸೀಮಿತವಾಗಿರದೆ ಸ್ಥಳೀಯ ಚುನಾವಣೆಗಳಾದಿಯಾಗಿ ರಾಷ್ಟ್ರಮಟ್ಟದ ಚುನಾವಣೆಗಳಿಗೂ ಅನ್ವಯಿಸುತ್ತದೆ. ಉದಾಹರಣೆಗೆ ಕರ್ನಾಟಕದ ವಿಧಾನಸಭೆಯ ಚುನಾವಣೆಗಳಲ್ಲಿ ಕನಿಷ್ಠ 10 ಕ್ಷೇತ್ರಗಳಲ್ಲಿ ವಿಪ್ರಬಾಂಧವರು ಅಭ್ಯರ್ಥಿಯ ಸೋಲು ಗೆಲುವಿಗೆ ಪ್ರಮುಖ ಪಾತ್ರವಹಿಸುತ್ತಾರೆ. ಇನ್ನುಳಿದ 10 ರಿಂದ 15 ಕ್ಷೇತ್ರಗಳಲ್ಲಿ ವಿಪ್ರಮತಗಳು ನಿರ್ಣಾಯಕ ಆದರೆ ಪಕ್ಷಾತೀತವಾಗಿ ಸರ್ವಪಕ್ಷಗಳಲ್ಲೂ ವಿಪ್ರ ಅಭ್ಯರ್ಥಿಗಳ ಸಂಖ್ಯೆ ಒಂದಂಕೆ ಮೀರುವುದಿಲ್ಲ. ಈ ನಿಟ್ಟಿನಲ್ಲಿ ಎಲ್ಲಾ ಪಕ್ಷಗಳು ಒಮ್ಮೆ ವಿಪ್ರರಿಗೆ ಒದಗಿಸಿರುವ ಸೌಲಭ್ಯಗಳು ಹಾಗೂ ಅವಕಾಶಗಳ ಬಗ್ಗೆ ಪರಾಮರ್ಶನ ಮಾಡಬೇಕು. ಆದರೆ ಮಹಾನಗರಪಾಲಿಕೆ ಚುನಾವಣೆಯಲ್ಲಿ ಕೆಲವೊಂದು ಕ್ಷೇತ್ರಗಳಲ್ಲಿ ಬ್ರಾಹ್ಮಣರ ಸಂಖ್ಯೆ 30000 ದಿಂದ 50000 ಗಳಷ್ಟಿದ್ದರೂ ಒಬ್ಬೇ ಒಬ್ಬ ಬ್ರಾಹ್ಮಣ ಅಭ್ಯರ್ಥಿಗೆ ಅವಕಾಶ ಕಲ್ಪಿಸದಿರುವ ಹಲವು ಉದಾಹರಣೆಗಳಿವೆ. ಇಂತಹ ತಾರತಮ್ಯ ಕೊನೆಗಾಣುವುದು ಹೇಗೆ? ಇವೆಲ್ಲದಕ್ಕೂ ಪರಿಹಾರವೆಂದರೆ ಬ್ರಾಹ್ಮಣರೆಲ್ಲರೂ ಸಂಘಟಿತರಾಗಿ ತಮ್ಮ ಹಕ್ಕನ್ನು ಆಯಾ ವೇದಿಕೆಗಳಲ್ಲಿ ಸಂದರ್ಭಕ್ಕನುಗುಣವಾಗಿ ಕೇಳುವುದು, ಹೀಗೆ ನಮ್ಮ ಹಕ್ಕನ್ನು ನಾವು ಕೇಳಬೇಕೆಂದರೆ ಮೊದಲಿಗೆ ನಾವುಗಳು ಸಂಘಟಿತರಾಗುವುದು ಅವಶ್ಯಕ.

ಈ ನಿಟ್ಟಿನಲ್ಲಿ ಕಳೆದ ತಿಂಗಳು ನಡೆದ ವಿಶೇಷ ಸರ್ವಸದಸ್ಯರ ಸಭೆಯ ಕೆಲವು ನಿರ್ಣಯಗಳು ಹಾಗೂ ಆ ಸಭೆಯಲ್ಲಿ ಪಡೆದುಕೊಂಡ ಅನುಮೋದನೆಗಳು ಮುಂಬರುವ ದಿನಗಳಲ್ಲಿ ನಿರ್ಣಾಯಕ ಪಾತ್ರ ವಹಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

ಈ ಹಿಂದೆ 2021ರ ಅಧ್ಯಕ್ಷರ ಚುನಾವಣಾ ಸಂದರ್ಭದಲ್ಲಿ ನೀಡಲಾದ ಆಶ್ವಾಸನೆಗಳಂತೆ ಮಹಾಸಭಾ ಬೈಲಾ ತಿದ್ದುಪಡಿಯನ್ನು ಅತ್ಯಂತ ನುರಿತ ಹಾಗು ಕಾನೂನು ತಜ್ಞರ ತಂಡ ರಚಿಸಿ ಹಲವು ಬಾರಿ ಸಭೆ ಸೇರಿ ಚರ್ಚಿಸಿ ಸಿದ್ಧಪಡಿಸಿ ಮಂಡಿಸಿ ಅನುಮೋದನೆ ಪಡೆಯಲಾಯಿತು. ಬೈಲಾ ತಿದ್ದುಪಡಿಯ ಪ್ರಮುಖ ಅಂಶವೆಂದರೆ ಈ ಹಿಂದೆ ಇದ್ದ ಅಧ್ಯಕ್ಷರ ಅವಧಿಯನ್ನು ಮೂರು ವರುಷದಿಂದ ಐದು ವರುಷಗಳಿಗೆ ಹೆಚ್ಚಿಸಿರುವುದು (2024 ರ ನಂತರ ಜರಗುವ ಚುನಾವಣೆಯ ಅಧ್ಯಕ್ಷರ ಅವಧಿ ಐದು ವರ್ಷಗಳಾಗಿರುತ್ತದೆ) ಅಧ್ಯಕ್ಷರ ಚುನಾವಣೆಯ ಠೇವಣಿ ಮೊತ್ತ ಈಗಿರುವ 5000 ರೂಪಾಯಿಗಳಿಂದ 50000 ರೂಪಾಯಿಗಳವರೆಗೆ ಹೆಚ್ಚಿಸಿರುವುದು, ಹಾಗೂ ಜಿಲ್ಲಾ ಮಟ್ಟದಲ್ಲಿ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಮಹಾಸಭೆಗೆ ಕಳಿಸುವುದು. ಹೀಗೆ ಇಂತಹ ಹತ್ತು ಹಲವಾರು ಅಂಶಗಳನ್ನು ಬೈಲಾ ತಿದ್ದುಪಡಿ ಒಳಗೊಂಡಿದೆ.

ಇದೇ ಬರುವ 2023ರ ಮೇ 13 ಶನಿವಾರ ಮತ್ತು 14ರ ಭಾನುವಾರದಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಶುಕ್ಲಯಜುರ್ವೇದ ಅ ನ್ ಂ ಂ ್ ಾ ಯಿ ಂ ಗ್ ಳ್ ಸಂಯುಕ್ತಾಶ್ರಯದಲ್ಲಿ ಶ್ರೀ ಶೃಂಗೇರಿ ಶಂಕರಮಠದ ಆವರಣ, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಶುಕ್ಲಯಜುರ್ವೇದದ ಬೃಹತ್ಸಮಾವೇಶ ಆಯೋಜಿಸಲಾಗಿದೆ.

ಶೃಂಗೇರಿ ಶ್ರೀಮಠದ ಪ್ರಥಮ ಪೀಠಾಧಿಪತಿಗಳು ಹಾಗೂ ಶುಕ್ಲಯಜುರ್ವೇದ ಮಾರ್ಗಾನುವರ್ತಿಗಳಾದ ಶ್ರೀ ಸುರೇಶ್ವರಾಚಾರ್ಯರು ಹಾಗೂ ಶ್ರೀ ಶಾರದಾಂಬ ಅಮ್ಮನವರ ಸನ್ನಿಧಿಯಲ್ಲಿ, ಇಂತಹ ಮಹತ್ಕಾರ್ಯವನ್ನು ನಡೆಸಲು ಶೃಂಗೇರಿಯ ಈಗಿನ ಗುರುಗಳಾದ ಜಗದ್ಗುರು ಶ್ರೀ ಶ್ರೀವಿಧುಶೇಖರಭಾರತಿ ತೀರ್ಥ ಪಾದಂಗಳವರು ಅನುಮತಿಸಿ, ಆಶೀರ್ವದಿಸಿ, ಈ ಸಭೆಯನ್ನು ತಮ್ಮ ಆಶೀರ್ವಚನದೊಂದಿಗೆ ಉದ್ಘಾಟಿಸಲು ಅನುಗ್ರಹಿಸಿ ಒಪ್ಪಿರುತ್ತಾರೆ.

ಶುಕ್ಲಯಜುರ್ವೇದದ ಪರಂಪರೆ, ಮಹತ್ವ ಹಾಗೂ ಕೊಡುಗೆಯನ್ನು ಇಂದಿನ ಪೀಳಿಗೆಗೆ ತಿಳಿಸುವ ಉದ್ದೇಶದಿಂದ ನಡೆಸುತ್ತಿರುವ ಈ ಮಹಾಸಮ್ಮೇಳನದಲ್ಲಿ ಪ್ರತಿಯೊಬ್ಬರೂ ಪಾಲ್ಗೊಂಡು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತೀರೆಂದು ಭಾವಿಸಿದ್ದೇನೆ.

ಏಪ್ರೀಲ್ ತಿಂಗಳ 23 ರಿಂದ 29ರ ವರೆಗೆ ಶ್ರೀ ಕ್ಷೇತ್ರ ಹೊರನಾಡಿನಲ್ಲಿ ಧರ್ಮಕರ್ತರಾದ ಶ್ರೀ ಭೀಮೇಶ್ವರ ಜೋಷಿಯವರ ನೇತೃತ್ವದಲ್ಲಿ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ಪುನರ್ ಪ್ರತಿಷ್ಠಾಪನಾ ಸ್ವರ್ಣಮಹೋತ್ಸವ ಹಾಗೂ ಬ್ರಹ್ಮ ಕುಂಭಾಭೀಷೇಕ ಮಹೋತ್ಸವವು ನಡೆಯಲಿದ್ದು ಈ ಸಮಾರಂಭದಲ್ಲಿ ನಾಡಿನ ಎಲ್ಲ ವಿಪ್ರ ಬಾಂಧವರು ಭಾಗವಹಿಸಿ ದೇವಿಯ ಅನುಗ್ರಹಕ್ಕೆ ಪಾತ್ರರಾಗೋಣ.

ಮತ್ತೊಂದು ಸಂತಸದ ಸಂಗತಿ ಎಂದರೆ ಪದ್ಮನಾಭನಗರದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನಿವೇಶನದಲ್ಲಿ ಮಹಾಸಭೆಗೆ ತಿಂಗಳಿಗೆ 10 ಲಕ್ಷ ರೂಗಳ ಆದಾಯ ತರುವಂತಹ ಭವ್ಯ ವಾಣಿಜ್ಯ ಸಂಕೀರ್ಣ ಹಾಗೂ ಸಭಾ ಭವನ ನಿರ್ಮಿಸಲು ಇದೇ ಮೇ ತಿಂಗಳಲ್ಲಿ ಗುದ್ದಲಿ ಪೂಜೆ ನೆರವೇರಿಸಲು ನಿಶ್ಚಯಿಸಲಾಗಿದೆ. ಈ ಮಹತ್ತರ ಯೋಜನೆಗೆ ವಿಪ್ರಭಾಂಧವರು ಉಧಾರವಾಗಿ ಧನಸಹಾಯ ಮಾಡಿ ಯೋಜನೆ ಕಾರ್ಯಗತವಾಗಲು ನೇರವಾಗಬೇಕೆಂದು ವಿನಂತಿಸುತ್ತೇನೆ.

**ಅಶೋಕ ಹಾರನಹಳ್ಳಿ**
ಮಹಾಸಭಾಧ್ಯಕ್ಷರು

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ಕೇಂದ್ರ ಸರ್ಕಾರದ ಚುನಾವಣ ಅಯೋಗವು ಕರ್ನಾಟಕ ರಾಜ್ಯದ ಚುನಾವಣೆಯನ್ನು ಮುಂದಿನ ತಿಂಗಳು ನಡೆಸುವುದಾಗಿ ಘೋಷಿಸಿದೆ. ಎಲ್ಲ ರಾಜ್ಯ, ರಾಷ್ಟ್ರ ಪಕ್ಷಗಳು ಚುನಾವಣೆಗೆ ತಮ್ಮ ಪ್ರಬಲ ಸ್ಪರ್ಧಿಗಳನ್ನು ಘೋಷಿಸಿ, ಚುನಾವಣೆಯನ್ನು ಎದುರಿಸುವ ಸನ್ನಾಹ ನಡೆಸುತ್ತಿವೆ. ಪ್ರತಿ ಐದು ವರ್ಷಗಳಿಗೊಮ್ಮೆ ರಾಜ್ಯಗಳ, ಭಾರತೀಯ ಸಂಸತ್ತಿಗೆ ಸಾರ್ವತ್ರಿಕ ಚುನಾವಣೆಗಳು ನಡೆಯುತ್ತವೆ. ನಮಗೆ 1947ರಲ್ಲಿ ಸ್ವಾತಂತ್ರ್ಯ ಬಂದ ನಾಲ್ಕುವರೇ ವರ್ಷಗಳ ನಂತರ 1951–52ರಲ್ಲಿ ಮೊದಲ ಚುನಾವಣೆ ನಡೆಯಿತು. ಇತಿಹಾಸ ಪುಟಗಳನ್ನು ತಿರುವಿ ಹಾಕಿದಾಗ ನಮಗೆ ಸಿಗುವ ಮಹಿತಿ ಹೀಗಿದೆಃ ನಮ್ಮ ದೇಶದ ಮೊಟ್ಟಮೊದಲನೆ ಚುನಾವಣೆಯಲ್ಲಿ 17 ಕೋಟಿ 32 ಲಕ್ಷ ಮತದಾರರು ಮತ ಚಲಾಯಿಸಿದ್ದರು. ಅ ಚುನಾವಣೆ ಹಲವು ದಾಖಲೆಗಳನ್ನು ನಿರ್ಮಿಸಿತು. ಅವುಗಳಲ್ಲಿ ಬಹಳ ಪ್ರಮುಖವಾದ ದಾಖಲೆಯೆಂದರೆ, ಇಡೀ ಜಗತ್ತಿನಲ್ಲಿ ಪ್ರಜಾಪ್ರಭುತ್ವವನ್ನು ಉಳ್ಳ ಯಾವುದೇ ದೇಶದಲ್ಲಿ ಅಲ್ಲಿಯವರೆಗೆ ಅಷ್ಟೊಂದು ಸಂಖ್ಯೆಯ ಮತದಾರರು ಮತ ಚಲಾಯಿಸಿರಿರಲಿಲ್ಲ. ಹೀಗಾಗಿ ಭಾರತ ದೇಶವು ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ಹೊಂದಿದ ದೇಶ ಎಂಬ ಕೀರ್ತಿಗೆ ಪಾತ್ರವಾಗಿ, ಇಂದಿಗೂ ಅದು ಮುಂದುವರೆದುಕೊಂಡು ಬಂದಿದೆ. ಅಂದು ನಮ್ಮ ದೇಶದಲ್ಲಿ ಕೇವಲ 18.8% ಅಕ್ಷರಸ್ಥರಿದ್ದರೂ, ನಾಗರಿಕ ಪ್ರಜ್ಞೆ ಹೊಂದಿ, ಈ ಪ್ರಜಾಪ್ರಭುತ್ವ ಮತದಾನದಲ್ಲಿ ಪಾಲ್ಗೊಂಡಿದ್ದು ಹೆಚ್ಚುಗಾರಿಕೆ. ಅಂದು 27,527 ಮತಗಟ್ಟೆಗಳನ್ನು ಮಹಿಳೆಯರಿಗಾಗಿ ಮೀಸಲಾಗಿಟ್ಟಿತ್ತು. ಆದರೆ ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆ ನಡೆಯಲಿಲ್ಲ. ಕಾಶ್ಮೀರದಲ್ಲಿ 1967ರಲ್ಲಿ ಮೊಟ್ಟಮೊದಲ ಲೋಕಸಭೆ ಚುನಾವಣೆ ನಡೆಯಿತು.

ಕರ್ನಾಟಕದ ಈ ಚುನಾವಣೆ ಬಹಳ ಮಹತ್ವವೆನಿಸಲು ಕಾರಣ, ಕರ್ನಾಟಕದ ಬಹಳ ಸಂಖ್ಯೆ ಮತದಾರರು ಅಕ್ಷರಸ್ಥರಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಸಾಧಾರಣವಾಗಿ ಮತದಾನ ಚೆನ್ನಾಗಿ ನಡೆಯುತ್ತಿದೆ. ಪ್ರಾದೇಶಿಕ ಹಾಗೂ ರಾಷ್ಟ್ರೀಯ ಪಕ್ಷಗಳ ರಾಜಕೀಯ ನೇತಾರರು ಬಹಳಷ್ಟು ಬಾರಿ ತಿಳಿಸಿರುವಂತೆ ವಿದ್ಯಾವಂತ, ನಾಗರಿಕ ಪ್ರಜ್ಞೆ ಉಳ್ಳ ನಗರಗಳ ಮತದಾರರು ಮತಗಟ್ಟೆಗಳಿಗೆ ಬಂದು ಮತದಾನ ಮಾಡುತ್ತಿಲ್ಲ ಎಂದು, ಚುನಾವಣಾ ಆಯೋಗವು ಮತದಾರರಿಗೋಸ್ಕರ, ಹಿರಿಯ ನಾಗರಿಕರಿಗೆ ಹಲವು ಸೌಕರ್ಯಗಳನ್ನು ಮಾಡಿರುತ್ತದೆ. ಅವುಗಳ ಸಹಾಯ ಪಡೆದು ನಗರಗಳ ಎಲ್ಲ ಮತದಾರರೂ ಇದೊಂದು ಪವಿತ್ರ ಕರ್ತವ್ಯ ಎಂದು ಭಾವಿಸಿ, ಅಂದು ಪರುಸೊತ್ತು ಮಾಡಿಕೊಂಡು, ಮತಗಟ್ಟೆಗಳಿಗೆ ಬಂದು ಮತ ಹಾಕಬೇಕು. ಖಾಸಗೀ ಉದ್ಯಮಗಳೂ ಮತ ನೀಡಲು ನಮ್ಮ ಉದ್ಯೋಗಿಗಳಿಗೆ ಹಲವರು ಸೌಕರ್ಯ ಮಾಡಿಕೊಟ್ಟಿರುತ್ತವೆ.

ಕರ್ನಾಟಕದಲ್ಲಿ ಒಟ್ಟು 45 ಲಕ್ಷ ಬ್ರಾಹ್ಮಣರಿದ್ದಾರೆ ಎಂಬ ಸಾಧಾರಣ ಅಂಕಿ–ಅಂಶವಿದೆ. ಎಲ್ಲರೂ ಮತದಾನಕ್ಕೆ ಅರ್ಹತೆ ಪಡೆದು, ತಮ್ಮ ಕ್ಷೇತ್ರದ ಸೂಕ್ತ ಅಭ್ಯರ್ಥಿಗೆ ತಮ್ಮ ಬೆಂಬಲ ಸೂಚಿಸಬೇಕು. ಯಾವ, ವಿಧಾನಸಭಾ ಕ್ಷೇತ್ರದಲ್ಲಿ ವಿಪ್ರ ಮತದಾರರ ಸಂಖ್ಯೆ ಹೆಚ್ಚಿದೆಯೊ, ಅಲ್ಲಿ ಬ್ರಾಹ್ಮಣ ಅಭ್ಯರ್ಥಿಯನ್ನೇ ಹುರಿಯಾಳಾಗಿ ನಿಲ್ಲಿಸಬೇಕು ಎಂದು ಅಖಿಲ ಕರ್ನಾಟಕ ಮಹಾಸಭೆಯ ಪದಾಧಿಕಾರಿಗಳು ಪ್ರಾದೇಶಿಕ ಹಾಗೂ ರಾಷ್ಟ್ರೀಯ ಪಕ್ಷಗಳಿಗೆ ಒತ್ತಾಯ ಮಾಡಬೇಕು. ಯೋಗ್ಯ ಬ್ರಾಹ್ಮಣ ಅಭ್ಯರ್ಥಿ ಗೆಲ್ಲಲು ನಾವು ಮತಚಲಾಯಿಸಬೆಕು. ವಿಪ್ರರ ಶ್ರೆಯೋಭಿವೃದ್ಧಿಗೆ ಪ್ರಯತ್ನ ಮಾಡುವ, ವಿಪ್ರರ ಮುಖವಾಣಿಯಾಗುವ ಬ್ರಾಹ್ಮಣ ಜನನಾಯಕರಿಗೆ ವಿಪ್ರರು ಬೆಂಬಲ ಸೂಚಿಸಬೇಕು. ಬ್ರಾಹ್ಮಣರೆಲ್ಲರೂ, ಉಪಪಂಗಡಗಳ ಭೇದ ಮರೆತು ಒಗ್ಗಟ್ಟಾಗಿ ಮತದಾನ ಮಾಡಿ ಹೆಚ್ಚು ಸಂಖ್ಯೆಯ ಬ್ರಾಹ್ಮಣ ಜನನಾಯಕರು ಈ ಚುನಾವಣೆಯಲ್ಲಿ ಗೆಲ್ಲುವಂತೆ, ನಾವೆಲ್ಲರೂ ಸಹಕಾರ ನೀಡಬೇಕು. ಆಗಲೇ ತೆರಿಗೆ ನೀಡುತ್ತಿರುವ ಹೆಚ್ಚಿನ ಸಂಖ್ಯೆಯ ವಿಪ್ರರು ಸರ್ಕಾರಗಳಿಗೆ ತಮ್ಮ ಪ್ರತಿನಿಧಿಗಳ ಮೂಲಕ ಅಹವಾಲು ಸಲ್ಲಿಸಿ, ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವ ದೇಶವಾದ ನಮ್ಮಲ್ಲಿ ಕೇವಲ ಅಂಕಿ–ಅಂಶಗಳು, ಬಹುಮತದ ಮೇಲೆ ಪಕ್ಷಗಳು ಅಧಿಕಾರಕ್ಕೆ ಬಂದು ಸರ್ಕಾರ ನಡೆಸುವುದರಿಂದ ಬ್ರಾಹ್ಮಣ ಪಂಗಡವು ಒಂದು ಪ್ರಬಲ ಜನಾದೇಶವಾಗಿ ರೂಪುಗೊಳ್ಳಬೇಕು. ಅದಕ್ಕಾಗಿ ನಾವೆಲ್ಲರೂ ಸಂಘಟಿತರಾಗಿ ಮೇ ತಿಂಗಳಲ್ಲಿ ನಡೆಯುವ ರಾಜ್ಯ ಚುನಾವಣೆಯಲ್ಲಿ ಎಲ್ಲ ವಿಪ್ರರು ಭಾಗವಹಿಸಿ, ಮತ ಚಲಾಯಿಸಬೇಕಾಗಿ ಸವಿನಯ ಕೋರಿಕೆ.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**
– ಸಂಪಾದಕರು


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ 41ನೇ ಸರ್ವಸದಸ್ಯರ ಸಭೆ
# ಅಭಿವೃದ್ಧಿಯ ಹಾದಿಯಲ್ಲಿ ಮಹಾಸಭೆ



**ದಿನಾಂಕ 26–03–2023 ಬೆಳಿಗ್ಗೆ 11.30ಕ್ಕೆ ಜರುಗಿದ 41ನೇ ವಾರ್ಷಿಕ ಸರ್ವಸದಸ್ಯರ ಸಭೆಯು ಶ್ರೀ ಅಶೋಕ ಹಾರನಹಳ್ಳಿಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಸಾಂಗೋಪಾಂಗವಾಗಿ ನಡೆಯಿತು. ಸುಮಾರು 1800ಕ್ಕು ಹೆಚ್ಚು ಸದಸ್ಯರುಗಳು ಹಾಜರಿಂದ ಸರ್ವಸದಸ್ಯರ ಸಭೆಯಲ್ಲಿ ಶ್ರೀಯುತರಾದ ಹಾಲಿ ಶಾಸಕರಾದ ರವಿ ಸುಬ್ರಹ್ಮಣ್ಯ, ವಿಧಾನ ಪರಿಷ್ ಸದಸ್ಯರಾದ ಯು.ಬಿ. ವೆಂಕಟೇಶ್‌ರವರು ಹಾಗೂ ಮಹಾಸಭೆಯ ಉಪಾಧ್ಯಕ್ಷರುಗಳು, ಜಂಟಿ ಕಾರ್ಯದರ್ಶಿಗಳು ವಿವಿಧ ಸಮಿತಿಗಳ ಸಂಚಾಲಕರು, ಪಧಾದಿಕಾರಿಗಳು ಹಾಗೂ ಕೇಂದ್ರ ಕಾರ್ಯಕಾರಿಣಿ ಸದಸ್ಯರುಗಳು ಭಾಗವಹಿಸಿದ್ದರು. ಪ್ರಾರ್ಥನೆ–ವೇದಘೋಷಗಳ ನಂತರ ಪ್ರಧನಾ ಕರ್ಯಾದರ್ಶಿಗಳಾದ ಶ್ರೀ ಎಸ್. ಶ್ರೀಧರ ಮೂರ್ತಿಯವರು ಸ್ವಾಗತ ಭಾಷಣದೊಂದಿಗೆ ಸಭೆ ಆರಂಭಗೊಂಡಿತು. ಖಜಾಂಚಿಗಳಾದ ಶ್ರೀ ವಿ.ಎಸ್. ನಾಯ್ಕ್‌ರವರು ಲೆಕ್ಕಪತ್ರ ಮಂಡನೆ ಮಾಡಿದರು. ಸರ್ವಸದಸ್ಯರ ನಿಯಮಾವಳಿಗಳಂತೆ ಸಭೆಯ ಸೂಚನ ಪ್ರಕಟಣೆಯ ದಾಖಲು, ಹಿಂದಿನ ಸರ್ವಸದಸ್ಯರ ನಡಾವಳಿಯನ್ನು ವರದಿಯ ಮಂಡನೆ ಮತ್ತು ಅನುಮೋದನೆ, 2021–22ರ ಆಡಿಟ್ ಆದ ಲೆಕ್ಕಪತ್ರಗಳ ಅನುಮೋದನೆ, 2023–24ನೇ ಮುಂಗಡ ಪತ್ರ–ಅಂದಾಜು ಆಯವ್ಯ ಪತ್ರದ ಮಂಡನೆ ಅನುಮೋದನೆ ಮೊದಲಾದವುಗಳು ಸಭೆಯ ನಡಾವಳಿಗಳ ಪ್ರಕಾರ ನಡೆಯಿತು. 2023–24ನೇ ಸಾಲಿನ ಲೆಕ್ಕಪರಿಶೋಧಕರನ್ನಾಗಿ ಮೆ॥ ಸಿ.ಜಿ.ಎಸ್. ಅಂಡ್ ಕಂ., ಯ ಶ್ರೀ ನಾಗರಾಜ್ ಭಟ್ ರವನ್ನು ನೇಮಕ ಮಾಡಲು ಸಭೆಯು ಅನುಮೋದಿಸಿತು. ಕೊನೆಯಲ್ಲಿ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕಹಾರನಹಳ್ಳಿಯವರು ಸರ್ವ ಸದಸ್ಯರನ್ನು ಉದ್ಧೇಶಿಸಿ ಕಳೆದ ಒಂದು ವರ್ಷದಲ್ಲಿ ಮಹಾಸಭೆಯಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳನ್ನು ಅಂಕಿ–ಅಂಶಗಳ ಸಹಿತ ಸಭೆಯ ಮುಂದೆ ಮಂಡಿಸಿದರು.**

ಕೋವಿಡ್ 19 ಹಾಗೂ ಇತರ ಕಾರಣಗಳಿಂದ ಮಹಾಸಭೆಯು ಬಹಳ ಸಂಕಷ್ಟದಲ್ಲಿತ್ತು. ಕಳೆದ ಎರಡು ವರ್ಷಗಳಲ್ಲಿ ಮಹಾಸಭೆಯ ಎಲ್ಲಾ ಕಾರ್ಯಗಳು ಸ್ಥಗಿತಗೊಂಡಿತ್ತು. ಶ್ರೀ ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿರಿಸಿದ 1.00 ಕೋಟಿ ರೂ. ಗಳು ನಷ್ಟವಾಗಿತ್ತು. ಇಂತಹ ಸನ್ನಿವೇಶದಲ್ಲಿ ಹಿಂದಿನ ಅಧ್ಯಕ್ಷರ ರಾಜೀನಾಮೆಯಿಂದ, ಹಂಗಾಮಿ ಅಧ್ಯಕ್ಷನಾಗಿ ಮಹಾಸಭಾ ಜವಾಬ್ದಾರಿಯನ್ನು ಎಲ್ಲರ ಒತ್ತಾಸೆಯಿಂದ ವಹಿಸಿಕೊಳ್ಳಬೇಕಾಯಿತು. ಗಾಯತ್ರಿ ಭವನದಲ್ಲಿ 3–4ನೇ ಅಂತಸ್ತಿನ ಕಾಮಗಾರಿಗಳು ಅಪೂರ್ಣವಾಗಿತ್ತು. ವಿಪ್ರವಾಸಿನಿ ಮಹಿಳಾ ವಸತಿ ನಿಲಯದಲ್ಲಿ 20–25 ಜನ ಮಕ್ಕಳಿದ್ದು, ದುಸ್ಥಿತಿಯಲ್ಲಿತ್ತು. ಈ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಿದಾಗ ಹಂಗಾಮಿ ಅಧ್ಯಕ್ಷನಾಗಿದ್ದರಿಂದ ಯಾವುದೇ ಹೊಸ ಕಾರ್ಯ ಆರಂಭಿಸಲು ಅವಕಾಶವಿಲ್ಲವೆಂದು ಅಕ್ಷೇಪ ಎತ್ತಲಾಯಿತು. ಆದರೂ ಕೆಲವೊಂದು ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು. ಆದ್ದರಿಂದ ಅಧ್ಯಕ್ಷ ಪದವಿಗೆ ಚುನಾವಣೆಯನ್ನು ನಡೆಸಿ, ಸ್ವತಃ ಸ್ಪರ್ಧಿಸಿ, ಗೆದ್ದು ಬಂದ ನಂತರ ಒಂದು ವರ್ಷದ ಅವಧಿಯಲ್ಲಿ ಮಹಾಸಭೆಯನ್ನು ಬಲಗೊಳಿಸಲು ಹಾಗೂ ಸಂಘಟನೆಯನ್ನು ರಾಜ್ಯಾದ್ಯಂತ ವಿಸ್ತರಿಸಲು ತಾವು ಕೈಗೊಂಡ ಕಾರ್ಯಕ್ರಮಗಳನ್ನು ಅಂಕಿ–ಅಂಶಗಳ ಸಹಿತ ಸಭೆಯ ಮುಂದಿಟ್ಟರು. ತಾವು ಚುನಾವಣೆಯ ಸಂದರ್ಭದಲ್ಲಿ ನೀಡಿದ ವಾಗ್ದಾನದಂತೆ ಸುಮಾರು 50 ವರ್ಷಗಳ ಹಿಂದೆ ರಚಿಸಿದ ಮಹಾಸಭೆಯ ಬೈಲಾವನ್ನು ಇಂದಿನ ಸ್ಥಿತಿಗತಿಗೆ ಹೊಂದಿಕೆಯಾಗುವಂತೆ ಬದಲಾವಣೆ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಆರ್ಥಿಕ ದುರ್ಬಲರಿಗಾಗಿ ಮೀಸಲಾತಿ ಸೌಲಭ್ಯಕ್ಕಾಗಿ ನಡೆಸಬೇಕಾಗಿರುವ ಹೋರಾಟ, ಬ್ರಾಹ್ಮಣ ಸಮಾಜವನ್ನು ಇಂದಿನ ರಾಜಕೀಯ ಪಕ್ಷಗಳು ಸರ್ಕಾರಗಳು ಕಡೆಗಣಿಸುತ್ತಿರುವ ಹಾಗೂ ಸಮಾಜವನ್ನು ವಿನಾಕಾರಣ ದೂಷಿಸುತ್ತಿರುವ ಇಂತಹ ಸನ್ನಿವೇಶದಲ್ಲಿ ಬ್ರಾಹ್ಮಣ ಸಮಾಜವು ಸಂಕಷ್ಟ ಎದುರಿಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಸಮಾಜವು ವೈಯಕ್ತಿಕ ಪ್ರತಿಷ್ಠೆ, ಸ್ವಾರ್ಥತೆ ಬದಿಗೊತ್ತಿ, ಸರ್ವರೂ ಸಂಘಟನೆಯನ್ನು ಬಲಗೊಳಿಸಿ ಒಗ್ಗಟ್ಟು ಪ್ರದರ್ಶಿಸುವುದು ಇಂದಿನ ಅನಿವಾರ್ಯತೆಯಾಗಿದೆ ಎಂದರು.

# ಅಧ್ಯಕ್ಷರು ಒಂದು ವರ್ಷದಲ್ಲಿ ಸಂಘಟನೆಯನ್ನು ಬಲಗೊಳಿಸಲು ನಡೆಸಿದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಮುಖ ಅಂಶಗಳು

- **ಸದಸ್ಯತ್ವ :** 42 ಸಾವಿರದಿಂದ 57 ಸಾವಿರಕ್ಕೆ – ಸದಸ್ಯತ್ವಕ್ಕೆ ಶರವೇಗ
- **ಡಿಜಿಟಲೀಕರಣ :** ಮಹಾಸಭೆಯ ವೆಬ್‌ಸೈಟ್ ಹಾಗೂ ಇತರ ಸಾಮಾಜಿಕ ಜಾಲತಾಣಗಳ ಮೂಲಕ ಮಹಾಸಭೆ ಹಾಗೂ ಸಮುದಾಯಕ್ಕೆ ಸಂಬಂಧಿಸಿದ ಎಲ್ಲ ಚಟುವಟಿಕೆ ಮತ್ತು ಉಪಯುಕ್ತ ಮಾಹಿತಿ ನೀಡಲು ಡಿಜಿಟಲೀಕರಣ– ತಂತ್ರಜ್ಞರ ತಂಡದ ರಚನೆ.
- **ನಿಶ್ಚಿತ ಠೇವಣಿ :** 4 ಕೋಟಿ 51 ಲಕ್ಷದಿಂದ ಗರಿಷ್ಠ 6 ಕೋಟಿಗೆ ಸನಿಹಕ್ಕೆ
- **ನವೀಕರಣ ಕಾರ್ಯ :** ಗಾಯತ್ರಿ ಭವನದಲ್ಲಿ ನೂತನ ಲಿಫ್ಟ್, 3–4ನೇ ಮಹಡಿ ವಿಸ್ತರಣೆ ಮತ್ತು ವಿದ್ಯಾವಾಸಿನಿ ವಸತಿ ನಿಲಯ ನವೀಕರಣ.
- **ಮಾದರಿ ವಸತಿ ನಿಲಯ :** ಸಕಲ ಸೌಲಭ್ಯಗಳನ್ನು ಕಲ್ಪಿಸಿ ಮಾದರಿ ವಸತಿ ನಿಲಯವಾಗಿ ವಿಪ್ರ ಮಹಿಳಾ ವಸತಿ ನಿಲಯದ ಅಭಿವೃದ್ಧಿ.
- **ಕಾರ್ಯಚಟುವಟಿಕೆ ವಿಸ್ತರಣೆ :** ರಾಜ್ಯಾದ್ಯಂತ ಹಲವು ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಮಹಾಸಭಾದ ಶಾಖೆಗಳ ರಚನೆ ಹಾಗೂ ಮಹಿಳಾ ಮತ್ತು ಯುವ ವೇದಿಕೆಗಳ ಸ್ಥಾಪನೆ, ಬೆಂಗಳೂರಿನಿಂದ ಕಾರ್ಯಚಟುವಟಿಕೆಗಳ ರಾಜ್ಯಾದ್ಯಂತ ವಿಸ್ತರಣೆ.
- **ಸದ್ಭಾವನಾ ಯಾತ್ರೆ :** ಸ್ವಾತಂತ್ರೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ರಾಷ್ಟ್ರೀಯ ಏಕತೆ ಮತ್ತು ಭಾವೈಕ್ಯತೆಯನ್ನು ಸಾರುವ ಪಕ್ಷಾತೀತ ಮತ್ತು ಜಾತ್ಯತೀತ ವಿಧುರಾಶ್ವತ್ಥಕ್ಕೆ ಬೃಹತ್ ಪಾದಯಾತ್ರೆ ಆಯೋಜನೆ.
- ವೈದ್ಯಕೀಯ ವಿಭಾಗ, ಕಲಾ ಮತ್ತು ಸಾಂಸ್ಕೃತಿಕ ವೇದಿಕೆ, ಮಹಿಳಾ ಮತ್ತು ಯುವ ಘಟಕಗಳ ಪ್ರಾರಂಭೋತ್ಸವವನ್ನು ವಿಜೃಂಭಣೆಯಿಂದ ನಡೆಸಿ ಆಯ ವಿಭಾಗಗಳ ಕಾರ್ಯಚಟುವಟಿಕೆಗಳಿಗೆ ವಿದ್ಯುಕ್ತ ಚಾಲನೆ.
- ಚಾಮರಾಜನಗರ, ಹಾಸನ, ಬೇಲೂರು, ಶಿರಸಿ, ಮಂಗಳೂರು, ಉಡುಪಿ, ಗದಗ, ರಾಯಚೂರ್, ಚಿಂತಾಮಣಿ, ಕೋಲಾರ, ಮೈಸೂರು, ಶಿವಮೊಗ್ಗ, ಬೆಳಗಾವಿ, ಹುಬ್ಬಳ್ಳಿ, ಹಾವೇರಿ ಮುಂತಾದ ಹಲವು ಸ್ಥಳಗಳಲ್ಲಿ ಮಹಾಸಭಾದ ಘಟಕ ಹಾಗೂ ಸ್ಥಳೀಯ ಬ್ರಾಹ್ಮಣರ ಸಂಘಟನೆಗಳ ಹಲವು ವಿಪ್ರ ಸಮಾವೇಶ, ಪ್ರತಿಭಾ ಪುರಸ್ಕಾರ, ಗುರುವರ್ಯರ ಆಶೀರ್ವಾದ : ಸುಮಾರು 40ಕ್ಕೂ ಹೆಚ್ಚು ತ್ರಿಮತಸ್ಥ ಮಠಾಧೀಶರು ಹಾಗೂ ಯತಿಗಳಿಗೆ ಚಾತುರ್ಮಾಸದಲ್ಲಿ ಮಹಾಸಭಾದಿಂದ ಭಿಕ್ಷಾಸಮರ್ಪಣೆ.
- **ಅಧ್ಯಕ್ಷರ ಪ್ರಯತ್ನದ ಫಲವಾಗಿ ಶ್ರೀಮಠಗಳಿಗೆ ಸರ್ಕಾರದಿಂದ ತಲಾ ಒಂದು ಕೋಟಿ ಅನುದಾನ :** ಶಿವಗಂಗಾ ಶಾಖಾ ಮಠ, ಎಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠ, ಸೊಸಲೆ ವ್ಯಾಸರಾಜ ಮಠ, ಭಾರತಿ ಯೋಗಧಾಮ, ಮೈಸೂರು.
- ಜ್ಞಾನವಾಹಿನಿ–ಯೂಟೂಬ್ ಚಾನೆಲ್ ಆರಂಭ.
- ಕಾರ್ಯಕಾರಿಣಿ ಹಾಗೂ ಪದಾಧಿಕಾರಿಗಳ ಸಭೆಯನ್ನು ಬೆಂಗಳೂರಿನಿಂದ ಹೊರಗಡೆ ನಡೆಸಿ ಆಡಳಿತ ವಿಕೇಂದ್ರಿಕರಣಕ್ಕೆ ಚಾಲನೆ.
- **ವೈದ್ಯಕೀಯ ನರವು :** ನಾಡಿನ ಪ್ರಸಿದ್ಧ ವೈದ್ಯಕೀಯ ಸಂಸ್ಥೆಗಳನ್ನು ಸಂಪರ್ಕಿಸಿ ಬಡ ವಿಪ್ರರಿಗೆ ರಿಯಾಯಿತಿ ದರದಲ್ಲಿ ವೈದ್ಯಕೀಯ ನೆರವು ಹಾಗೂ ಆರೋಗ್ಯ ವಿಮೆ ಸೌಲಭ್ಯ ಕಲ್ಪಿಸಲು ವಿಪ್ರ ವೈದ್ಯ ವೇದಿಕೆಯ ಸಹಯೋಗದೊಂದಿಗೆ ವೈದ್ಯಕೀಯ ಸಹಾಯವಾಣಿ ಸ್ಥಾಪನೆಗೆ ಕ್ರಮ.
- ಸಂಕಷ್ಟದಲ್ಲಿರುವ ಬಡ ಅಂಗವಿಕಲ ಹಾಗೂ ವೃದ್ಧರಿಗೆ ರೂ.500ಗಳ ಮಾಸಾಶನ ನೀಡುವ ಯೋಜನೆ ಆರಂಭ.
- ಪ್ರತಿಭಾ ಪುರಸ್ಕಾರ ವಿದ್ಯಾರ್ಥಿ ವೇತನ: 98% ಶೇ. ಹೆಚ್ಚು ಅಂಕಪಡೆದ 500ಕ್ಕೂಈ ಹೆಚ್ಚು ವಿಪ್ರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಯೋಜನೆಗೆ ಚಾಲನೆ.
- ತಾಲ್ಲೂಕು ಹಾಗೂ ಜಿಲ್ಲಾಮಟ್ಟದ ವಿವಿಧ ವಿಪ್ರ ಪಂಗಡಗಳ ಹಾಗೂ ಸಂಘಗಳ ಪದಾಧಿಕಾರಿಗಳ ಸಮಾವೇಶ ಮತ್ತು ಆಡಳಿತ, ವ್ಯಾಪಾರ–ಉದ್ಯಮ, ಕೈಗಾರಿಕೆ ಮತ್ತು ಪರಿಣಿತ ವ್ಯಕ್ತಿಪರರ ಗಣ್ಯಾತಿಗಣ್ಯ ವಿಪ್ರ ಸಾಧಕರ ಸಭೆಯನ್ನು ಆಯೋಜಿಸಿ ಸಮಾಜದ ಬಲವರ್ಧನೆಗೆ ಹಾಗೂ ಸಮುದಾಯದ ಬಡವರಿಗೆ ಶಿಕ್ಷಣ, ಉದ್ಯೋಗ, ಆರೋಗ್ಯ ಮತ್ತು ಸನಾತನ ಧರ್ಮರಕ್ಷಣೆ ವಿಷಯಗಳ ಆದ್ಯತಾವಲಯಗಳಾಗಿ ಪರಿಗಣಿಸಿ ಕಾರ್ಯಯೋಜನೆಗಳ ಆರಂಭಿಸಲು ಸಮಾಲೋಚನಾ ಸಭೆ ಆಯೋಜನೆ ಹಾಗೂ ಕಾರ್ಯನಿರ್ವಹಣಾ ತಂಡ ರಚನೆಗೆ ಯೋಜನೆ.
- **ಕರ್ನಾಟಕದಾದ್ಯಂತ ಪ್ರವಾಸ :** ಅಧ್ಯಕ್ಷರಿಂದ ಕರ್ನಾಟಕದಾದ್ಯಂತ ಸರಿಸಮಾರು 180 ದಿನಗಳ ಕಾಲ ಅಂದಾಜು 40,000 ಹೆಚ್ಚು ಕಿ.ಮೀ. ಸಂಘಟನೆಗಾಗಿ ಪ್ರವಾಸ.

ಸಪ್ತರ್ಷಿ ಫೌಂಡೇಷನ್‌ನ ವಿದ್ಯಾವಾಸಿನಿ ವಿಪ್ರ ಮಹಿಳಾ ವಸತಿ ನಿಲಯದ ಸ್ಥಾಪನೆಗೆ ಕಾರಣರಾದ ದಿ॥ ಬಿ.ಎನ್.ವಿ. ಸುಬ್ರಹ್ಮಣ್ಯರವರ ಕೊಡುಗೆಯನ್ನು ಅಜರಾಮರಗೊಳಿಸಲು ಅವರ ಪುತ್ಥಳಿಯನ್ನು ವಸತಿ ನಿಲಯದಲ್ಲಿ ಇತ್ತೀಚಿಗೆ ಅನಾವರಣಗೊಳಿಸಲಾಗಿದೆ. ಸಪ್ತರ್ಷಿ ಫೌಂಡೇಷನ್‌ಗೆ ಸೇರಿದ ನಿವೇಶನದಲ್ಲಿ ಬೃಹತ್ ವಾಣಿಜ್ಯ ಕಟ್ಟಡವೊಂದನ್ನು ನಿರ್ಮಿಸಿ ಪ್ರತಿ ತಿಂಗಳೂ ಮಹಾ ಸಭೆಗೆ 10.00 ಲಕ್ಷ ರೂ.ಗಳ ಆದಾಯ ಬರುವ ಹಾಗೆ ಮಾಡುವ ಯೋಜನೆ ಇದೆ ಎಂದು ತಿಳಿಸಿದರು. ಕೆಲವೇ ದಿನಗಳಲ್ಲಿ ಮಹಾಸಭಾ ಠೇವಣಿಯನ್ನು ರೂ.10.00 ಕೋಟಿಗೆ ಹೆಚ್ಚಿಸುವುದು, ಮಾಜಿ ಐಎಎಸ್., ಕೆಎಎಸ್., ಐಪಿಎಸ್ ಅಧಿಕಾರಿಗಳು, ಉದ್ಯೋಗದಾತರು, ವ್ಯಾಪಾರಸ್ಥರು, ಉದ್ಯಮಿಗಳ ಇವರೆಲ್ಲರ ಸಭೆ ಏರ್ಪಡಿಸಿ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ಸಂಗ್ರಹಿಸುವುದು ಈಗಿನ ಮುಖ್ಯ ಕೆಲಸವಾಗಿದೆ. ಪೂರ್ಣವಾಗಿ ಸ್ಥಗಿತಗೊಂಡಿದ್ದ ಗಾಯತ್ರಿ ಭವನದ ಆದಾಯವು ನವೀಕರಣಗೊಂಡ ನಂತರ ವಾರ್ಷಿಕ 20.00 ಲಕ್ಷಕ್ಕೂ ರೂ.ಗಳು ಹೆಚ್ಚಿನ ಆದಾಯ ಬರುತ್ತಿರುವುದು ಸಂತಸದ ಸಂಗತಿ ಈ ಸಾಲಿನಲ್ಲಿ ನಡೆಸಿದ ಮಹಾಸಭೆಯಿಂದ ಎಲ್ಲ ಕಾರ್ಯಕ್ರಮಗಳಿಗೂ ಪ್ರಾಯೋಜಕರ ಸಹಾಯದಿಂದ ನಡೆದಿದ್ದು, ಮಹಾಸಭೆಯಿಂದ ಹಣವನ್ನು ಖರ್ಚು ಮಾಡಿಲ್ಲ. ಹಿಂದಿನ ಆಡಳಿತ ಮಂಡಳಿಯಿಂದ ದುರಪಯೋಗವಾದ ಸದಸ್ಯರ ಸದಸ್ಯತ್ವ ಹಣವನ್ನು ಪುನಃ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಸುರಕ್ಷಿತವಾಗಿ ಠೇವಣಿ ಇರಿಸಲಾಗಿದೆ ಎಂದು ತಿಳಿಸಿದಾಗ ಸಭೆ ಕರತಾಡನದ ಮೂಲಕ ಮೆಚ್ಚುಗೆ ಸೂಚಿಸಿತು.

ಹಾವೇರಿಯಲ್ಲಿ ರೂ.1.00 ಕೋಟಿ ಬೆಲೆಯ ನಿವೇಶನವು ಮಹಾಸಭಾ ಕಛೇರಿಗಾಗಿ ರೂ.15.00 ಲಕ್ಷದಲ್ಲಿ ಲಭ್ಯವಾಗಿದೆ ಎಂದು ಅಧ್ಯಕ್ಷರು ತಿಳಿಸಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಶುಕ್ಲಯಜುರ್ವೇದ ಸಂಘಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಮೇ ತಿಂಗಳಿನಲ್ಲಿ ರಾಜ್ಯಮಟ್ಟದ ಶುಕ್ಲಯಜುರ್ವೇದ ಸಮಾವೇಶವು ಶೃಂಗೇರಿಯಲ್ಲಿ ಪರಮಪೂಜ್ಯ ಜಗದ್ಗುರುದ್ವಯರ ಕೃಪಾಶೀರ್ವಾದದಿಂದ ನಡೆಯಲಿದೆ ಹಾಗೂ ಮಹಾಸಭೆಗೆ 50 ವರ್ಷ ತುಂಬಿದ ನೆನಪಿಗಾಗಿ **"ಸುವರ್ಣ ಮಹೋತ್ಸವ"** ಸಮಾರಂಭ 2024ರಲ್ಲಿ ನಡೆಯಲಿದೆ ಎಂದೂ ಘೋಷಿಸಿದರು.

ಮಹಾಸಭೆಯ ಉದ್ದೇಶಿತ ಯೋಜನೆಗಳು ಸಮರ್ಪಕವಾಗಿ ಜಾರಿಗೊಳಿಸುವಂತಾಗಲು 19 ಉಪಸಮಿತಿಗಳನ್ನು ರಚಿಸಲಾಗಿದೆ. ಈಗಾಗಲೇ ಆರೋಗ್ಯ ಮತ್ತು ವೈದ್ಯಕೀಯ ಸಮಿತಿ ವಿಭಾಗ, ಕಲಾ ಮತ್ತು ಸಾಂಸ್ಕೃತಿಕ ವೇದಿಕೆ ವಿಭಾಗ, ಪ್ರತಿಭಾ ಪುರಸ್ಕಾರ ಸಮಿತಿ, ಮಹಿಳಾ ಮತ್ತು ಯುವ ಘಟಕಗಳು ಆರಂಭಗೊಂಡು, ಸಮಿತಿಗಳ ಸಂಚಾಲಕರು ಹಾಗೂ ಸದಸ್ಯರ ಸಮನ್ವಯತೆಯಿಂದ ಕಾರ್ಯಚಟುವಟಿಕೆಗಳು ವಿದ್ಯುಕ್ತವಾಗಿ ಚಾಲನೆಗೊಂಡು ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದು ತಿಳಿಸಿದರು.

ಕೇವಲ ಒಂದು ವರ್ಷದ ಅವಧಿಯಲ್ಲಿ ಈ ಬಗೆಯ ಅಭಿವೃದ್ಧಿ ಕಾರ್ಯಗಳು ತಮ್ಮೆಲ್ಲರ ಬೆಂಬಲದಿಂದ ಸಾಧ್ಯವಾಯಿತೆಂದು



ತಮ್ಮೊಡನೆ ಕೈಜೋಡಿಸಿದ ಎಲ್ಲಾ ಪದಾಧಿಕಾರಿಗಳಿಗೂ ಹಾಗೂ ಸದಸ್ಯರಿಗೂ ಕೃತಜ್ಞತೆ ಸಲ್ಲಿಸಿದರು.

**ಮಹಾಸಭೆಯು ಈ ಒಂದು ವರ್ಷದಲ್ಲಿ ಹಮ್ಮಿಕೊಂಡ ಕಾರ್ಯಕ್ರಮ, ಸಭೆ-ಸಮಾರಂಭ ಹಾಗೂ ಅಭಿವೃದ್ಧಿಯ ಕಾರ್ಯಗಳು ಮಹಾಸಭೆಯ ಇತಿಹಾಸದಲ್ಲಿ ಇಷ್ಟು ಅತ್ಯಲ್ಪ ಕಾಲದಲ್ಲಿ ಅದ್ಭುತ ಸಾಧನೆಗೈದ ಅಧ್ಯಕ್ಷರನ್ನು ಸಭಾಸದಸ್ಯರು ದೀರ್ಘ ಕರತಾಡನದ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದಿಸಿದರು.**

ನಂತರ ಇಂದು ಬೆಳಿಗ್ಗೆ ಜರುಗಿದ ವಿಶೇಷ ಸರ್ವಸದಸ್ಯರ ಸಭೆಯು ಅಂಗೀಕರಿಸಿದ ಮಹಾಸಭೆಯ ಬೈಲಾ ತಿದ್ದುಪಡಿ ಮಂಡನೆಯನ್ನು ದೃಢೀಕರಿಸಲಾಯಿತು.

ಸುಮಾರು 1,800 ಹೆಚ್ಚು ಸದಸ್ಯರು ಭಾಗವಹಿಸಿದ ಸರ್ವಸದಸ್ಯರ ಸಭೆಯು ಎಲ್ಲಾ ದೃಷ್ಟಿಯಿಂದ ಇತ್ತೀಚಿನ ದಿನಗಳಲ್ಲಿ ಐತಿಹಾಸಿಕವೇಯಾಗಿದೆ. ಸಭೆಯನ್ನು ಹಾಗೂ ಊಟೋಪಚಾರಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿದ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಶ್ರೀಧರಮೂರ್ತಿ, ಮುಖ್ಯ ವ್ಯವಸ್ಥಾಪಕರಾದ ಶ್ರೀ ಎಂ.ವಿ. ನಾಗರಾಜ್ ಹಾಗೂ ಸಿಬ್ಬಂದಿ ವರ್ಗದವರು ನಿಜಕ್ಕೂ ಅಭಿನಂದನಾರ್ಹರು.

41ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಿರೂಪಣೆಯನ್ನು ಮಹಾಸಭೆಯ ಜಂಟಿ ಕಾರ್ಯದರ್ಶಿ ಶ್ರೀ ಕಾರ್ತಿಕ್ ಎಸ್. ಬಾಪಟ್‌ರವರು ಅಚ್ಚುಕಟ್ಟಾಗಿ ನಿರೂಪಿಸಿದರು.



# ಐತಿಹಾಸಿಕ ವಿಶೇಷ ಸರ್ವಸದಸ್ಯರ ಸಭೆ

## ದಿನಾಂಕ 26.03.2023ರಂದು ಬೆಳಿಗ್ಗೆ 9.30ಕ್ಕೆ ಆಚಾರ್ಯ ಪಾಠಶಾಲಾ ಕಾಲೇಜು ಸಭಾಂಗಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.) ವಿಶೇಷ ಸರ್ವಸದಸ್ಯರ ಸಭೆಯ ಮುಖ್ಯಾಂಶಗಳು



ವಿಶೇಷ ಸರ್ವಸದಸ್ಯರ ಸಭೆಯು ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರ್ಥನೆಯೊಂದಿಗೆ ಸಭೆಯು ಪ್ರಾರಂಭವಾಯಿತು.

ಶ್ರೀ ಎಸ್. ಶ್ರೀಧರಮೂರ್ತಿ, ಮಹಾಸಭಾ ಪ್ರಧಾನ ಕಾರ್ಯದರ್ಶಿಗಳು ವಿಶೇಷ ಸರ್ವಸದಸ್ಯರ ಸಭೆಯ ನೋಟೀಸ್ ಓದಿ ದಾಖಲಿಸಿದರು.

ತದನಂತರದಲ್ಲಿ ಮಹಾಸಭಾ ಖಜಾಂಚಿಗಳಾದ ಶ್ರೀ ವೆಂಕಟೇಶ್ ಎಸ್. ನಾಯಕ್‌ರವರು ಬೈಲಾ ತಿದ್ದುಪಡಿ ಸಮಿತಿ ಸಿದ್ಧ ಪಡಿಸಿದ ಬೈಲಾವನ್ನು ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದರು.

ಕೆಲವು ತಿದ್ದುಪಡಿಗೆ ಕೆಲವು ಸದಸ್ಯರುಗಳು ತಮ್ಮ ಆಕ್ಷೇಪ ವ್ಯಕ್ತಪಡಿಸಿ, ಅಧ್ಯಕ್ಷರ ಅಧಿಕಾರ ಅವಧಿಯು ಈ ಹಿಂದಿನಂತೆ 3 ವರ್ಷಕ್ಕೆ ಸೀಮಿತಗೊಳಿಸಬೇಕೆಂದು ಆಗ್ರಹಿಸಿದರು. ಅಧ್ಯಕ್ಷ ಪದವಿ ಚುನಾವಣಾ ಠೇವಣಿ ಮೊತ್ತವನ್ನು 1,00,000/=ಕ್ಕೆ ಏರಿಸಿರುವುದನ್ನು ರದ್ದುಪಡಿಸಿ, ಹಿಂದಿನಂತೆ ರೂ.5,000/=ಗಳನ್ನೇ ನಿಗದಿಪಡಿಸಬೇಕೆಂದು ಒತ್ತಾಯ ಮಾಡಿದರು. ಕೆಲವು ಸದಸ್ಯರು ಕಾರ್ಯಕಾರಿಣಿ ಸಮಿತಿ ಸದಸ್ಯರ ಮಿತಿಯನ್ನು 250ಕ್ಕೆ ಹೆಚ್ಚಿಸುವಂತೆ ಸಲಹೆ ನೀಡಿದರು.

ರಾಜ್ಯದ ನುರಿತ ಕಾನೂನು ಹಾಗೂ ಸಹಕಾರಿ ಕ್ಷೇತ್ರದ ತಜ್ಞರನ್ನೊಳಗೊಂಡು ರಚಿತವಾದ ಬೈಲಾ ತಿದ್ದುಪಡಿ ಸಮಿತಿಯು ಸೂಚಿಸಿದ ತಿದ್ದುಪಡಿಗಳ ಕುರಿತು ಹಲವಾರು ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಒಟ್ಟಾರೆ ಕರಡು ಪ್ರತಿಯಲ್ಲಿ ಅಳವಡಿಸಿರುವ ಹಲವು ವಿಷಯಗಳನ್ನು ವಿವಿಧ ಅಧ್ಯಾಯಗಳಲ್ಲಿ ಪ್ರಸ್ತಾಪ ಮಾಡಿರುವುದು ಸಮಂಜಸವಾಗಿದೆ ಹಾಗೂ ನಿಯಮಾವಳಿಗಳಿಗೆ ಅನುಸಾರವಾಗಿದೆ ಎಂದು ಅಭಿಪ್ರಾಯ ವ್ಯಕ್ತವಾಯಿತು.

ಸದಸ್ಯರುಗಳ ಆಕ್ಷೇಪ ಹಾಗೂ ಸಂಶಯಗಳಿಗೆ ವಿವರಣೆ ನೀಡುತ್ತ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ತಾವು ಚುನಾವಣೆಯ ಸಂದರ್ಭದಲ್ಲಿ ನೀಡಿದ ವಾಗ್ದಾನದಂತೆ ಸುಮಾರು 50 ವರ್ಷಗಳ ಹಿಂದೆ ರಚಿಸಿದ ಮಹಾಸಭೆಯ ಬೈಲಾವನ್ನು ಇಂದಿನ ಸ್ಥಿತಿಗತಿಗೆ ಹೊಂದಿಕೆಯಾಗುವಂತೆ ಬದಲಾವಣೆ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ. ಈ ಬೈಲಾ ತಿದ್ದುಪಡಿಗೆ ಸದಸ್ಯರು ಎತ್ತಿದ ಆಕ್ಷೇಪಗಳಿಗೆ ಸಮರ್ಪಕವಾಗಿ ಉತ್ತರ ನೀಡಿ, ತಿದ್ದುಪಡಿಯನ್ನು ಸಮರ್ಥಿಸಿ, ತಿದ್ದುಪಡಿಯ ಅನಿವಾರ್ಯತೆ ಮತ್ತು ಅನುಕೂಲತೆಯನ್ನು ಸದಸ್ಯರಿಗೆ ಮನವರಿಕೆ ಮಾಡಿಕೊಳ್ಳಲು ಯಶಸ್ವಿಯಾದರು. ಅಧ್ಯಕ್ಷರ ಅಧಿಕಾರಾವಧಿಯನ್ನು 5 ವರ್ಷಕ್ಕೆ ಏರಿಸಿರುವುದಕ್ಕೆ ಕಾರಣವನ್ನು ನೀಡುತ್ತಾ ಚುನಾವಣೆಗೆ 90 ರಿಂದ 1 ಕೋಟಿಯವರೆಗೆ ಖರ್ಚು ಬರುವುದು. ಇದು ಮಹಾಸಭೆಗೆ ಅನಾವಶ್ಯಕ ಹೊರೆಯಾಗುತ್ತದೆ. ಆದ್ದರಿಂದ ಇಂದಿನ ಸಹಕಾರಿ ಮಾರ್ಗಸೂಚಿಯಂತೆ 5 ವರ್ಷ ಏರಿಸುವುದು ಸಮಂಜಸ ಎಂದರು. ಸದಸ್ಯರ ಅಪೇಕ್ಷೆಯ ಮೇರೆಗೆ ರಾಜ್ಯ ಕಾರ್ಯಕಾರಿಗಳ ಸದಸ್ಯರ ವತಿಯನ್ನು 250ಕ್ಕೆ ಹೆಚ್ಚಿಸುವುದಾಗಿಯೂ ತಿಳಿಸಿದರು. ಮಾನ್ಯ ಸದಸ್ಯರುಗಳು ಸೂಚಿಸಿದ ಕೆಲವೊಂದು ತಿದ್ದುಪಡಿಗಳನ್ನು ಅಂಗೀಕರಿಸಿ ಬೈಲಾ ತಿದ್ದುಪಡಿಯನ್ನು ಸಭೆಯು ಅನುಮೋದಿಸಿತು.



# "ಬ್ರಾಹ್ಮಣ ಸಂಘಟನ ಬಲಗೊಳಿಸಲು ಮಹಾಸಭೆಗೆ ಸದಸ್ಯರಾಗಿ"

**– ಶ್ರೀ ಭೀಮೇಶ್ವರ ಜೋಶಿ**







**ಸದಸ್ಯತ್ವ ಅಭಿಯಾನದಲ್ಲಿ ಸಂಘಟನಾ ಕಾರ್ಯದರ್ಶಿ ರಾಘವೇಂದ್ರ ಭಟ್ಟರೊಡನೆ ಶ್ರೀ ಭೀಮೇಶ್ವರ ಜೋಷಿ**

ಹೊರನಾಡು ಶ್ರೀ ಕ್ಷೇತ್ರದ ಸ್ವರ್ಣ ಮಹೋತ್ಸವ ಮಹಾಕುಂಭಾಭಿಷೇಕದ ಅಂಗವಾಗಿ ಶ್ರೀ ಭೀಮೇಶ್ವರ ಜೋಶಿಯವರ ಜೊತೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಬಿ ಎಸ್ ರಾಘವೇಂದ್ರ ಭಟ್ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಉಮೇಶ್ ಶಾಸ್ತ್ರಿ ಜೊತೆಯಲ್ಲಿ ಶಿವಮೊಗ್ಗದಲ್ಲಿ ನಡೆದ ಸಭೆಯಲ್ಲಿ ಶ್ರೀ ನಟರಾಜ್ ಭಾಗವತ್ ಉಪಸ್ಥಿತರಿದ್ದು ತದನಂತರ ಸಿದ್ದಾಪುರ ಹಾಗೂ ಶಿರಸಿಯಲ್ಲಿ ಉಪಾಧ್ಯಕ್ಷರಾದ ಶಶಿಭೂಷಣ್ ಹೆಗಡೆ ಹಾಗೂ ರಾಯ ಸದ್ ಮತ್ತು ನಾರಾಯಣ ಹೆಗಡೆ ಉಪಸ್ಥಿತರಿದ್ದು ಹುಬ್ಬಳ್ಳಿಯ ಸಭೆಯಲ್ಲಿ ವಿಜಯ ನಾಡ ಜೋಶಿ ವಸಂತ ನಾಡ ಜೋಶಿ ಶ್ರೀ ಪ್ರಮೋದ್ ಮನೋಳಿ, ವಿನಾಯಕ ತಾಪಸ ಉಪಸ್ಥಿತರಿದ್ದು ಹಾಗೂ ಬೆಳಗಾಂ ಸಭೆಯಲ್ಲಿ ಪ್ರಿಯಾ ಕುಲಕರ್ಣಿ ಮುತಾಲಿಕ್ ಹಾಗೂ ಬೆಳಗಾಂ ಜಿಲ್ಲಾಧ್ಯಕ್ಷರು ಉಪಸ್ಥಿತರಿದ್ದರು ಹಾಗೂ ಗದಗ ಸಭೆಯಲ್ಲಿ ಗದಗ ಜಿಲ್ಲಾ ಬ್ರಾಹ್ಮಣ ಸಭಾ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು ಹಾಗೂ ಹಾಸನ ಜಿಲ್ಲಾ ಸಭೆಯಲ್ಲಿ ಹಾಸನದ ಎಲ್ಲಾ ವಿಪ್ರ ಮುಖಂಡರು ಉಪಸ್ಥಿತರಿದ್ದರು ಹಾಗೂ ಕೋಲಾರ ಸಭೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರಾದ ನರಸಿಂಹಮೂರ್ತಿ ಉಪಾಧ್ಯಕ್ಷರಾದ ರಾಜೇಂದ್ರ ಪ್ರಸಾದ್ ಅಂಜನ್ ಕುಮಾರ್ ಶರ್ಮ ಸುಧಾಕರ್ ಬಾಬು ಉಪಸ್ಥಿತರಿದ್ದರು ವಿದುರಾಶ್ವತದಲ್ಲಿ ನಡೆದ ಸಭೆಯನ್ನು ಶ್ರೀ ರಾಜೇಂದ್ರ ಪ್ರಸಾದ್ ಏರ್ಪಡಿಸಿದ್ದರು ಈ ಎಲ್ಲಾ ಜಿಲ್ಲಾ ಮಟ್ಟದ ಸಭೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನವನ್ನು ನಡೆಸಲಾಯಿತು. ಧರ್ಮ ಕರ್ತರಾದ ಪೂಜ್ಯಶ್ರೀ ಭೀಮೇಶ್ವರ ಜೋಶಿ ಅವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಗೆ ಎಲ್ಲರೂ ಸದಸ್ಯರಾಗಬೇಕೆಂದು ಸಭಾದ ಪರವಾಗಿ ಹೇಳಿದರು.



# ಸನಾತನ ಧರ್ಮವು ಅತ್ಯಂತ ಪವಿತ್ರ

**– ಶ್ರೀ ಶ್ರೀ ವಿಧುಶೇಖರಭಾರತಿ ಮಹಾಸ್ವಾಮಿಗಳು**

**ಬೇಲೂರು :** ಲೌಕಿಕ ಜೀವನ ಜಂಜಾಟದ ಜೊತೆಗೆ ಧಾರ್ಮಿಕ ಆಚರಣೆಯನ್ನು ಮೈಗೂಡಿಸಿಕೊಂಡಾಗ ಬದುಕು ಸಾರ್ಥಕವಾಗುತ್ತದೆ. ಲೌಕಕ ಜೀವನ ಅನಿವಾರ್ಯ, ಆದರೆ ಧಾರ್ಮಿಕ ಜೀವನ ಅತ್ಯವಶ್ಯಕ ಎಂದು ಶೃಂಗೇರಿ ಶಾರದಾ ಪೀಠದ ಜಗದ್ಗುರು ವಿಧುಶೇಖರ ಭಾರತೀ ಮಹಾಸ್ವಾಮಿಗಳು ತಿಳಿಸಿದರು.

ಪಟ್ಟಣದ ಬೇಲೂರು ಶ್ರೀ ಶೃಂಗೇರಿ ಮಠದಲ್ಲಿ ನೂತನವಾಗಿ ನಿರ್ಮಿಸಿರುವ ಸಭಾ ಭವನವನ್ನು ಉದ್ಘಾಟಿಸಿದ ನಂತರ ಆಶೀರ್ವಚನವನ್ನು ನೀಡಿ, ಲೌಕಿಕ ಜೀವನದಲ್ಲಿ ಮನುಷ್ಯ ಅನುಸರಿಸಬೇಕಾದ ಸಾಮಾನ್ಯ ವಿಷಯಗಳ ಬಗ್ಗೆ ಹಾಗೂ ಧಾರ್ಮಿಕತೆಯ ಬಗ್ಗೆ ಪ್ರತಿಯೊಂದು ಕಾಲಘಟ್ಟದಲ್ಲಿನ ಸಮಾಜಕ್ಕೆ ಶಂಕರರು ಉಪದೇಶ ಮಾಡಿದ್ದಾರೆ. ಲೌಕಿಕ ಜೀವನದ ಜೊತೆ ಅವರವರ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಭಗವಂತನ ಆರಾಧನೆ ಮಾಡಿದಾಗ ಸಾಕ್ಷಾತ್ಕಾರ ಸಾಧ್ಯ ಎಂದರು.

ಸನಾತನ ಧರ್ಮದ ಉದ್ಧಾರದಲ್ಲಿ ಶ್ರೀ ಶಂಕರಾಚರ್ಯರ ಪಾತ್ರ ಅತಿಮುಖ್ಯವಾಗಿದೆ. ಶಂಕರಾಚಾರ್ಯರು ತಮ್ಮ ಅದ್ವೈತ ಸಿದ್ಧಾಂತದ ಮೂಲಕ ದೇವರನ್ನು ಕುರಿತಂತೆ ಜನರಲ್ಲಿದ್ದ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿ ಸನಾತನ ಧರ್ಮವನ್ನು ಉದ್ಧಾರ ಮಾಡಿದ್ದಾರೆ. ಕರ್ಮಮಾರ್ಗ, ಭಕ್ತಿ ಮಾರ್ಗ ಮತ್ತು ಜ್ಞಾನಮಾರ್ಗದ ಮೂಲಕ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವ ತಮ್ಮ ಬರವಣಿಗೆಯಲ್ಲಿ ಸವಿವರವಾಗಿ ತಿಳಿಸಿಕೊಟ್ಟಿದ್ದಾರೆ. ಲೋಕಕಲ್ಯಾಣಕ್ಕಾಗಿ ದೇವರು ವಿವಿಧ ರೂಪದಲ್ಲಿ ಕಂಡರೂ ಒಬ್ಬನೆ ಎಂದು ಸಾರಿದ್ದಾರೆ. ತಾವು ಅನುಸರಿಸುವ ಧರ್ಮದ ಮೇಲಿನ ನಿಷ್ಠೆ, ಲೌಕಿಕ ಮತ್ತು ಶಾಸ್ತ್ರೀಯ ನಿಯಮಗಳನ್ನು ಅನುಸರಿಸುತ್ತಾ ಮನುಷ್ಯನು ಕೋಟ್ಯಂತರ ಜೀವರಾಶಿಗಳ ಪೈಕಿ ವಿಭಿನ್ನವಾದ ಸ್ಥಾನದಲ್ಲಿ ನಿಲ್ಲುತ್ತಾನೆ. ಧಾರ್ಮಿಕ ಆಚರಣೆ, ಸನ್ಮಾರ್ಗದಲ್ಲಿ ನಡೆದು ಮನುಷ್ಯ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಅನೇಕ ಪ್ರದೇಶಗಳಲ್ಲಿ ಶಿಷ್ಯರು ಇರುವ ಕಡೆ ಶಾಖಾ ಮಠಗಳನ್ನು ಜಗದ್ಗುರುಗಳು ನಿರ್ಮಿಸಿದ್ದಾರೆ. ಅತ್ಯಂತ ಶ್ರೇಷ್ಠ ಪವಿತ್ರ ಮಠಗಳಲ್ಲಿ ಶೃಂಗೇರಿ ಮಠ ಒಂದಾಗಿದ್ದು ಜನತೆಗೆ ಧಾರ್ಮಿಕ, ಅಧ್ಯಾತ್ಮಿಕ ಮಾರ್ಗದರ್ಶನವನ್ನು ನೀಡುವ ಮೂಲಕ ಸಮಾಜದಲ್ಲಿ ಮೌಲ್ಯಗಳು, ನೈತಿಕತೆಗಳು ಉಳಿಯಬೇಕು. ಶಾಖಾ ಮಠದ ಮಾರ್ಗದರ್ಶನ ಅವಶ್ಯಕತೆ ಅರಿತ ಜಗದ್ಗುರುಗಳು ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಶಾಖಾ ಮಠವನ್ನು ಸ್ಥಾಪಿಸಿದ್ದು ಭಕ್ತರು ಧರ್ಮಪ್ರಬೋಧನೆ ಹಾಗೂ ಸನ್ಮಾರ್ಗದಲ್ಲಿ ನಡೆಯಬೇಕು ಎಂಬುದು ಅವರ ಆಶಯವಾಗಿದೆ ಎಂದರು.

ಶೃಂಗೇರಿ ಶ್ರೀಗಳವರು ಚನ್ನಕೇಶವ ದೇಗುಲ ಮುಂಭಾಗ ಪುರಪ್ರವೇಶ ಮಾಡಿದರು. ಶ್ರೀ ಚನ್ನಕೇಶಸ್ವಾಮಿಯ ದರ್ಶನ ಪಡೆದರು. ನಂತರ ಶ್ರೀ ಭಾರತೀತೀರ್ಥ ಕೃಪಾ ಸಭಾ ಭವನ ಉದ್ಘಾಟನೆ ಹಾಗೂ ಮಹಾ ಶಿವರುದ್ರ ಹೋಮದ ಪೂರ್ಣಾಹುತಿ ನಂತರ ಶ್ರೀ ಜಗದ್ಗುರುಗಳು ಭಕ್ತಾದಿಗಳಿಗೆ ಫಲಮಂತ್ರಾಕ್ಷತೆ ವಿತರಿಸಿ ಸಮುದಾಯವನ್ನು ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ಶೃಂಗೇರಿಯ ಶಾರದಾ ಪೀಠದ ಆಡಳಿತಾಧಿಕಾರಿಗಳಾದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ವಿ.ಆರ್. ಗೌರೀಶಂಕರ್, ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ವಿಜಯಕೇಶವ್, ಬೇಲೂರು ಶೃಂಗೇರಿ ಮಠದ ಗೊ.ಕೃ.ರವೀಂದ್ರ, ಕಾರ್ಯದರ್ಶಿ ಸುಬ್ರಹ್ಮಣ್ಯ, ವೇದಬ್ರಹ್ಮ ಕೆ.ಆರ್. ಮಂಜುನಾಥ್, ಶಾಸಕ ಕೆ.ಎಸ್. ಲಿಂಗೇಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹುಲ್ಲಹಳ್ಳಿ ಸುರೇಶ್, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ತೊ.ಚ. ಅನಂತಸುಬ್ಬರಾಯ, ನಾಗೇಂದ್ರ, ಪ್ರತಿಷ್ಠಾನದ ಸಿದ್ದೇಶ್ ನಾಗೇಂದ್ರ, ಮಾಜಿ ಜಿ.ಪಂ. ಸದಸ್ಯರು ಅಮಿತ್ ಶೆಟ್ಟಿ, ವೇಣುಗೋಪಾಲ್, ಸುರೇಶ್, ದಿನೇಶ್ ಹಾಲಂಬಿ ಇತರರು ಉಪಸ್ಥಿತರಿದ್ದರು.

## ಶ್ರೀ ಭಾರತೀತೀರ್ಥ ಸಭಾ ಭವನ ಉದ್ಘಾಟನೆ



ಬೇಲೂರು: ಶೃಂಗೇರಿ ಮಠದಲ್ಲಿ ನೂತನವಾಗಿ ನಿರ್ಮಿಸಿರುವ ಭಾರತೀತೀರ್ಥ ಸಭಾ ಭವನ ಲೋಕಾರ್ಪಣೆ ಸಂದರ್ಭದಲ್ಲಿ ಶ್ರೀ ಗಣಯಾಗ, ಮಹಾರುದ್ರ ಯಾಗದ ಪೂರ್ಣಾಹುತಿಯನ್ನು ಶೃಂಗೇರಿ ಶ್ರೀಗಳು ಸಮರ್ಪಿಸಿದರು. ಈ ಸಂದರ್ಭದಲ್ಲಿ ಮಾತನಾಡಿ, ದೇವರು ಮಣಿಯುವುದು ಸ್ತೋತ್ರಕ್ಕೆ, ಭಕ್ತಿಗೆ ಮಾತ್ರ. ಧರ್ಮಕ್ಕೆ ಮೂಲವಾದ ವೇದಗಳೇ ಇಂದು ಬಡವಾಗುತ್ತಿವೆ. ಹಾಗಾಗಿ ಅದಕ್ಕೆ ಬಲ ಬರಬೇಕಾದರೆ ಇಂತಹ ವೈದಿಕ ಕೆಲಸಕಾರ್ಯಗಳು ನಡೆಯಬೇಕು. ಇದು ನಡೆದಾಗ ಮಾತ್ರ ಹಿಂದೂ ಧರ್ಮದ ಅಭ್ಯುತ್ಥಾನ ಸಾಧ್ಯವೆಂದರು. ಪೂರ್ಣಾಹುತಿಯ ಬಳಿಕ ಯಾಗ ದೀಕ್ಷಿತರಿಗೆ ಕಲಶಾಭಿಷೇಕ, ಕಲಶ ತೀರ್ಥ ಪ್ರೋಕ್ಷಣೆ, ಮಂತ್ರಾಕ್ಷತೆ, ಋತ್ವಿಜರಿಗೆ ದಾನಾದಿ ಸತ್ಕರ್ಮ, ಪ್ರಸಾದ ವಿತರಣೆಗಳು ನಡೆದವು. ಈ ಸಂದರ್ಭದಲ್ಲಿ ತಾಲ್ಲೂಕು ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ವಿಜಯ ಕೇಶವ್, ಶೃಂಗೇರಿ ಶಾಖಾ ಮಠ ಕಾರ್ಯದರ್ಶಿ ಸುಬ್ರಹ್ಮಣ್ಯ, ನಾಗೇಂದ್ರ ಪ್ರತಿಷ್ಠಾನ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ, ಮಾಜಿ ಜಿ.ಪಂ. ಸದಸ್ಯ ಅಮಿತ್ ಶೆಟ್ಟಿ, ಚನ್ನಕೇಶವ ಸ್ವಾಮಿ ಇತರರು ಇದ್ದರು.

# “ಮಾಸ್ಟರ್ ಹಿರಣ್ಣಯ್ಯ ಸ್ಮರಣೆಯಲ್ಲಿ ಹಾಸ್ಯೋತ್ಸವ” ಪ್ರಸಿದ್ಧ ಸಾಹಿತಿ ಅ.ರಾ.ಮಿತ್ರರಿಗೆ “ಸಾಹಿತ್ಯ ಕಲಾರತ್ನ” ಪ್ರಶಸ್ತಿ



ಸಮಾಜದ ಓರೆಕೋರೆಗಳನ್ನು ನಾಟಕಗಳ ಮೂಲಕ ಎತ್ತಿ ತೋರಿಸಿ ಸಮಾಜ ಸುಧಾರಣೆಗೆ ಯತ್ನಿಸಿದ ದಿ. ಮಾಸ್ಟರ್ ಹಿರಣ್ಣಯ್ಯ ನಾಡಿನ ಜನತೆಯ ಮಾಸದ ನೆನಪು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ಸ್ಮರಿಸಿದರು.

ಎನ್.ಆರ್. ಕಾಲೋನಿಯ ಶ್ರೀರಾಮ ಮಂದಿರದ ಪತ್ತಿ ಸಭಾಂಗಣದಲ್ಲಿ ಯುಗಾದಿಯ ಮಾರನೆದಿನ ಆಯೋಜಿಸಲಾಗಿದ್ದ ಮಾಸ್ಟರ್ ಹಿರಣ್ಣಯ್ಯ ಸ್ಮರಣೆಯ “ಹಾಸ್ಯೋತ್ಸವ” ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಶ್ರೀ ಅ.ರಾ. ಮಿತ್ರ ಅವರನ್ನು ಗೌರವಿಸಿ ಮಾತನಾಡಿದ ಅವರು ಮಾಸ್ಟರ್ ಹಿರಣ್ಣಯ್ಯ ಅವರ ಸ್ಮರಣೆ ಇಲ್ಲದೇ ಹಾಸ್ಯವೇ ಇಲ್ಲ, ಆಗಿನ ಸಂದರ್ಭದಲ್ಲಿ ರಾಜಕಾರಣಿಗಳು ಸೇರಿದಂತೆ ಯಾರೇ ತಪ್ಪು ಮಾಡಿದರೂ ಅದನ್ನು ನಾಟಕಗಳ ಮೂಲಕ ಜನರಿಗೆ ತಮ್ಮದೇ ಆದ ಭಾಷೆಯ ಮೂಲಕ ಮನಮುಟ್ಟುವಂತೆ ತಿಳಿಸುವ ಛಾತಿ, ಆ ಧೈರ್ಯ ಹಿರಣ್ಣಯ್ಯ ಅವರಿಗೆ ಇತ್ತು. ಜೀವನದಲ್ಲಿ ಯಾವುದಕ್ಕೂ ಆಸೆ ಪಟ್ಟವರಲ್ಲ. ಎಂಥವರನ್ನೂ ಎದುರು ಹಾಕಿಕೊಳ್ಳುವ ಸಾಹಸಿ ಹಿರಣ್ಣಯ್ಯ ಎಂದು ಹೇಳಿದರು.

ಲಕ್ಷ್ಮೀನಾರಾಯಣ ಭಟ್ ಮಾತನಾಡಿ ಸಂತೋಷ––ಪಡಿಸುವುದು ಧರ್ಮ, ಮಾಸ್ಟರ್ ಹಿರಣ್ಣಯ್ಯ ಅವರು ಜೀವನಕ್ಕೆ ಅರ್ಥಕೊಟ್ಟವರು. ಹತ್ತಾರು ಕುಟುಂಬಗಳಿಗೆ ಆಧಾರಸ್ತಂಭವಾಗಿದ್ದರು. ಶೃಂಗೇರಿ ಶಾರದಾಂಬೆಯ ಆಶೀರ್ವಾದದೊಂದಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆರಂಭಿಸಿದವರೇ ಅವರು ಎಂದರು ಮತ್ತು ಆಗಿನ ತಲೆಮಾರಿನವರನ್ನೂ ತಮ್ಮ ಹಾಸ್ಯದ ಮೂಲಕ ಮೆಚ್ಚಿಸುತ್ತಾರೆ. ಅವರಿಗೆ ಈಗ ಪ್ರಶಸ್ತಿ ಅವರ ಹೆಸರಿನಲ್ಲಿ ನೀಡುತ್ತಿರುವುದು ಅರ್ಥಪೂರ್ಣ. ಹಿರಣ್ಣಯ್ಯ ಅವರು ನನ್ನ ಆಪ್ತ ಸ್ನೇಹಿತರಾಗಿದ್ದರು ಎನ್ನುವುದೇ ಹೆಮ್ಮೆಯ ವಿಷಯ.

ಮಹಾಸಭೆ ಸಮುದಾಯದ ಪ್ರತಿಭಾನವಿತ ಸಾಧಕರುಗಳನ್ನು ಗೌರವಿಸಲು ನೂತನವಾಗಿ ಆರಂಭಿಸಿದ **“ಸಾಹಿತ್ಯ ಕಲಾರತ್ನ”** ಪ್ರಥಮ ಪ್ರಶಸ್ತಿಯನ್ನು 50,000 ರೂ. ಗಳ ಬಹುಮಾನದೊಂದಿಗೆ ನಾಡಿನ ಹಿರಿಯ ಸಾಹಿತಿ, ಹಾಸ್ಯ ಹಾಗೂ ಸೃಜನಾತ್ಮಕ ಸಾಹಿತ್ಯ ವಿಭಾಗದಲ್ಲಿ ಅಪಾರಸೇವೆ ಸಲ್ಲಿಸಿದ ಅ.ರಾ.ಮಿತ್ರರವರಿಗೆ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅ.ರಾ. ಮಿತ್ರರವರು 50 ಸಾವಿರ ರೂ. ಗಳನ್ನೊಳಗೊಂಡ ಈ ಪ್ರಶಸ್ತಿ **“ಅರ್ಥಪೂರ್ಣ”** ವಾಗಿದೆ ಎಂದು ಹಾಸ್ಯ ಚಟಾಕಿ ಸಿಡಿಸಿ ಮಹಾಸಭೆಗೆ ಕೃತಜ್ಞತೆ ಸಲ್ಲಿಸಿದರು. ಮಾಸ್ಟರ್ ಹಿರಣ್ಯನವರ ತಮ್ಮ ಅಪೂರ್ವ ಸ್ನೇಹ–ಸಂಬಂಧಗಳನ್ನು ಎಳೆ–ಎಳೆಯಾಗಿ ಹಾಸ್ಯಚಟಾಕೆಗಳ ಮೂಲಕ ತಿಳಿಸುತ್ತ **“ನಗೆ–ನುಡಿ”**ಯನ್ನು ಎಲ್ಲರೂ ಬದುಕಿನಲ್ಲಿ ರೂಢಿಸಿಕೊಳ್ಳುವ ಅಗತ್ಯವನ್ನು ಮಾರ್ಮಿಕವಾಗಿ ತಿಳಿಸಿದರು. ಬಂಡಿ ಚಕ್ರದ ಹೂಡಿನಂತೆ ಒಂದೇ ರೀತಿಯಲ್ಲಿ ಅಂತರಂಗದಲ್ಲಿ ಸದಾ ನಗೆಯ ಪುಷ್ಪ ಅರಳಿರಬೇಕು ಎಂದರು.




ದೈವತ್ತವಾದ ಆತ್ಮಗೌರವ – ಆತ್ಮಾಭಿಮಾನವನ್ನು ಬ್ರಾಹ್ಮಣರು ಎಂದೂ ಕಳೆದು ಕೊಳ್ಳದೆ ತಮ್ಮ ಕ್ರಿಯಾಶಕ್ತಿ, ಜ್ಞಾನಶಕ್ತಿ, ಎಲ್ಲವನ್ನು ಎದುರಿಸುವ ದಾಷ್ಟ್ರ್ಯತೆಗಳ ಮೂಲಕ ಒಗ್ಗಟ್ಟಿನಿದಿದ್ದರೆ ಯಾರೂ ನಮ್ಮನ್ನು ತುಳಿಯಲು ಸಾಧ್ಯವಿಲ್ಲ ಎಂದರು.



ಶ್ರೀಯುತರಾದ ಎಂ.ಎಸ್. ನರಸಿಂಹಮೂರ್ತಿ, ವೈ.ವಿ. ಗುಂಡುರಾವ್, ದುಂಡಿರಾಜ್, ರಾಘವೇಂದ್ರ ಆಚಾರ್ಯ, ರಾಮನಾಥ್ ಅವರುಗಳ ಒಂದೊಂದು ಮಾತುಗಳೂ ಬೌಂಡರಿ ಗೆರೆ ದಾಟುತ್ತಿದ್ದವು. ಸಂಭಾಗಣದಲ್ಲಿ ಕಿಕ್ಕಿರಿದು ತುಂಬಿದ ಪ್ರೇಕ್ಷಕರು ಇವರೆಲ್ಲರ ಹಾಸ್ಯರಾಸಾಯನದಿಂದ ರಂಜಿತರಾದರು.

# ಮಹಾಸಭೆಯ "ಸಾಹಿತ್ಯ ಕಲಾರತ್ನ" ಪ್ರಥಮ ಪ್ರಶಸ್ತಿ ವಿಜೇತ

# ಬಹುಮುಖ ಪ್ರತಿಭೆಯ ಶ್ರೀ ಅ.ರಾ. ಮಿತ್ರ



ನಮ್ಮ ನಾಡಿನ ಶ್ರೇಷ್ಠರ ಸಾಲಿನ ಹಾಸ್ಯಜ್ಞ, ಉಪನ್ಯಾಸಕ, ವಿದ್ವಾಂಸ, ಅಧ್ಯಾಪಕ, ಬರಹಗಾರ, ವಿಮರ್ಶಕ, ಸಜ್ಜನರಲ್ಲಿ ಸಜ್ಜನ ಮನೋಧರ್ಮದ ಅ. ರಾ. ಮಿತ್ರ ಅವರು ಫೆಬ್ರುವರಿ 25, 1935ರಂದು ಬೇಲೂರಿನಲ್ಲಿ ಜನಿಸಿದರು. ಅವರ ಪೂರ್ಣ ಹೆಸರು ಅಕ್ಕಿ ಹೆಬ್ಬಾಳು ರಾಮಣ್ಣ ಮಿತ್ರ.

"ಬೆಂಗಳೂರಿನ ಪಸಿದ್ಧ **ಹಾಸ್ಯೋತ್ಸವ** ಕಾರ್ಯಕ್ರಮ, ಕರ್ನಾಟಕದ ಆಕಾಶವಾಣಿ, ದೂರದರ್ಶನ, ಹಾಗೂ ದೇಶ ವಿದೇಶಗಳಲ್ಲಿನ ಸಹಸ್ರಾರು ವೇದಿಕೆಗಳಲ್ಲಿ ಚಿಂತನೆ, ಉಪನ್ಯಾಸಗಳು, ಕುಮಾರವ್ಯಾಸ ಭಾರತದ ವ್ಯಾಖ್ಯಾನ, ಹಾಸ್ಯೋತ್ಸವ ರಂಜನೆ, ಹರಟೆ ಇತ್ಯಾದಿಗಳ ಮೂಲಕ ಪ್ರೊಫೆಸರ್ ಅ. ರಾ, ಮಿತ್ರರು ಇಂದು ಮನೆ ಮನೆಮಾತಾಗಿದ್ದಾರೆ. ಇತ್ತೀಚಿನ ವರ್ಷದಲ್ಲಿ ಮೂಡಿಬಂದ ಕುಮಾರವ್ಯಾಸ ಭಾರತದ ಸುಂದರ ವ್ಯಾಖ್ಯಾನ ಗ್ರಂಥ 'ಕಥಾಮಿತ್ರ' ಜನಮೆಚ್ಚುಗೆಯ ದಿಗ್ವಿಜಯ ಸಾಧಿಸಿದೆ.

ಮಿತ್ರರ 'ಛಂದೋಮಿತ್ರ'ದ ಸೊಗಸೇ ಸೊಗಸು. ಇದು ಮಿತ್ರರ ಪಾಂಡಿತ್ಯ ಮತ್ತು ಹಾಸ್ಯಪ್ರವೃತ್ತಿ ಎರಡೂ ಮೇಳವಿತವಾಗಿರುವ ಒಂದು ವಿಶಿಷ್ಟ ಕೃತಿ.

ಪ್ರಾಚೀನ ಕಾವ್ಯಗಳನ್ನು ಆಳವಾಗಿ ಅಭ್ಯಾಸ ಮಾಡಿರುವ ಅ. ರಾ. ಮಿತ್ರರು 'ಅಜಿತನಾಥ ಪುರಾಣ' ಮತ್ತು 'ಪಂಪ ಭಾರತ ಸಂಗ್ರಹ' ಕೃತಿಗಳನ್ನು ಸಂಪಾದಿಸಿದ್ದಾರೆ. ಮಿತ್ರ ಅವರ ಮಹಾಭಾರತವನ್ನು ಕುರಿತ ಪ್ರೌಢ ಮಟ್ಟದ ಸರಣಿ ಉಪನ್ಯಾಸಗಳು ಬಹುಜನರನ್ನು ಆಕರ್ಷಿಸಿದ್ದವು. ಈ ಉಪನ್ಯಾಸಗಳ ಫಲ ಮಿತ್ರರ ಮೂರು ಸಂಪುಟಗಳ ಬೃಹತ್ 'ಮಹಾಭಾರತ ಪಾತ್ರ ಸಂಗತಿಗಳು'. ಮಿತ್ರರು ತಮ್ಮ ನವಿರಾದ ನಗೆ ಸಾಹಿತ್ಯದಿಂದ ಬಹು ಜನಪ್ರಿಯರಾಗಿರುವ ಲೇಖಕ. 'ಬಾಲ್ಕನಿಯ ಬಂಧುಗಳು' ಮತ್ತು 'ಯಾರೋ ಬಂದಿದ್ದರು' ಅವರ ಪ್ರಾರಂಭದ ಹಾಸ್ಯ ಲೇಖನಗಳ ಸಂಗ್ರಹಗಳು. ಅವರ ಇನ್ನೊಂದು ಕೃತಿ ವಿಶ್ವದ ಪ್ರಸಿದ್ಧ ಪ್ರೇಮಕಥೆಗಳನ್ನು ಆಧರಿಸಿದ 'ಪ್ರೇಮನದಿಗಳ ದಡದಲ್ಲಿ'. ವಚನಕಾರರು ಮತ್ತು ಶಬ್ದಕಲ್ಪ, ಒಳನೋಟಗಳು – ವಿಮರ್ಶಾಕೃತಿಗಳು. ಜರ್ಮನ್ ಸಂಪ್ರದಾಯ ದರ್ಪಣ, ಶಿಕ್ಷಣ ಚಿಂತನ, ಕಾಲಿಗುಲ ಮತ್ತು ತಪ್ಪಿದ ಎಳೆ ಇತರರೊಡನೆ ಕೂಡಿ ಮಾಡಿದ ಅನುವಾದ. ನಾನೇಕೆ ಕೊರೆಯುತ್ತೇನೆ. ಆರತಕ್ಷತೆ ಇವರ ಸಮಗ್ರ ಪ್ರಬಂಧದ ಎರಡು ಸಂಪುಟಗಳು.

ತಮ್ಮ ಕೃತಿಗಳಿಂದ ಹೆಸರುಮಾಡಿರುವ, ನಿಯತಕಾಲಿಕ ಪತ್ರಿಕೆಗಳಿಗೆ ಬರೆಯುವ ತಮ್ಮ ಅಂಕಣ ಬರಹ, ಧಾರವಾಹಿ ಲೇಖನ, ಹರಟೆಗಳಿಂದ ಮನೆಮಾತಾಗಿರುವ ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ ಅವರು ಮೈಸೂರು ವಿಶ್ವ ವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಕನ್ನಡ ಎಂ. ಎ. ವ್ಯಾಸಂಗ ಮಾಡಿ, ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ 1955ರಲ್ಲಿ ಕನ್ನಡ ಅಧ್ಯಾಪಕರಾಗಿ ಉದ್ಯೋಗ ಪ್ರಾರಂಭಿಸಿ, 1973 ರವರೆಗೆ ಅಲ್ಲಿದ್ದು, ನಂತರ ಸರಕಾರೀ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪ್ರವಾಚಕ (ರೀಡರ್)ರಾಗಿ ನೇಮಕಗೊಂಡು, ಮಡಿಕೇರಿ ತುಮಕ ೂರು ಬೆಂಗಳೂರಿನ ಸರಕಾರಿ ಕಾಲೇಜುಗಳಲ್ಲಿ ಅವರು ಕೆಲಸ ಮಾಡಿದರು, ಪ್ರಾಧ್ಯಾಪಕರಾದರು. ಈ ಮಧ್ಯೆ, 'ಅಮೇರಿಕನ್ ಪೀಸ್ ಕೋರ್' ನಲ್ಲಿ ಕನ್ನಡ ಶಿಕ್ಷಕರೂ ಆಗಿದ್ದರು. ಕೊನೆಗೆ, ಬೆಂಗಳೂರಿನ ಮಹಾರಾಣಿ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತರಾದರು, 'ಅಖಂಡ ಕರ್ನಾಟಕದಲ್ಲಿ ಹಾಸ್ಯ ಉಪನ್ಯಾಸಕಾರರನ್ನು ತಯಾರಿಸಿ ಬೆಳೆಸಿದ ಅಪವಾದವೂ ನನ್ನ ಮೇಲಿದೆ,'– ಎನ್ನುತ್ತಾರೆ ಮಿತ್ರ ಅವರು.

ಭಾರತೀಯ ವಿದ್ಯಾಭವನದಲ್ಲಿ ಕನ್ನಡ ಕಾವ್ಯದ ಸವಿವರ ಉಪನ್ಯಾಸ ಮಾಲಿಕೆಯಲ್ಲಿ ನೂರಾರು ಉಪನ್ಯಾಸಗಳನ್ನು ನೀಡಿದ ಹೆಗ್ಗಳಿಕೆ ಇವರದು. ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಕುಮಾರವ್ಯಾಸ, ಲಕ್ಷ್ಮೀಶ, ಡಿವಿಜಿ ಮೊದಲಾದವರ ಬಗೆಗೆ ನೂರಾರು ಉಪನ್ಯಾಸಗಳನ್ನು ಮಾಡಿ ಪಂಡಿತ ಪಾಮರರನ್ನು ರಂಜಿಸಿದ್ದಾರೆ. ದೂರದರ್ಶನದ ಚಾನೆಲ್ಲುಗಳಲ್ಲಿ ಕುಮಾರವ್ಯಾಸ ಭಾರತದ ಬಗೆಗೆ ಡಾ. ನಾಗವಲ್ಲಿ ನಾಗರಾಜ್‌ರವರ ಗಮಕ ವಾಚನದ ಜೊತೆಗೆ ಅ ರಾ ಮಿತ್ರ ಅವರ ವ್ಯಾಖ್ಯಾನ–ಪರಂಪರೆ ಸತತವಾಗಿ ನಡೆದು ವಿಕ್ರಮ ಸ್ಥಾಪಿಸಿದೆ.

ಅ. ರಾ. ಮಿತ್ರರ ಸಾಧನೆಯನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳು ಅವರಿಗೆ ಹಲವಾರು ಪ್ರಶಸ್ತಿಗಳನ್ನಿತ್ತು ಗೌರವಿಸಿವೆ: ಇವುಗಳಲ್ಲಿ ಗೊರೂರು ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ, ನವರತ್ನರಾಮ ಪ್ರಶಸ್ತಿ ಮತ್ತು ನಗೆರಾಜ ಪ್ರಶಸ್ತಿಗಳು ಮುಖ್ಯವಾದವು. ಕರ್ನಾಟಕ ಸಾಹಿತ್ಯ ಅಕಾಡೆಮಿಯು ವಿಮರ್ಶಾ ಕ್ಷೇತ್ರದಲ್ಲಿನ ಅವರ ಗಣನೀಯ ಸಾಧನೆಯನ್ನು ಗೌರವದಿಂದ ಪುರಸ್ಕರಿಸಿದೆ.

**ಅಖಿಲ ಕರ್ನಾಟಕ ಮಹಾಸಭೆ ನೂತನವಾಗಿ ಆರಂಭಿಸಿರುವ "ಸಾಹಿತ್ಯ ಕಲಾರತ್ನ" ಪ್ರಶಸ್ತಿಗೆ ಭಾಜನರಾದ ಶ್ರೀಯುತರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು**

# ಮಹಾಸಭೆಯಿಂದ ಯಶಸ್ವಿ ಉಚಿತ ಆರೋಗ್ಯ ಶಿಬಿರದ ಆಯೋಜನೆ





ಏಪ್ರಿಲ್ 1 ರಂದು ಮಹಾಸಭೆ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಹೃದಯ ತಪಾಸಣೆಯನ್ನು ನಾರಾಯಣ ಹೆಲ್ತ್ ಸಿಟಿ (ನಾರಾಯಣ ಹೃದಯಾಲಯ), ಕಣ್ಣಿನ ಪರೀಕ್ಷೆಯನ್ನು ಶೇಖರ್ ಐ ಆಸ್ಪತ್ರೆಯವರು, ಮೂಳೆಯ ಸಮಸ್ಯೆಗಳಿಗೆ ಸಂಬಂಧಪಟ್ಟ ಸಲಹೆಗಳನ್ನು ಯುನೈಟೆಡ್ ಆಸ್ಪತ್ರೆಯವರು, ಫಿಸಿಯೋಥೆರಪಿಗೆ ಸಂಬಂಧಪಟ್ಟಂತಹ ಸಲಹೆ ಮತ್ತು ಪರೀಕ್ಷೆಯನ್ನು ರಾಯರ ಕಿರಣ ಫಿಸಿಯೋಥೆರಪಿ ಮತ್ತು ರಿಹ್ಯಾಬ್ ಸೆಂಟರ್‌ರವರು, ವೆರಿಕೋಸ್‌ವೇನ್ಸ್ ಸಂಬಂಧಪಟ್ಟಂತಹ ಪರೀಕ್ಷೆಯನ್ನು ಮತ್ತು ಸಲಹೆಯನ್ನು ಡಾ॥ ಮುರಳೀಧರರವರು, ಗೈನಕಾಲಜಿಗೆ ಸಂಬಂಧಪಟ್ಟಂತ ಸಲಹೆಯನ್ನು ಡಾ॥ ಚಂದ್ರಿಕಾರವರು, ಯೂರಾಲಜಿಗೆ ಸಂಬಂಧಪಟ್ಟಂತ ಸಮಸ್ಯೆಗಳ ಸಲಹೆಯನ್ನು ಡಾ॥ ಸೂರಜ್‌ರವರು, ರೂಮಟಾಲಜಿ ಸಂಬಂಧಪಟ್ಟಂತ ಸಲಹೆಯನ್ನು ಡಾ॥ ಕಾರ್ತಿಕ ಬಾದನಾರಾಯಣರವರು ಮತ್ತು ಉಚಿತ ಶ್ರವಣ ಶಕ್ತಿ ಸಮಸ್ಯೆಯನ್ನು ಆಂಪ್ಲಿಫಾನ್ ರವರು ನೆರವೇರಿಸಿರುತ್ತಾರೆ.

ಶಿಬಿರವನ್ನು ಬಿ.ಬಿ.ಎಂ.ಪಿ.ಯ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ॥ ಕೆ.ವಿ. ತ್ರಿಲೋಕಚಂದ್ರ ಐ.ಎ.ಎಸ್. ರವರು ಉದ್ಘಾಟಿಸಿರುತ್ತಾರೆ. ಸುಮಾರು 250ಕ್ಕೂ ಹೆಚ್ಚು ಬ್ರಾಹ್ಮಣ ಮಹಾಸಭೆಯ ಸದಸ್ಯರುಗಳು ಹಾಗೂ ಬ್ರಾಹ್ಮಣ ಸಮುದಾಯದವರು ಈ ಉಚಿತ ಆರೋಗ್ಯ ಶಿಬಿರದ ಪ್ರಯೋಜನವನ್ನು ಪಡೆದುಕೊಂಡಿರುತ್ತಾರೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರಾದಂತಹ ಶ್ರೀ ಅಶೋಕ ಹಾರನಹಳ್ಳಿಯವರು ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಿಕೊಟ್ಟಂತಹ ವೈದ್ಯರುಗಳಿಗೂ, ಆಸ್ಪತ್ರೆಗಳಿಗೂ ಮತ್ತು ಆರೋಗ್ಯ ಸಂಸ್ಥೆಗಳ ಪ್ರತಿನಿಧಿಗಳಿಗೂ ಮಹಾಸಭಾ ವತಿಯಿಂದ ಸನ್ಮಾನಿಸಿರುತ್ತಾರೆ.

ಆರೋಗ್ಯ ತಪಸಣಾ ಶಿಬಿರದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಯಶಸ್ವಿಯಾಗಿ ನಿರ್ವಹಿಸಿದ ನಮ್ಮ ಮಹಾಸಭೆಯ ವೈದ್ಯಕೀಯ ತುರ್ತುಸೇವೆ, ಸಂಚಾಲಕರಾದ ಶ್ರೀ ವೆಂಕಟೇಶ್ ದ್ವಾರಕನಾಥ್ ಹಾಗೂ ಅವರೊಡನೆ ಸಹಕರಿಸಿದ ಪದಾಧಿಕಾರಿಗಳು ಅಭಿನಂದನಾರ್ಹರು.



### ಮಹಾಸಭಾ ಸದಸ್ಯರಿಗೆ ಗುರುತಿನ ಚೀಟಿ ವಿತರಣೆ ಸಮಾರಂಭ

# ನಮ್ಮ ಬದುಕು ಸಮಾಜದ ಶ್ರೇಯೋಭಿವೃದ್ದಿಗೆ ಪೂರಕವಾಗಿರಲಿ

**– ಡಾ॥ ಭೀಮೇಶ್ವರ ಜೋಶಿ**

**ಚಿಕ್ಕಮಗಳೂರು ಜಿಲ್ಲೆಯುಲ್ಲಿ ಒಂದೇ ದಿನ 1800 ಸದಸ್ಯರಿಗೆ ಗುರುತಿನ ಚೀಟಿ ನೀಡಿರುವ ಮಹಾಸಭಾ ಸಾಧನೆಯು ದಾಖಲೆ**



ನಮ್ಮ ಬದುಕು ಮತ್ತು ಸೇವೆ ಸಮುದಾಯದ ಶ್ರೇಯೋಭಿವೃದ್ದಿಗೆ ಪೂರಕವಾಗಿರಬೇಕು ಎಂದು ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮದರ್ಶಿಗಳಾದ ಡಾ॥ ಭೀಮೇಶ್ವರ ಜೋಶಿರವರು ಹೇಳಿದರು.

ಕೊಪ್ಪದ ಗಾಯತ್ರಿ ಮಂದಿರದಲ್ಲಿ ಇತ್ತೀಚೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಸದಸ್ಯರ ಗುರುತಿನ ಚೀಟಿ ಬಿಡುಗಡೆ ಮಾಡಿ ಅವರು ಮಾತನಾಡಿದರು. ವಿಪ್ರ ಸಮಾಜ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸಾತ್ವಿಕ ಸಮಾಜ. ಯಾರಿಗೂ ಅನ್ಯಾಯ ಮಾಡಿಲ್ಲ, ತೊಂದರೆ ಕೊಟ್ಟಿಲ್ಲ. ವಿಶ್ವಶಾಂತಿಯನ್ನು ಪ್ರತಿಪಾದಿಸುವ ಸಮಾಜ. ಆದರೂ ಅತೀ ಹೆಚ್ಚು ಅವಹೇಳನೆಗೆ, ದೂಷಣೆಗೆ ಒಳಗಾದ ಸಮಾಜ ಇದ್ದರೇ ಅದು ವಿಪ್ರ ಸಮಾಜ. ಸಂಘಟನೆಯ ಕೊರತೆಯೇ ಇದಕ್ಕೆಲ್ಲಾ ಕಾರಣ ಎಂದರು.

ರಾಜ್ಯದಲ್ಲಿ 45 ಲಕ್ಷ ಜನಸಂಖ್ಯೆ ಹೊಂದಿರುವ ವಿಪ್ರ ಸಮಾಜ ಸಂಘಟಿತವಾದರೆ ರಾಜ್ಯದ ರಾಜಕೀಯ ಚಿತ್ರಣವನ್ನೇ ಬದಲಾಯಿಸುವ ಶಕ್ತಿಯಿದೆ. ನಮ್ಮ ಸಮುದಾಯಕ್ಕೆ ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ಸುಲಲಿತವಾಗಿ ಪಡೆದುಕೊಳ್ಳಬಹುದು. ಒಟ್ಟಿನಲ್ಲಿ ಸಮುದಾಯದ ಎಲ್ಲರೂ ಸದಸ್ಯತ್ವ ಪಡೆದುಕೊಳ್ಳಬೆಕು. ಸ್ವಾಭಿಮಾನದಿಂದ ಸನ್ನದ್ಧರಾಗಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ಅವರು ಮಾಸ್ಟರ್ ಹಿರಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಆರಂಭವಾದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ 1974ರಲ್ಲಿ ನೋಂದಣಿಯಾಯಿತು. ಅನಿವಾರ್ಯ ಸಂದರ್ಭದಲ್ಲಿ ಮಹಾಸಭಾದ ಚುಕ್ಕಾಣಿ ಹಿಡಿಯಬೇಕಾಯಿತು. ಬೆಂಗಳೂರಿಗೆ ಸೀಮಿತವಾಗಿದ್ದ ಮಹಾಸಭಾದ ಕಾರ್ಯಚಟುವಟಿಕೆಯನ್ನು ರಾಜ್ಯವ್ಯಾಪಿ ವಿಸ್ತರಿಸುತ್ತಿದ್ದೇವೆ. ಮುಂದಿನ ವರ್ಷ ಸುವರ್ಣ ಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಕನಿಷ್ಠ ಪಕ್ಷ 11 ಲಕ್ಷ ಸದಸ್ಯತ್ವ ಮಾಡುವ ಉದ್ದೇಶ ಹೊಂದಿದ್ದೇವೆ. ಮುಂದಿನ ದಿನಗಳಲ್ಲಿ ರಾಜ್ಯಾಧ್ಯಕ್ಷರ ಚುನಾವಣೆಯ ಜೊತೆಗೆ ಜಿಲ್ಲಾ ಮಟ್ಟದಿಂದಲೂ ಒಬ್ಬರು ಪ್ರತಿನಿಧಿಯನ್ನು ಚುನಾವಣೆ ಮೂಲಕ ಆಯ್ಕೆ ಮಾಡುವ ಪ್ರಕ್ರಿಯೆ ನಡೆಯಲಿದೆ. ಮಹಾಸಭಾದ ವತಿಯಿಂದ ವಿಪ್ರ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯಹಸ್ತ, ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವೈದ್ಯಕೀಯ ನೆರವು, ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಕಲ್ಪಿಸುವುದು, ದಾನಿಗಳಿಂದ ಆರ್ಥಿಕ ನೆರವು ಪಡೆದು ನಿಧಿ ಸ್ಥಾಪನೆ ಮಾಡುವುದು ಮುಂತಾದ ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕೊಪ್ಪ ಹಾಗೂ ಶೃಂಗೇರಿಯ ಬ್ರಾಹ್ಮಣ ಸಮುದಾಯ ಭವನಕ್ಕೆ ಅನುದಾನ ಕೊಡಿಸಿದ ಡಿ.ಎನ್. ಜೀವರಾಜ್ ಅವರನ್ನು ಸನ್ಮಾನಿಸಲಾಯಿತು. ಕೊಪ್ಪ ತಾಲ್ಲೂಕಿನ 1700 ಮಂದಿಗೆ ಸದಸ್ಯತ್ವ ಗುರುತಿನ ಚೀಟಿ ವಿತರಣೆಗೆ ಚಾಲನೆ ನೀಡಲಾಯಿತು. ಬ್ರಾಹ್ಮಣ ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ. ಬಿ.ಎಸ್. ರಾಘವೇಂದ್ರ ಭಟ್ಟರು ಮಾತನಾಡಿದರು. ರಾಜ್ಯಾದ್ಯಂತ ನಿರಂತರ ಪ್ರವಾಸ ಕೈಗೊಂಡು ಎಲ್ಲಾ ಜಿಲ್ಲೆಗಳ ಮುಖಂಡರು, ವಿಪ್ರ ಸಮುದಾಯು ಎಲ್ಲರನ್ನೂ ಭೇಟಿ ಮಾಡಿ, ಬ್ರಾಹ್ಮಣ ಸಂಘಟನೆಯ ಬಗ್ಗೆ ಅರಿವು ಮೂಡಿಸಿ, ಪ್ರೇರೇಪಿಸಿ ಒಂದೇ ದಿನದಲ್ಲಿ 1700 ಬ್ರಾಹ್ಮಣರನ್ನು ಸದಸ್ಯರನ್ನಾಗಿ ಮಾಡಿ, ನೋಂದಾಯಿಸಿ, ಗುರುತಿನ ಚೀಟಿ ವಿತರಿಸಲು ಶ್ರಮಿಸಿರುವುದು ಬ್ರಾಹ್ಮಣ ಮಹಾಸಭೆಯ ಇತಿಹಾಸದಲ್ಲಿ ಒಂದು ಹೆಗ್ಗಳಿಕೆ. ಜಿಲ್ಲಾ ಅಧ್ಯಕ್ಷ ಜಿ.ಎಸ್. ಮಹಾಬಲ, ಚಿಕ್ಕಮಗಳೂರು ಅಧ್ಯಕ್ಷ ಮಂಜುನಾಥ ಜೋಶಿ, ಕೊಪ್ಪ ಅಧ್ಯಕ್ಷ ಕೆಸಕೊಡಿಗೆ ಕೃಷ್ಣಮೂರ್ತಿ, ರವಿಕುಮಾರ್ ಇದ್ದರು.



# ಕೊಪ್ಪದಲ್ಲಿ ಮಹಿಳಾ ವೇದಿಕೆ ಉದ್ಘಾಟನೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆಯಾದ ಕೊಪ್ಪ ತಾಲ್ಲೂಕು ವಿಪ್ರ ಮಹಿಳಾ ವೇದಿಕೆಯ ಉದ್ಘಾಟನೆ ಹಾಗೂ ಮಹಿಳಾ ಸಮಾವೇಶದ ಕಾರ್ಯಕ್ರಮ ತಾಲ್ಲೂಕು ಸಂಚಾಲಕಿಯಾದ ಶ್ರೀಮತಿ ಟಿ.ವಿ. ಶ್ರೀಮತಿ ನಾಗರಾಜ್ ಇವರ ನೇತೃತ್ವದಲ್ಲಿ ತುಂಬಾ ಚೆನ್ನಾಗಿ ನಡೆಯಿತು. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಸೇರಿದ್ದು ಸಮಾವೇಶ ಅತ್ಯಂತ ಯಶಸ್ವಿಯಾಗಿ ಪೂರ್ಣಗೊಂಡಿತು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮತಿ ಪದ್ಮ ಪ್ರಕಾಶ್ ಇವರು ವಹಿಸಿಕೊಂಡಿದ್ದರು.

ಮುಖ್ಯ ಅತಿಥಿಗಳಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಂಚಾಲಕಿಯಾದ ಶ್ರೀಮತಿ ಶುಭ ಮಂಗಳರವರು, ಸಂಸ್ಕೃತ ವಿದ್ವಾಂಸರಾದ ಡಾ॥ ಎಸ್.ಆರ್. ಲೀಲಾರವರು, ಮನೋವೈದ್ಯರು, ಕಲಾವಿದರೂ, ಲೇಖಕರೂ ಆದ ಶಿವಮೊಗ್ಗದ ಡಾ॥ ಕೆ.ಎಸ್. ಪವಿತ್ರ, ಚಿಕ್ಕಮಗಳೂರು ಜಿಲ್ಲಾ ವಿಪ್ರ ಮಹಿಳಾ ವೇದಿಕೆಯ ಸಂಚಾಲಕಿ ಶ್ರೀಮತಿ ಶಾಂತಕುಮಾರಿ ಭಾಗವಹಿಸಿದ್ದರು.

ಚಿಕ್ಕಮಗಳೂರು ಜಿಲ್ಲಾ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ಡಾ॥ ಜಿ.ಎಸ್. ಮಹಾಬಲ, ಕೊಪ್ಪ ತಾಲೂಕು ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿ ಕೆಸುಕುಡಿಗೆ ಇವರೆಲ್ಲರೂ ಉಪಸ್ಥಿತರಿದ್ದರು.

ಶ್ರೀಮತಿ ಸುಧಾ ನಾಗರಾಜ್ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯಕ್ರಮದ ಸಂಪೂರ್ಣ ನಿರೂಪಣೆಯನ್ನು ಶ್ರೀಮತಿ ಮಂಗಳ ಪ್ರವೀಣ್ ಹಾಗೂ ಶ್ರೀಮತಿ ಗೌತಮಿ ಮಧುಕರ್ ಅತ್ಯಂತ ಸೊಗಸಾಗಿ ಮಾಡಿದರು.

ಪ್ರಾಸ್ತಾವಿಕ ಭಾಷಣದಲ್ಲಿ ಕೊಪ್ಪ ತಾಲೂಕು ವಿಪ್ರ ಮಹಿಳಾ ವೇದಿಕೆಯ ಸಂಚಾಲಕಿಯಾದ ಶ್ರೀಮತಿ ಟಿ ವಿ ಶ್ರೀಮತಿ ನಾಗರಾಜ್. ಇವರು ಮಾತನಾಡುತ್ತಾ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆಯಾಗಿ ಈ ಮಹಿಳಾ ವೇದಿಕೆಯು ಸ್ಥಾಪನೆಯಾದ ಬಗ್ಗೆ, ಮಹಿಳೆಯರೆಲ್ಲರನ್ನು ಸಂಘಟಿಸಿದ ಬಗ್ಗೆ, ಈ ಮಹಿಳಾ ವೇದಿಕೆಯಿಂದ ಮುಂದೆ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ವಿಸ್ತಾರವಾಗಿ ಮಾತನಾಡಿದರು.

ವಿದ್ವಾಂಸರಾದ ಡಾ॥ ಎಸ್.ಆರ್. ಲೀಲಾ ಅವರು ಇತಿಹಾಸದಲ್ಲಿ ಈ ದೇಶವನ್ನು ಕಟ್ಟಿ ಬೆಳೆಸುವಲ್ಲಿ ಬ್ರಾಹ್ಮಣರ ಪಾತ್ರದ ಬಗ್ಗೆ ವಿಸ್ತಾರವಾಗಿ ಮಾತನಾಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ಸಂಚಾಲಕಿ ಶ್ರೀಮತಿ ಡಾ॥ ಶುಭಮಂಗಳ ಇವರು ಮಾತನಾಡುತ್ತಾ ನಾವು ಬ್ರಾಹ್ಮಣರಾಗಿರುವುದಕ್ಕೆ ಹೆಮ್ಮೆ ಪಡಬೇಕು. ಮನುಷ್ಯ ಹೇಗಿರಬೇಕು ಎಂಬುದಕ್ಕೆ ಬ್ರಾಹ್ಮಣ್ಯ ಎಂಬುದೇ ಒಂದು ಮ್ಯಾನುಯೆಲ್ ಎಂದರು.

ತಾಲೂಕು ಸಂಚಾಲಕಿ ಶ್ರೀಮತಿ ಟಿ.ವಿ. ಶ್ರೀಮತಿ ಅವರನ್ನು ಮತ್ತು ಎಲ್ಲಾ ಮಹಿಳಾ ಕಾರ್ಯಕರ್ತರನ್ನು ಆತ್ಮೀಯವಾಗಿ ಅಭಿನಂದಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬಂದಿದ್ದ ನೃತ್ಯ ಕಲಾವಿದರು, ಲೇಖಕರು ಮನೋವೈದ್ಯರು ಆದಂತಹ ಡಾ॥ ಕೆ.ಎಸ್. ಪವಿತ್ರ ಇವರು ಸ್ತ್ರೀಯರಿಗೆ ಮುಖ್ಯವಾಗಿ ಗೃಹಿಣಿಗೆ ದಿನನಿತ್ಯ ಬರುವ ಸಮಸ್ಯೆಗಳನ್ನು ಮನೋ ವಿಜ್ಞಾನದ ಮೂಲಕ ವಿಶ್ಲೇಷಣೆ ಮಾಡಿ ಅದರ ಪರಿಹಾರದ ಬಗ್ಗೆ ಸುಧೀರ್ಘವಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಅನೇಕ ಸಾಧಕರನ್ನು ಆತ್ಮೀಯವಾಗಿ ಗೌರವಿಸಲಾಯಿತು. ನಿಕಟ ಪೂರ್ವ ಸಮ್ಮೇಳನಾಧ್ಯಕ್ಷರಾದಂತಹ ಶ್ರೀಮತಿ ರೋಹಿಣಿ ವೆಂಕಟೇಶ ಭಟ್, ಬೇರು ಕೊಡಿಗೆ , ರಂಗೋಲಿ ಕಲೆಯಲ್ಲಿ ಮನೆ ಮಾತಾಗಿರುವ ಹರಿಹರ ಪುರದ ಶ್ರೀಮತಿ ಸುವರ್ಣ ಕೇಶವ, ಕೊಪ್ಪ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಂತಹ ಶ್ರೀಮತಿ ಚಂದ್ರಕಲಾ, ಕೊಪ್ಪ ಸಾರ್ವಜನಿಕ ಆಸ್ಪತ್ರೆಯನ್ನು ತುಂಬಾ ಅಭಿವೃದ್ಧಿ ಮಾಡಿರುವ ವೈದ್ಯಾಧಿಕಾರಿಗಳಾದಂತಹ ಡಾ. ಗಾನವಿ, ಕೃಷಿ ಮತ್ತು ಗೋ ಸಂರಕ್ಷಣೆಯಲ್ಲಿ ಬಹಳಷ್ಟು ಸಾಧನೆಯನ್ನು ಮಾಡಿರುವ ಶ್ರೀಮತಿ ವಾಣಿ ಶ್ರೀಹರ್ಷ ಇವರೆಲ್ಲರಿಗೂ ಆತ್ಮೀಯ ಸನ್ಮಾನವನ್ನು ಮಾಡಲಾಯಿತು.



ತಮ್ಮ ಬಾಳಿನಲ್ಲಿ ನಿಸ್ವಾರ್ಥ ಸೇವೆಯನ್ನು ಜೀವನ ಕ್ರಮವಾಗಿ ರೂಢಿಸಿಕೊಂಡಿರುವ ಶ್ರೀಮತಿ ಶಾರದಮ್ಮ ಬಾಳಗಡಿ, ಶ್ರೀಮತಿ ವಿಶಾಲಾಕ್ಷಮ್ಮ ಅಬ್ಬಿಕಲ್, ಶ್ರೀಮತಿ ಪ್ರೇಮ ಭಟ್ ನಾರ್ವೆ, ಶ್ರೀಮತಿ ಸಾವಿತ್ರಿ ಅರಸಿತೋಟ, ಶ್ರೀಮತಿ ಲಲಿತಮ್ಮ ಮೇಗುಂದ ಇವರೆಲ್ಲರನ್ನು ಪ್ರೀತಿ ಪೂರ್ವಕವಾಗಿ ಅಭಿನಂದಿಸಲಾಯಿತು.




## ಮಹಾಸಭಾ ಅಧ್ಯಕ್ಷರಿಂದ ಮೋಹನದಾಸ್ ಪೈ ಹಾಗೂ ಹೆಚ್.ಎನ್. ಶ್ರೀನಿವಾಸ ಭೇಟಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮುಂದಿನ ಯೋಜನೆಗಳ ಬಗ್ಗೆ ಸಮಾಲೋಚನೆ ನಡೆಸಲು ಶ್ರೀ ಮೋಹನದಾಸ್ ಪೈ ಅವರ ಕಚೇರಿಯಲ್ಲಿ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಟಾಟಾ ಟ್ರಸ್ಟ್ ನ ಮುಖ್ಯಸ್ಥರಾದ ಶ್ರೀ ಹೆಚ್.ಎನ್. ಶ್ರೀನಿವಾಸ ಮತ್ತು ಶ್ರೀ ಅರುಣ್ ಹಿರಿಯಣ್ಣ ಅವರು ಭಾಗವಹಿಸಿದ್ದರು.

ಶ್ರೀ ಮೋಹನ್ದಾಸ್ ಪೈ ಅವರು ಬ್ರಾಹ್ಮಣ ಸಮುದಾಯದ ಅಭಿವೃದ್ಧಿಗೆ ಬಗ್ಗೆ ಅನೇಕ ಅಮೂಲ್ಯ ಸಲಹೆಯನ್ನು ನೀಡಿದರು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಬ್ರಾಹ್ಮಣ ಮಕ್ಕಳಿಗೆ ಸಹಾಯವನ್ನು ಮಾಡುವುದಾಗಿ ಆಶ್ವಾಸನೆ ನೀಡಿದರು.


# ಶ್ರೀ ನಾರಾಯಣ ಗುರುಕುಲ
# ಶ್ರೀ ಚಿದಂಬರಾಶ್ರಮ, ಗುಬ್ಬಿ, ತುಮಕೂರು ಜಿಲ್ಲೆ-572216.

**ವೇದ, ಸಂಸ್ಕೃತ ಮತ್ತು ಆಧುನಿಕ ಶಿಕ್ಷಣ ಪಡೆಯಲು ಇಚ್ಚಿಸುವ ತ್ರಿಮತಸ್ಥ ಬ್ರಾಹ್ಮಣ ಬಾಲಕರಿಗೆ 2023-24 ನೇ ಸಾಲಿನ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**



**ಆಶ್ರಮಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕು.**

- ವಿದ್ಯಾರ್ಥಿಗಳಿಗೆ ಉಪನಯನವಾಗಿರಬೇಕು.
- 4ನೇ ತರಗತಿ ಯಿಂದ 8 ನೇ ತರಗತಿಯವರೆಗೆ ಪ್ರವೇಶಾವಕಾಶವಿದೆ. ( ಚಿದಂಬರ ಪಬ್ಲಿಕ್ ಸ್ಕೂಲ್ - ಆಂಗ್ಲ ಮಾಧ್ಯಮ)
- 9 ಮತ್ತು 10 ನೇ ತರಗತಿಗೆ ಪ್ರತಿಭಾವಂತ ಅರ್ಹ ವಿದ್ಯಾರ್ಥಿಗಳಿಗೆ ಉಚಿತ/ರಿಯಾಯಿತಿ ಪ್ರವೇಶ.
- ಆಶ್ರಮದ ನೀತಿ ನಿಯಮಗಳನ್ನು ಪಾಲಿಸುವ ನಿಬಂಧನೆಗಳಿಗೆ ಒಳಪಡತಕ್ಕದ್ದು.

**ಆಯ್ಕೆಯಾದ ವಿದ್ಯಾರ್ಥಿಗಳಿಗೆ ಆಶ್ರಮದಲ್ಲಿ ಉಚಿತವಾಗಿ ವಸತಿಯನ್ನು ಕಲ್ಪಿಸಲಾಗುವುದು.**



**ಆಸಕ್ತ ತಂದೆ/ತಾಯಿ/ಪೋಷಕರು ಈ ಕೆಳಕಂಡ ದೂರವಾಣಿ ಮೂಲಕ ಸಂಪರ್ಕಿಸಬಹುದಾಗಿದೆ.**

**Ph : 08131 223095 Mob : 9481092117 9964273834 9663506601**






# ಹಾಸನದಲ್ಲಿ ವಿಪ್ರ ಸ್ನೇಹ ಸೌಹಾರ್ದಕೂಟ
# ಬ್ರಾಹ್ಮಣರು ರಾಜಕೀಯವಾಗಿ ಅಸ್ಪೃಶ್ಯರು – ಅಶೋಕ ಹಾರನಹಳ್ಳಿ

ಬ್ರಾಹ್ಮಣ ಸಮಾಜದಲ್ಲಿ ಯಾರೂ ಬಲವಾಗಿ ಏನನ್ನೂ ಕೇಳುವುದಿಲ್ಲ ಎಂಬ ಕಾರಣಕ್ಕೆ ಯಾವ ಸೌಲಭ್ಯವನ್ನೂ ಕೊಡುವುದಿಲ್ಲ ಮತ್ತು ಬ್ರಾಹ್ಮಣರನ್ನು ಅಭ್ಯರ್ಥಿ ಮಾಡುವುದಿಲ್ಲ. ನಾವು ಒಂದು ರೀತಿ ಸಮಾಜದಲ್ಲಿ ರಾಜಕೀಯದ ಅಸ್ಪೃಶ್ಯರಾಗಿದ್ದು, ಮುಂದಾದರೂ ಬ್ರಾಹ್ಮಣ ಸಮಾಜದವರು ಎಚ್ಚೆತ್ತುಕೊಂಡು ಒಂದು ಸಂಘಟನೆಯಾಗಿ ಒಗ್ಗೂಡಿದರೆ ಮಾತ್ರ ನಮಗೆ ಬೆಂಬಲ ಕೊಡುತ್ತಾರೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಹೇಳಿದರು.

ಹಾಸನ ಶಂಕರಮಠದಲ್ಲಿ ಹಾಸನ ನಗರ ಬ್ರಾಹ್ಮಣ ಸಭಾದ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ಹಮ್ಮಿಕೊಳ್ಳಲಾಗಿದ್ದ "ವಿಪ್ರ ಸ್ನೇಹ ಸೌಹಾರ್ದಕೂಟ" ವನ್ನು ಉದ್ಘಾಟಿಸಿ ಮಾತನಾಡಿದರು. ಶಿವಮೊಗ್ಗ, ಬೆಂಗಳೂರು, ಮೈಸೂರು ಕೆಲ ಕ್ಷೇತ್ರ ಬಿಟ್ಟರೆ ಉಳಿದ ಕಡೆ ನಮ್ಮವರು ಯಾರೂ ಕೂಗಿ ಬಲವಾಗಿ ಏನನ್ನೂ ಕೇಳುವುದಿಲ್ಲ. ಹೇಗಿದ್ದರೂ ಒಂದೇ ಪಾರ್ಟಿಗೆ ಮತ ಹಾಕುವುದಾಗಿ ಪರಿಗಣಿಸಿ ಯಾವ ಕ್ಷೇತ್ರದಲ್ಲೂ ಈ ನಮ್ಮ ಸಮುದಾಯದವರನ್ನು ಅಭ್ಯರ್ಥಿಯಾಗಿ ಮಾಡದೇ ಯಾರನ್ನೋ ತಂದು ಕೂರಿಸುತ್ತಾರೆ. ಎಲ್ಲೂ ನಮಗೆ ಪ್ರಾತಿನಿಧ್ಯ ಕೊಡದಿರುವುದು ನಮ್ಮ ದೌರ್ಭಾಗ್ಯ, ನಾವು ಒಂದು ಪಾರ್ಟಿಗೆ ಬೆಂಬಲ ಕೊಟ್ಟಾಗ, ಅವರು ಏಕೆ ನಮ್ಮನ್ನು ಗಣನೆಗೆ ತೆಗೆದುಕೊಳ್ಳಬಾರದು ಎಂಬುದು ನಮ್ಮ ಪ್ರಶ್ನೆ.

ನಮ್ಮ ಸಮಾಜಕ್ಕೆ ಮೀಸಲಾತಿ ಏಕೆ ಜಾರಿ ಮಾಡಲಿಲ್ಲ? ಇದ್ದಂತಹ 10 % ಅನ್ನೂ ಕಿತ್ತು, ಮೀಸಲಾತಿ ಇದ್ದವರಿಗೇ ಹಂಚಿದರು. ಸರ್ಕಾರ ಕೊಡಲು ಮುಂದಾದಾಗ ಹೈಕೋರ್ಟಿಗೆ ಹೋದ ಕಾರಣ ಅದು ಸ್ಥಗಿತವಾಗಿದೆ. ಇಂತಹ ಪರಿಸ್ಥಿತಿಯನ್ನು ನಮ್ಮ ಸಮುದಾಯ ಎದುರಿಸುತ್ತಿದೆ ಎಂದು ಖೇದ ವ್ಯಕ್ತಪಡಿಸಿದರು.

### ಬ್ರಾಹ್ಮಣ ಸಂಘಟನೆ ಬಲವಾಗಲಿ :

ಮಹಾಸಭೆಯು ಬ್ರಾಹ್ಮಣ ಸಂಘಟನೆಯನ್ನು ಬಲಪಡಿಸಬೇಕು. ಈ ನಿಟ್ಟಿನಲ್ಲಿ ಇಡೀ ಸಂಸ್ಥೆಯ ಸ್ವರೂಪವನ್ನೇ ಬದಲಾವಣೆ ಮಾಡಲು ಆಲೋಚನೆ ಮಾಡಲಾಗಿದೆ. ಸರ್ಕಾರವಾಗಲಿ ಅಥವಾ ಬೇರೆಯವರಾಗಲಿ ವಿಪ್ರ ಸಮುದಾಯದವರಿಗೆ ಸಹಾಯ ಮಾಡಿದರೆ ಬೇರೆ ಸಮುದಾಯದವರು ಬೇಸರ ಮಾಡಿಕೊಳ್ಳುತ್ತಾರೆ ಎಂಬ ಮನೋಭಾವ ನಮ್ಮ ಆಡಳಿತಗಾರರಲ್ಲಿ ಇರುವಂತಿದೆ ಎಂದು ಬೇಸರಿಸಿದರು. ಯಾರು ಒಟ್ಟಾಗಿ ಮತವನ್ನು ಕೊಡುತ್ತಾರೋ ಅಂತವರಿಗೆ ಬೆಂಬಲ ಸಿಗುತ್ತದೆ ಎಂದು ಕಿವಿಮಾತು ಹೇಳಿದರು.

### ಅಕರ್ಷಕ ಶೋಭಾಯಾತ್ರೆ :

ಕಾರ್ಯಕ್ರಮಕ್ಕೂ ಮೊದಲು ನಗರದ ಹಾಸನಾಂಬ ಕಲಾಕ್ಷೇತ್ರದಿಂದ ಶಂಕರಮಠದವರೆಗೂ ನಗರ ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕಿನ ವಿಪ್ರ ಸಂಘಟನೆಗಳ ಸಹಕಾರದಿಂದ ಶೋಭಾಯಾತ್ರೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಈ ಶೋಭಾಯಾತ್ರೆಯಲ್ಲಿ ವಿವಿಧ ಭಜನಾ ಮಂಡಳಿಯ ಹಲವಾರು ಗುಂಪುಗಳು ಪಾಲ್ಗೊಂಡಿದ್ದವು.

### ಗದಾಯುದ್ಧ ಯಕ್ಷಗಾನ :

ಕ್ರೀಡಾ ಹಾಗೂ ಗೀತಗಾಯನ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿತರಿಸಲಾಯಿತು. ಸಂಜೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಶ್ರೀ ಮಹಾಗಣಪತಿ ಯಕ್ಷಕೂಟ ತಂಡದವರಿಂದ ಗದಾಯುದ್ಧ ಪ್ರಸಂಗ ಆಧರಿಸಿದ ಯಕ್ಷಗಾನವಿತ್ತು. ಈ ಸಂದರ್ಭದಲ್ಲಿ ಕನ್ನಡದ ಪೂಜಾರಿ ಎಂದೇ ಹೆಸರಾದ ಹಿರೇಮಗಳೂರು ಕಣ್ಣನ್, ಜಿಲ್ಲಾ ಬ್ರಾಹ್ಮಣ ಸಭಾ ಅಧ್ಯಕ್ಷ ಹೆಚ್.ವಿ. ಶ್ರೀನಿವಾಸಮೂರ್ತಿ, ಹಾಸನದ ಶೃಂಗೇರಿ ಶಂಕರಮಠದ ಧರ್ಮಾಧಿಕಾರಿ ಎಂ.ಎಸ್. ಶ್ರೀಕಂಠಯ್ಯ, ನಗರ ಬ್ರಾಹ್ಮಣಸಭಾದ ಅಧ್ಯಕ್ಷ ಪಿ.ಎಸ್. ವೆಂಕಟೇಶ್, ಸಭಾದ ಕಾರ್ಯದರ್ಶಿ ಎಂ.ಎನ್. ಪಾಂಡುರಂಗ, ಕೋಶಾಧಿಕಾರಿ ಜಿ. ಸುರೇಶ್ ಹಾಗೂ ಇತರ ಮುಖಂಡರು ಪಾಲ್ಗೊಂಡಿದ್ದರು.

## ಸನ್ಮಾನ



ಇತ್ತೀಚೆಗೆ ಶ್ರೀ ವೀರಶೈವ ಕಲ್ಯಾಣ ಮಂಟಪದಲ್ಲಿ ಜರುಗಿದ ಎಂ ನಾಗಪ್ಪ ಪ್ರತಿಷ್ಠಾನದ ವತಿಯಿಂದ ವರ್ಷದ ವ್ಯಕ್ತಿ ಪ್ರಶಸ್ತಿಯನ್ನು ಸ್ವೀಕರಿಸಿದ ಶ್ರೀ ಅರವಿಂದ ಕುಲಕರ್ಣಿ ಅವರಿಗೆ ಸನ್ಮಾನಿಸಿ ಅಭಿನಂದಿಸಲಾಯಿತು.

# "ಬ್ರಾಹ್ಮಣರಿಗೆ ಜೀವಿತಾವಧಿ ಜಾತಿ ಪ್ರಮಾಣ ಪತ್ರ" ನೀಡಿ ಮೈಸೂರು ವಿಪ್ರ ವೃಂದದ ಅಗ್ರಹ



ಕರ್ನಾಟಕದಲ್ಲಿ ಬ್ರಾಹ್ಮಣರಿಗೆ ಜೀವಿತಾವಧಿ ಜಾತಿ ಪ್ರಮಾಣಪತ್ರ ನೀಡಬೇಕೆಂದು ಮತ್ತು EWS ಮಾನದಂಡ ತಿದ್ದುಪಡಿ ಮಾಡಬೇಕೆಂದು ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಮೈಸೂರು ಬ್ರಾಹ್ಮಣ ಯುವ ವೇದಿಕೆಯಿಂದ ಕಂದಾಯ ಇಲಾಖೆಗೆ ಅಂಚೆ ಚಳವಳಿ ಮೂಲಕ ಆಗ್ರಹಿಸಲಾಯಿತು, ಮೈಸೂರು ಬ್ರಾಹ್ಮಣ ಯುವ ವೇದಿಕೆ ಕರೆ ನೀಡಿದ 'ವಿಪ್ರರಿಗೆ ಸರ್ಕಾರಿ ಸವಲತ್ತು, ಆಗ್ರಹಿಸಿ ಅಂಚೆ ಚಳವಳಿ' ಯಲ್ಲಿ ಬ್ರಾಹ್ಮಣ ಸಂಘ ಸಂಸ್ಥೆಯ 100ಕ್ಕೂ ಹೆಚ್ಚು ವಿಪ್ರರು ಭಾಗವಹಿಸಿದ್ದರು.

ಇದೇ ಸಂಧರ್ಭದಲ್ಲಿ ಬ್ರಾಹ್ಮಣ ಯುವ ವೇದಿಕೆಯ ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ ಮಾತನಾಡಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದ ಜಾತಿಯವರಿಗೆ 10% ಮೀಸಲಾತಿ ಅಡಿಯಲ್ಲಿ 10% ಮೀಸಲಾತಿ ಯೋಜನೆ ಬ್ರಾಹ್ಮಣ ಜನಾಂಗಕ್ಕೆ ತಲುಪದಿರುವುದು ನೋವಿನ ಸಂಗತಿ. ಇದರಿಂದ ಬ್ರಾಹ್ಮಣ ಸಮುದಾಯದ ಯುವಕರಿಗೆ ಶಿಕ್ಷಣ, ಉದ್ಯೋಗ, ಮತ್ತು ಹಿರಿಯರಿಗೆ ಆರೋಗ್ಯ ಸೇರಿದಂತೆ ಅರ್ಚಕರು, ಪುರೋಹಿತರು, ಅಡುಗೆಯವರು, ಸ್ವಂತ ಉದ್ಯಮಿಗಳು ಎಲ್ಲರಿಗೂ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.

ನಂತರ ಕರ್ನಾಟಕ ರಾಜ್ಯ ಬ್ರಾಹ್ಮಣ ಮಂಡಳಿ ಸದಸ್ಯ ಎಂ.ಆರ್ ಬಾಲಕೃಷ್ಣ ಮಾತನಾಡಿ ಕಂದಾಯ ಇಲಾಖೆ ಅಧಿಕಾರಿಗಳು ಬ್ರಾಹ್ಮಣ ಸಮುದಾಯಕ್ಕೆ 10% ಮೀಸಲಾತಿ ತಲುಪಿಸಲು ಮುಂದಾಗಬೇಕು, ಇದು ಯಾವುದೇ ಸರ್ಕಾರ ಅಥವಾ ವ್ಯಕ್ತಿಯ ವಿರುದ್ಧವಾದ ಆಗ್ರಹವಲ್ಲ. ನಮ್ಮ ಬ್ರಾಹ್ಮಣ ಸಮುದಾಯಕ್ಕೆ ಸರ್ಕಾರಿ ಸವಲತ್ತು ತಲುಪಿಸಲು ಆವಶ್ಯಕವಿರುವ ಜೀವಿತಾವಧಿ ಬ್ರಾಹ್ಮಣ ಪತ್ರವನ್ನು ಕಂದಾಯ ಇಲಾಖೆ ನೀಡಲು ಮುಂದಾದರೆ ಮುಂದಿನ ಯುವಪೀಳಿಗೆ ಸರ್ಕಾರದ ಸವಲತ್ತು ಪಡೆಯಲು ಅರ್ಹರಾಗಿರುತ್ತಾರೆ ಎಂದರು,

ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಸದಸ್ಯರಾದ ಎಂ.ಆರ್. ಬಾಲಕೃಷ್ಣ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಗೌರವಾಧ್ಯಕ್ಷ ಮುಳ್ಳೂರು ಗುರುಪ್ರಸಾದ್, ಅಧ್ಯಕ್ಷರಾದ ಹೆಚ್.ಎನ್. ಶ್ರೀಧರಮೂರ್ತಿ, ಪ್ರಧಾನ ಕಾರ್ಯದರ್ಶಿ ವಿಕ್ರಮ್ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಹಾಗೂ ಇನ್ನಿತರ ವಿಪ್ರ ಮುಖಂಡರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

# ದಾವಣಗೆರೆಯಲ್ಲಿ ಮಹಿಳಾ ದಿನಾಚರಣೆ



ಇತ್ತೀಚೆಗೆ ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದಿಂದ ವಾರ್ಷಿಕೋತ್ಸವ ಮತ್ತು ಮಹಿಳಾ ದಿನಾಚರಣೆ ಕಾರ್ಯಕ್ರಮ ತುಂಬಾ ಯಶಸ್ವಿಯಾಗಿ ಶ್ರೀ ಶಂಕರ ಸಮುದಾಯ ಭವನದಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ನಳಿನಿ ಅಚ್ಚುತ್ ವಹಿಸಿದ್ದರು, ಮುಖ್ಯ ಅತಿಥಿಯಾಗಿ ಶ್ರೀಮತಿ ಸರಯಾ ಮುತಾಲಿಕ್ ಆಗಮಿಸಿದ್ದು ಮಹಿಳೆ ಅಂದು –ಇಂದು ಎನ್ನುವ ವಿಷಯದ ಬಗ್ಗೆ ತುಂಬಾ ಚೆನ್ನಾಗಿ ಮಾತನಾಡಿದರು ಇದೇ ಸಂದರ್ಭದಲ್ಲಿ ಅನೇಕ ಸಾಧನೆಯನ್ನು ಮಾಡಿದ ನಳಂದ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ, ಶ್ರೀಮತಿ ನಾಗರತ್ನ ಜಗದೀಶ್ ರವರನ್ನು ಸನ್ಮಾನಿಸಲಾಯಿತು

ಶ್ರೀಮತಿ ಸಾವಿತ್ರಮ್ಮ ರಿಂದ ಪ್ರಾರ್ಥನೆ, ಶ್ರೀಮತಿ ಶಾಂತಾ ನಾಗ್ ರಾಜ್ ಸ್ವಾಗತ, ವರದಿ ಕಾರ್ಯದರ್ಶಿ ಶ್ರೀಮತಿ ಶ್ರೀಮತಿ ಅಡಿಗ ಓದಿದರು, ಶ್ರೀಮತಿ ಕಾಮಾಕ್ಷಿ ಪಟ್ಟಾಭಿರಾಮನ್ ನಿರೂಪಣೆ, ಅತಿಥಿಗಳ ಪರಿಚಯ ಆಶಾ ಭಾಗವತ್, ಸನ್ಮಾನಿತರ ಪರಿಚಯ ಶ್ರೀಮತಿ ವಸುಧಾ ಕುಲಕರ್ಣಿ, ವಾರ್ಷಿಕೋತ್ಸವ ಅಂಗವಾಗಿ ನಡೆಸಿದ ಸ್ಪರ್ಧೆ ವಿಜೇತರ ಪಟ್ಟಿಯನ್ನು ಶ್ರೀಮತಿ ಸರಸ್ವತಿ ನಿರಂಜನ್ ಹಾಗೂ ಸುಮ ವೆಂಕಟೇಶ್ ಓದಿದರು.

ಸ್ಪರ್ಧೆಯ ಬಗ್ಗೆ ಹೇಮಾ ನಾರಾಯಣ ಮಾತನಾಡಿದರು ಕೊನೆಯಲ್ಲಿ ಶ್ರೀಮತಿ ಕೋಮಲ ವಸಂತ ಕುಮಾರ್ ವಂದಿಸಿದರು ನಂತರ ಸ್ಪರ್ಧಾ ವಿಜೇತರಿಗೆ ಬಹುಮಾನವನ್ನು ನೀಡಲಾಯಿತು ಹಾಗೂ ಮಹಿಳಾ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

# ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾ ಸುರಭಿ ಗೋಶಾಲಾ ನೂತನ ವಿಸ್ತೃತ ಕಟ್ಟಡದ ಪ್ರವೇಶೋತ್ಸವ

ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾ(ರಿ) ಪ್ರಾಯೋಜಿತ **ಸುರಭಿ ಗೋಶಾಲೆ,** ಎನ್. ಆರ್. ರಸ್ತೆ, ಮಂಡೇನಕೊಪ್ಪದಲ್ಲಿ ವಿಸ್ತರಿಸಿದ ನೂತನ ಕೊಟ್ಟಿಗೆಯ ಪ್ರವೇಶೋತ್ಸವ ಕಾರ್ಯಕ್ರಮವನ್ನು ಇತ್ತೀಚೆಗೆ ನಡೆಸಲಾಯಿತು.

ಕರ್ನಾಟಕ ರಾಜ್ಯ ಗೃಹ ಸಚಿವರಾದ ಸನ್ಮಾನ್ಯ ಶ್ರೀ ಆರಗ ಜ್ಞಾನೇಂದ್ರ, ಮಾಜಿ ಸಚಿವರು, ಹಾಲಿ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಕೆ.ಎಸ್. ಈಶ್ವರಪ್ಪ ಹಾಗೂ ಶಿವಮೊಗ್ಗ ಕ್ಷೇತ್ರದ ಸಂಸದರಾದ ಸನ್ಮಾನ್ಯ ಶ್ರೀ ಬಿ.ವೈ ರಾಘವೇಂದ್ರ ಇವರುಗಳು ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದರು.

ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀಯುತ ಕೆ.ಸಿ. ನಟರಾಜ ಭಾಗವತ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

**ಸನ್ಮಾನ್ಯ ಶ್ರೀ ಡಿ.ಎಸ್. ಅರುಣ್,** ವಿಧಾನ ಪರಿಷತ್ ಸದಸ್ಯರು, **ಸನ್ಮಾನ್ಯ ಶ್ರೀಮತಿ ಪವಿತ್ರ ರಾಮಯ್ಯ,** ಅಧ್ಯಕ್ಷರು, ಭದ್ರಾ ಅಚ್ಚುಕಟ್ಟು ಪ್ರಾಧಿಕಾರ ಶ್ರೀ ಹೆಚ್.ಎಸ್. ಶಿವಶಂಕರ್, ಮಹಾಸಭಾದ ವಿಶೇಷ ಆಹ್ವಾನಿತರು ಇವರುಗಳು ಕಾರ್ಯಕ್ರಮದಲ್ಲಿ ಇದ್ದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಮಹಾಸಭಾದ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ.ವೆಂಕಟೇಶಮೂರ್ತಿಗಳು ಕಾರ್ಯಕ್ರಮದ ನಿರೂಪಣೆ ಮಾಡಿದರು. ಈ ಕೊಟ್ಟಿಗೆ ಕಾಮಗಾರಿಗಳನ್ನು ನೀರಾವರಿ ಇಲಾಖೆಯಿಂದ ನಿರ್ಮಾಣ ಮಾಡಿಕೊಡಲಾಗಿದ್ದು, ನಿರಾವರಿ ಇಲಾಖೆಯ ಇಂಜಿನಿಯರ್‌ಗಳು, ಗೋಶಾಲೆಯಲ್ಲಿ ಬೋರ್‌ವೆಲ್ ತೆಗೆಸಲು ಜಾಗವನ್ನು ಗುರುತು ಮಾಡಿಕೊಟ್ಟವರಿಗೆ ಕಾರ್ಯಕ್ರಮದಲ್ಲಿ ಗೌರವಿಸಲಾಯಿತು. ಕಾರ್ಯಕ್ರಮದ ನಂತರ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

# ಸುವರ್ಣ ಜನ್ಮೋತ್ಸವ ಮಹೋತ್ಸವ ಗುರುವಂದನೆ



ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್ ವತಿಯಿಂದ ಕಾಡುಮಲ್ಲೇಶ್ವರ ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದ ಸಭಾ ಭವನದಲ್ಲಿ ಜಗದ್ಗುರು ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಶ್ರೀಮದುತ್ತರಾದಿಮಠಾಧೀಶರಾದ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳರವರ 50 ನೇ ವರ್ಷದ ಸುವರ್ಣ ಜನ್ಮೋತ್ಸವ ಗುರುವಂದನಾ ಕಾರ್ಯಕ್ರಮ ನಡೆಯಿತು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಮಲ್ಲೇಶ್ವರಂ ಬ್ರಾಹ್ಮಣ ಸಭಾ ಅಧ್ಯಕ್ಷರಾದ ಪ್ರಕಾಶ್ ಅಯ್ಯಂಗಾರ್, ಧಾರ್ಮಿಕ ಚಿಂತಕ ಪಾವಗಡ ಪ್ರಕಾಶ್ ರಾವ್, ಬ್ರಾಹ್ಮಣ ಮಹಾಸಭಾದ ಪ್ರಮುಖರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ನೆಮ್ಮದಿಯ ನೆರಳು ಹಿರಿಯರ ವಿಶ್ರಾಂತಿಧಾಮ ಲೋಕಾರ್ಪಣೆ

ಪರಿಪೂರ್ಣ ವಿದ್ಯಾಪೀಠ ಟ್ರಸ್ಟಿನ ವತಿಯಿಂದ ಕನಕಪುರ ರಸ್ತೆ ಹಾರೋಹಳ್ಳಿಯ ಸಂಜೀವರಾಯನದೊಡ್ಡಿಯಲ್ಲಿ ನಿರ್ಮಿಸಿರುವ ನೆಮ್ಮದಿಯ ನೆರಳು ಹಿರಿಯರ ವಿಶ್ರಾಂತಿಧಾಮದ ಲೋಕಾರ್ಪಣೆಯನ್ನು ಮುಳಬಾಗಿಲು ಶ್ರೀಪಾದರಾಜಮಠದ ಶ್ರೀ ಶ್ರೀ ಸುಜಯನಿಧಿ ತೀರ್ಥರು ನೆರವೇರಿಸಿದರು, ಇದೇ ಸಂದರ್ಭದಲ್ಲಿ ಶ್ರೀ ಸುಜಯನಿಧಿ ತೀರ್ಥರು ಟ್ರಸ್ಟಿನ ವೆಬ್ ಸೈಟ್‌ಗೆ ಚಾಲನೆಯನ್ನು ನೀಡಿದರು,

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಟ್ರಸ್ಟಿನ ಪದಾಧಿಕಾರಿಗಳಾದ ಅಧ್ಯಕ್ಷ ಮುರಳೀಧರ, ಮಾಲಿನಿ ವಾಸುದೇವ್, ಶ್ರೀಧರ್, ಸುಧೀಂದ್ರ ರಾವ್, ಬಿಂದು ಮುರಳೀಧರ, ರಾಮಚಂದ್ರ ಸೇರಿದಂತೆ ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು,

ಸಮಾರಂಭದಲ್ಲಿ ವೇದಬ್ರಹ್ಮ ಮುರಲೀಧರ್ ಭಟ್ ನೇತೃತ್ವದಲ್ಲಿ ವಾಸ್ತು ಹೋಮ, ಸುದರ್ಶನ ಹೋಮ ಮತ್ತು ಗಣಹೋಮವನ್ನು ಕೈಗೊಳ್ಳಲಾಯಿತು, ಅಭಿಷೇಕ್ ಭಟ್ ಸತ್ಯನಾರಾಯಣ ಪೂಜೆಯನ್ನು ನೆರವೇರಿಸಿಕೊಟ್ಟರು.

ವಿವಿಧ ಮಹಿಳಾ ಭಜನಾ ಮಂಡಳಿಯ ಸದಸ್ಯರು ಪಾಲ್ಗೊಂಡಿದ್ದರು, ಎಲ್ಲರಿಗೂ ನೆನಪಿನ ಕಾಣಿಕೆಯನ್ನು ನೀಡಿ ಸತ್ಕರಿಸಲಾಯಿತು.

# ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ರ್‍ಯಾಂಕ್ ವಿಜೇತರಿಗೆ ಸನ್ಮಾನ



ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾ ನಡೆಸುತ್ತಿರುವ ಬ್ರಾಹ್ಮಣ ವಿದ್ಯಾರ್ಥಿ ನಿಲಯಕ್ಕೆ 105 ವರ್ಷಗಳ ಇತಿಹಾಸವಿದೆ. 1918 ಮಾರ್ಚ್ 1 ರಲ್ಲಿ ಪ್ರಾರಂಭವಾದಾಗ ಅದೊಂದು ಚಿಕ್ಕ ಸಂಸ್ಥೆ. ಆದರೆ ಉದಾತ್ತವಾದ ಉದ್ದೇಶವನ್ನಿಟ್ಟುಕೊಂಡು ಮಲೆನಾಡಿನ ಮತ್ತು ಸುತ್ತಮುತ್ತಲಿನ ಜಿಲ್ಲೆಯ ಗಂಡು ಮಕ್ಕಳಿಗೆ ಊಟ ಮತ್ತು ವಸತಿಯ ಸಮಸ್ಯೆಯಿಂದಾಗಿ ಅವರ ಉನ್ನತ ಶಿಕ್ಷಣ ಮೊಟಕುಗೊಳ್ಳಬಾರದೆಂಬ ಧ್ಯೇಯದೊಂದಿಗೆ ಸ್ಥಾಪಿತವಾದ ಹಾಸ್ಟೆಲ್ ಇಂದು ಬೃಹತ್ ಗಾತ್ರದಲ್ಲಿ ಬೆಳೆದು ನಿಂತಿದೆ. ಮೂಲ ಉದ್ದೇಶವಾದ ಮಕ್ಕಳನ್ನು ಸ್ವಧರ್ಮಾಚರಣೆಯೊಂದಿಗೆ ಸಂಸ್ಕಾರವಂತ ಪ್ರಜೆಗಳನ್ನಾಗಿ ರೂಪಿಸುವ ಧ್ಯೇಯ ಅನೂಚಾನವಾಗಿ ಮುಂದುವರೆದುಕೊಂಡು ಬಂದಿದೆ. ಇಂದು ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿ ಅಧ್ಯಯನ ಮಾಡುತ್ತಿದ್ದಾರೆ.

ಇಂದು ವಿದ್ಯಾರ್ಥಿ ನಿಲಯದಲ್ಲಿ 50 ಸುಸಜ್ಜಿತ ಕೊಠಡಿಗಳಿದ್ದು ಸುಮಾರು 140 ಮಕ್ಕಳಿಗೆ ಆಶ್ರಯ ಕೊಡಬಹುದಾಗಿದೆ. ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿದೆ. ವಿಶಾಲವಾದ ಪ್ರಾರ್ಥನಾ ಮಂದಿರ, ಆಧುನಿಕ ಮಾದರಿಯ ಅಡುಗೆ ಮನೆ, ಗ್ರಂಥಾಲಯ, ಜಿಮ್ ರೂಂ ಮತ್ತು ಪ್ರತಿ ಅಂತಸ್ತಿನಲ್ಲೂ ಶೌಚಾಲಯ ಮತ್ತು ಸ್ನಾನಗೃಹವಿದೆ. ಬಟ್ಟೆ ಒಗಯಲು ಮತ್ತು ಒಣಗಿಸಲು ವಿಶಾಲವಾದ ಸುರಕ್ಷಿತ ಸ್ಥಳಾವಕಾಶ ಒದಗಿಸಿದೆ. ದೈಹಿಕ ಬೆಳವಣಿಗೆಗೆ ಪೂರಕವಾಗಿ ಆಟವಾಡಲು ಒಳಭಾಗ ಮತ್ತು ಮುಂಭಾಗದಲ್ಲಿ ಮೈದಾನವಿದೆ. ಅಂದಿನಿಂದ ಇಂದಿನವರೆಗೂ ಸಹ ಶುಚಿ – ರುಚಿ, ಸ್ವಚ್ಛತೆ – ಶುದ್ಧತೆಗೆ ಪ್ರಥಮ ಪ್ರಾಶಸ್ತ್ಯ ನೀಡಲಾಗಿದೆ.







2022–23 ನೇ ಶೈಕ್ಷಣಿಕ ವರ್ಷದಲ್ಲಿ ಹಾಸ್ಟೆಲ್‌ನ ವಿದ್ಯಾರ್ಥಿ ಶ್ರೀ ಅಭಿರಾಮ ಕುಲಕರ್ಣಿ ಅಂತಿಮ ವರ್ಷದ ಎಂ.ಬಿ.ಬಿ.ಎಸ್. ನಲ್ಲಿ 3 ನೇ ರ್‍ಯಾಂಕ್ ಪಡೆದಿದ್ದವರನ್ನು ಶ್ರೀ ಕ್ಷೇತ್ರ ಹೊರನಾಡಿನ ಆದಿಶಕ್ತ್ಯಾತ್ಮಿಕ ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನದ ಧರ್ಮಕರ್ತರಾದ ಅಂಬಾಚರಣದಾಸರಾದ ಡಾ॥ ಭೀಮೇಶ್ವರ ಜೋಷಿರವರ ವಿದ್ಯಾರ್ಥಿಯನ್ನು ಅಭಿನಂದಿಸಿ ಆಶೀರ್ವದಿಸಿದರು. ಹಾಗೂ ಎಲ್ಲಾ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿತ್ತಾ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಆತ್ಮಬಲವನ್ನು ವೃದ್ಧಿಸಿಕೊಳ್ಳಬೇಕು. ಅದಕ್ಕೆ ಮೂಲ ಸಾಧನವೇ "ಗಾಯತ್ರಿ ಉಪಾಸನೆ" ಇದರಿಂದ ನಿಮ್ಮ ಉದ್ದೇಶ ನಂಬಿಕೆ, ವಿಶ್ವಾಸ ಹೆಚ್ಚಾಗಿ ವಿದ್ಯಾವಂತರಾಗಿ ಪ್ರಜ್ಞಾವಂತರಾಗಿ ಯಶೋವಂತರಾಗುವಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಂಘಟನಾ ಕಾರ್ಯದರ್ಶಿಗಳಾದ ಡಾ. ರಾಘವೇಂದ್ರ ಭಟ್‌ರವರೂ ಸಹ ಉಪಸ್ಥಿತರಿದ್ದರು.

ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ. ವೆಂಕಟೇಶಮೂರ್ತಿ, ಸಹ ಕಾರ್ಯದರ್ಶಿಗಳಾ ಡಾ. ನಾಗಮಣಿ ಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಹಾಸ್ಟೆಲ್ ಸಂಚಾಲಕರಾದ ಶ್ರೀ ಎನ್.ವಿ. ಶಂಕರನಾರಾಯಣರವರು ಪ್ರಾಸ್ತಾವಿಕ ನುಡಿಗಳನ್ನಾಡಿ ಎಲ್ಲರನ್ನು ಸ್ವಾಗತಿಸಿದರು. ಶ್ರೀ ಯು.ಎಸ್. ಕೇಶವಮೂರ್ತಿ ವಂದಿಸಿದರು. ಶ್ರೀ ಹೆಚ್. ಸಿ. ರವಿಕುಮಾರ್ ನಿರೂಪಣೆ ಮಾಡಿದರು.

# ಲಕ್ಷ ಗಾಯತ್ರಿ ಜಪ ಹೋಮ – ಮಂಡ್ಯ





ದಿನಾಂಕ 02/04/2023 ರಂದು ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾ ವತಿಯಿಂದ ಮಂಡ್ಯ ನಗರದಲ್ಲಿ ಲೋಕ ಕಲ್ಯಾಣಾರ್ಥವಾಗಿ ದಶ ಲಕ್ಷ ಗಾಯತ್ರಿ ಜಪ ಹಾಗು ಲಕ್ಷ ಗಾಯತ್ರಿ ಜಪ ಹೋಮವನ್ನು ಅತ್ಯಂತ ಶ್ರದ್ಧೆ ಹಾಗು ಭಕ್ತಿಯಿಂದ ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ಶ್ರೀ ಅವಧೂತ ಅರ್ಜುನ ಗುರೂಜಿ ಅವರು ಹಾಗೂ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ವೇದಬ್ರಹ್ಮ ಶ್ರೀ ಭಾನುಪ್ರಕಾಶ ಶರ್ಮ ಅವರು, ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು, ಮಹಾಸಭಾದ ಸಂಘಟನಾ ಕಾರ್ಯದರ್ಶಿಗಳಾದ ಡಾ.ಬಿ.ಎಸ್. ರಾಘವೇಂದ್ರ ಭಟ್, ಸಹ ಕಾರ್ಯದರ್ಶಿಗಳಾದ ಶ್ರೀ ಮುರಳೀಧರ್, ಕೆ.ಆರ್.ಪುರಂ, ಮಂಡ್ಯ ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರು ಹಾಗೂ ಕಾರ್ಯಕಾರಿಣಿ ಸದಸ್ಯರು ಹಾಗೂ ಜಿಲ್ಲೆಯ ವಿಪ್ರ ಬಂಧುಗಳು ಭಾಗವಹಿಸಿದ್ದರು.


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)**

**ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.**

**ಮೊ : 944 26771695**

**ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ**

ಹೆಸರು : ______________________________

ವಿಳಾಸ ______________________________

______________________________

ಸದಸ್ಯತ್ವದ ಸಂಖ್ಯೆ : ______________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.


**ಚಂದಾದಾರರ ಸಹಿ/–**

**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 10725001020583011
FSC : KARB0000107BRANCH : BANASHANKARI 2ND STAGE

**ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸುವುದು.**

# ಶ್ರೀ ಕೆ.ಎನ್. ಸುಬ್ರಹ್ಮಣ್ಯರವರಿಂದ "ರಾಮ ಕೋಟಿ ಲಿಖಿತ ಜಪ ಯಜ್ಞ"

ಬೆಂಗಳೂರಿನ ಇಂದಿರಾಗಾಂಧಿ ಸರ್ಕಲ್, ಜೆ.ಪಿ ನಗರದ ಅಕ್ಷಯ ವಿಪ್ರ ಮಹಾಸಭಾದ ವತಿಯಿಂದ ಶ್ರೀ ರಾಮ ಕೋಟಿ ಲಿಖಿತ ಜಪ ಯಜ್ಞ ದೀಕ್ಷೆ ಪ್ರಯುಕ್ತ ಯೋಜಿಸಲಾದ ಕಾರ್ಯಕ್ರಮದಲ್ಲಿ ಬ್ಯಾಂಕ್ ಕಾಲೋನಿ ನಾಗೇಂದ್ರ ಬ್ಲಾಕ್‌ನಲ್ಲಿ ವಾಸಿಸುತ್ತಿರುವ ಹಿರಿಯ ನಾಗರಿಕರಾದ 93 ವರ್ಷದ ಶ್ರೀಯುತ ಪೂಜನೀಯ ಸುಬ್ರಹ್ಮಣ್ಯಂ ಕೆ.ಎನ್. ಅವರಿಂದ 3,56,000 ಶ್ರೀರಾಮ ನಾಮಗಳನ್ನೊಳಗೊಂಡ 4 ಶ್ರೀರಾಮಕೋಟಿ ಪುಸ್ತಕಗಳನ್ನು ಭಕ್ತಿ ಪೂರ್ವಕವಾಗಿ ಅವರ ಆಪ್ತ ಕುಟುಂಬದವರ ಸಮ್ಮುಖದಲ್ಲಿ ಪೂಜಿಸಿ, ಸ್ವೀಕರಿಸಿ ಸನ್ಮಾನಿಸಲಾಯಿತು. ಶ್ರೀಮತಿ ಸಂಧ್ಯಾ, ಶ್ರೀ ವಿಜಯಕುಮಾರ್ ಭಟ್ ಹಾಗೂ ಶ್ರೀಮತಿ ಗಾಯತ್ರಿ ದುರ್ಗಾಪ್ರಸಾದ, ಮಹಾಸಭೆಯ ಸದಸ್ಯರು ಭಾಗವಹಿಸಿದ್ದರು.








**ಗಾಯತ್ರಿಭವನದಲ್ಲಿ ಶ್ರೀ ರಾಮನಾಮಿಯಂದು ವಿಶೇಷ ಪೂಜೆಯೊಂದಿಗೆ ಪಾನಕ, ಕೊಸಂಬರಿ, ಹಣ್ಣುಗಳನ್ನು ಸಾರ್ವಜನಿಕರಿಗೆ ವಿತರಿಸಲಾಯಿತು.**

# ಭೂಮಿಪೂಜೆ



ಬಂಗಾರಪೇಟೆ ತಾಲೂಕಿನ ಹರಿಹರಪುರ ಮಠಕ್ಕೆ ಸಂಬಂಧಪಟ್ಟಂತಹ ಓಂಕಾರ ಕ್ಷೇತ್ರದ ಆವರಣದಲ್ಲಿ ಈ ಶುಭ ದಿನ ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಋಷಿಗಳ ಹಾಗೂ ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳಾದ ಆದಿ ಶಂಕರಾಚಾರ್ಯರು ಮತ್ತು ಶ್ರೀ ಸುರೇಶ್ವರಾಚಾರ್ಯರ ದೇವಸ್ಥಾನಕ್ಕೆ ಈ ದಿನ ಭೂಮಿ ಪೂಜೆಯನ್ನು ಮಾಡಲಾಯಿತು. ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀಯುತ ಅಶೋಕ ಹಾರನಹಳ್ಳಿ, ರಾಜೇಂದ್ರ ಪ್ರಸಾದ, ಸುಧಾಕರ ಬಾಬು, ವೇಣುಗೋಪಾಲ್ ಮತ್ತು ಎಲ್ಲಾ ಬ್ರಾಹ್ಮಣ ಸಂಘದ ಪದಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಇಸ್ರೋ ಮಾಜಿ ರಾಕೆಟ್ ವಿಜ್ಞಾನಿ, ಲೇಖಕ ಸಿ.ಆರ್. ಸತ್ಯ ವಿಧಿವಶ



ಭಾರತದ ರಾಕೆಟ್ ತಂತ್ರಜ್ಞಾನ ಅಂಬೆಗಾಲಿಡುತ್ತಿದ್ದ ವೇಳೆ ಅದಕ್ಕೆ ಸರಿಯಾದ ದಿಕ್ಕು ತೋರಿಸಿದವರಲ್ಲಿ ಒಬ್ಬರಾದ ಇಸ್ರೋದ ನಿವೃತ್ತ ರಾಕೆಟ್ ವಿಜ್ಞಾನಿ, ಲೇಖಕ ಸಿ.ಆರ್. ಸತ್ಯ (80) ನಗರದ ಬ್ಯಾಪ್ಟಿಸ್ಟ್ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

1942ರ ಆಗಸ್ಟ್ 12ರಂದು ಜನಿಸಿದ್ದ ಸಿ.ಆರ್. ಸತ್ಯ ಅವರು 1965ರಲ್ಲಿ ಎಂಜಿನಿಯರಿಂಗ್ ಪದವಿ ಬಳಿಕ ಅಣುವಿಜ್ಞಾನ ಸಂಸ್ಥೆ ಸೇರಿ ತರಬೇತಿ ಪಡೆದಿದ್ದರು. ಬಳಿಕ ಕೇರಳದ ಥಂಬಾ ಕಾರೆಟ್ ಉಡಾವಣಾ ಕೇಂದ್ರದಲ್ಲಿ ವೃತ್ತಿ ಜೀವನ ಆರಂಭಿಸಿದ್ದರು. ಬಳಿಕ ಇಸ್ರೋದಲ್ಲಿ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಮಾರ್ಗದರ್ಶನದಲ್ಲಿ ಕ್ಷಮತೆ ತೋರಿದ್ದರು. ಆರಂಭದಲ್ಲಿ ಇವರಿಗೆ ಅಣುತಜ್ಞ ಡಾ. ರಾಜರಾಮಣ್ಣ ಅವರು ಮಾರ್ಗದರ್ಶಕರಾಗಿದ್ದರು. ಸುಮಾರು 40 ವರ್ಷಕ್ಕೂ ಅಧಿಕ ಕಾಲ ರಾಕೆಟ್ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿದ್ದರು.

ಟಾಟಾ ಅಡ್ವಾನ್ಸ್ಡ್ ಸಿಸ್ಟಂ ಸಂಸ್ಥೆಗೆ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದ ಸಿ.ಆರ್. ಸತ್ಯ ಅವರು ಲೇಖಕರಾಗಿಯೂ ಖ್ಯಾತಿ ಗಳಿಸಿದ್ದವರು. ಹಾಸ್ಯಪತ್ರಿಕೆ "ಅಪರಂಜಿ" ಗೆ ಇವರು ಬರೆದ ಲಲಿತ ಪ್ರಬಂಧ, ಸುಬ್ಬಮ್ಮನ ಉಪವಾಸ ಗೀತೆ, ಡಾ.ಎ.ಆರ್. ಕೃಷ್ಣಶಾಸ್ತ್ರಿ ಜೀವನ ಚರಿತ್ರೆ, ತಿರುವನಂತಪುರದ ಅನಂತಪದ್ಮನಾಭಸ್ವಾಮಿ ದೇವಸ್ಥಾನದ ಕಲ್ಲುಗಳ ಮೇಲೆ ಮಾಡಿದ ಸಂಶೋಧನೆ, ಅದರ ಕುರಿತು ಬರೆದ ಅಳಿವಲ್ಲ ಸ್ಥಾವರ (ಸೆಂಟಿನಲ್ಸ್ ಆಫ್ ಗ್ಲೋರಿ) ಕೃತಿ ಜನಪ್ರಿಯವಾಗಿದೆ. 11 ಕೃತಿಗಳನ್ನು ಬರೆದಿದ್ದ ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿದೆ.

ಸೈಕಲ್ ಮೇಲೆ ರಾಕೆಟ್ ಮೂತಿ ಸಾಗಿಸಿದ್ದರು : ಇಸ್ರೋ ಸಿದ್ಧಪಡಿಸುತ್ತಿದ್ದ ರಾಕೆಟ್‌ಗೆ ಬಳಸಲಾದ 'ನೋಸ್‌ಕೋನ್' ನ್ನು ಸೈಕಲ್‌ನಲ್ಲಿ ಇಟ್ಟು ಸಾಗಿಸುತ್ತಿರುವ ಚಿತ್ರವನ್ನು ನೋಡದವರಿಲ್ಲ. ಆ ಚಿತ್ರದಲ್ಲಿ ಬಲಭಾಗದಲ್ಲಿದ್ದವರು ಸಿ.ಆರ್.ಸತ್ಯ ಇಸ್ರೋದ ಕಚೇರಿಯಿಂದ ದೂರವಿದ್ದ ಬೆಸ್ತರ ಮನೆಯೊಂದರಲ್ಲಿ ನೋಸ್‌ಕೋಸ್‌ನ ರಾಸಾಯನಿಕ ಪ್ರಕ್ರಿಯೆ ಪೂರ್ಣಗೊಳಿಸಿದೊಂಡು ಸೈಕಲ್‌ನಲ್ಲಿ ತರುತ್ತಿದ್ದ ಫೋಟೋವನ್ನು ಫ್ರಾನ್ಸ್‌ನ ಫೋಟೋ ಗ್ರಾಫರ್ ಒಬ್ಬರು ತೆಗೆದಿದ್ದರು.

## ವಿಜಯನಗರ ವಿಪ್ರವೃಂದದ ಹೆಚ್.ಎಸ್.ಎನ್. ಸುಧೀಂದ್ರರಾವ್



ವಿಜಯನಗರ ವಿಪ್ರವೃಂದದ ಅಧ್ಯಕ್ಷರಾಗಿದ್ದ ಶ್ರೀಯುತ ಹೆಚ್.ಎನ್. ಸುಧೀಂದ್ರರಾವ್‌ರವರು ದಿನಾಂಕ 09.03.2023ರ ಗುರುವಾರ ನಿಧನರಾದರು. ಇವರು ಬೆಂಗಳೂರಿನ ಲಯನ್ಸ್ ಕ್ಲಬ್‌ನ ಸದಸ್ಯರಾಗಿದ್ದರಲ್ಲದೆ ಅನೇಕ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕದಲ್ಲಿದ್ದು ಅನೇಕ ಸಮಾಜಮುಖಿ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅಪಾರ ಬಂಧುಗಳು ಮತ್ತು ಸ್ನೇಹಿತರು ಇವರೊಂದಿಗೆ ಕೈ ಜೋಡಿಸಿ ಸಮಾಜಮುಖಿ ಕೆಲಸದಲ್ಲಿ ಭಾಗಿಯಾಗುತ್ತಿದ್ದರು. ಭಗವಂತನು ಇವರಿಗೆ ಚಿರಶಾಂತಿಯನ್ನು ಕೊಟ್ಟು ಇವರ ಕುಟುಂಬದವರೆಲ್ಲರಿಗೂ ದುಃಖ ಭರಿಸುವ ಶಕ್ತಿಯನ್ನು ಕೊಡಲಿ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಭಗವಂತನಲ್ಲಿ ಪ್ರಾರ್ಥಿಸುತ್ತದೆ.

## ವೇ॥ ಬ್ರ॥ ಶ್ರೀ ಅ.ಪ. ರಾಮ ಭಟ್ಟರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ

ದಿನಾಂಕ 22-02-2023 ರಂದು ನಮ್ಮನ್ನಗಲಿದ ಋಷಿ ಸದೃಶ ಜೀವನ ನಡೆಸಿದ ಪುರೋಹಿತರೂ, ಮಾರ್ಗದರ್ಶಕರೂ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರವರ್ತಕರೂ, ಪ್ರಧಾನ ಅರ್ಚಕರಾದ ಪೂಜನೀಯ ವೇ॥ ಬ್ರ॥ ಶ್ರೀ ಅ. ಪ. ರಾಮಭಟ್ಟರು, ರವೀಂದ್ರನಗರ ಪ್ರಸನ್ನ ಗಣಪತಿ (ಬಲಮುರಿ) ದೇವಸ್ಥಾನ, ರವೀಂದ್ರ ನಗರ, ಶಿವಮೊಗ್ಗ, ಇವರಿಗೆ ದಿನಾಂಕ 07-03-2023 ರಂದು ಮಂಗಳವಾರ ಬೆಳಿಗ್ಗೆ 8.30 ರಿಂದ ಶ್ರೀ ಗಾಯತ್ರಿ ಮಾಂಗಲ್ಯ ಮಂದಿರ, ಬಿ.ಹೆಚ್. ರಸ್ತೆ, ಶಿವಮೊಗ್ಗ ಇಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಲಾಯಿತು.

ರುದ್ರ ಪಠಣ, ವಿಷ್ಣು ಸಹಸ್ರನಾಮ, ಭಜನೆ, ದೇವರನಾಮ ಗಾಯನ ನಡೆಸಲಾಯಿತು. ನಂತರ 11.00 ಗಂಟೆಯಿಂದ "ನುಡಿ ನಮನ" ಸಮಾಜದ ವಿವಿಧ ಕ್ಷೇತ್ರಗಳ ಪ್ರತಿನಿಧಿಗಳಿಂದ ನುಡಿ ನಮನ ಸಲ್ಲಿಸಲಾಯಿತು. ಈ ಕಾರ್ಯಕ್ರಮಕ್ಕೆ ಸಮಾಜದ ಅನೇಕ ಸಂಘ ಸಂಸ್ಥೆಗಳಿಂದ ವಿವಿಧ ಕ್ಷೇತ್ರಗಳಿಂದ ಹಾಗೂ ಅವರ ಶಿಷ್ಯ ವೃಂದದವರು ಆಗಮಿಸಿದ್ದರು. ಈ ಕಾರ್ಯಕ್ರಮವನ್ನು ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾ ಹಾಗೂ ಅವರ ಭಕ್ತ ವೃಂದದವರಿಂದ ನಡೆಸಲಾಯಿತು.

# ಪ್ರಖ್ಯಾತ ಶಿಕ್ಷಣತಜ್ಞೆ, ಸಾಹಿತಿ ಪ್ರೊ. ಲಲಿತಾಂಬ ಚಂದ್ರಶೇಖರ್



ಸೋಮವಾರ ಮಾರ್ಚ್ 20, 2023ರಂದು ದೈವಾಧೀನರಾದ ಬನಶಂಕರಿ ಎರಡನೇ ಹಂತದ ನಿವಾಸಿಯಾದ ಪ್ರೊ. ಲಲಿತಾಂಬ ಚಂದ್ರಶೇಖರ್ ಅವರು (94ವರ್ಷ) ನಮ್ಮ ಕನ್ನಡನಾಡಿನ ಶ್ರೇಷ್ಠ ಶಿಕ್ಷಣತಜ್ಞೆ, ಖ್ಯಾತ ಸಾಹಿತಿ, ಬಹುಭಾಷಾ ಕೋವಿದೆ, ಧಾರ್ಮಿಕತೆಯ ಪ್ರತಿರೂಪ, ಸಂಸ್ಕೃತತಜ್ಞೆ ಮತ್ತು ಭಾರತೀಯ ಸಂಸ್ಕೃತಿ–ಸಂಪ್ರದಾಯಗಳ ಪ್ರತಿನಿಧಿ. 1929ರಲ್ಲಿ ದಾವಣಗೆರೆಯಲ್ಲಿ ಶ್ರೀಮತಿ ಪಾರ್ವತಮ್ಮ–ಶ್ರೀ ವೆಂಕಟಕೃಷ್ಣಯ್ಯರವರ ಸುಪುತ್ರಿಯಾಗಿ ಜನಿಸಿ, ಕೇವಲ 17ನೇ ವರ್ಷದಲ್ಲಿ ವಿಜ್ಞಾನ ಪದವಿಧರೆಯಾಗಿ, ಹಾಸನದ ಶ್ರೀ ಚಂದ್ರಶೇಖರ್ ಅವರನ್ನು ವಿವಾಹವಾಗಿದ್ದರು. ಕೌಟುಂಬಿಕ ಜವಾಬ್ದಾರಿಯೊಂದಿಗೆ ಆಂಗ್ಲಭಾಷೆ, ಭೌತಶಾಸ್ತ್ರ, ಶಿಕ್ಷಣ ವಿಷಯಗಳಲ್ಲಿ ಮೂರು ಸ್ನಾತಕೋತ್ತರ ಪದವಿಧರರಾಗಿ, ಹೈದರಾಬಾದ್‌ನಲ್ಲಿ ಶಿಕ್ಷಣ ಸೇವೆಗೆ ಸೇರಿ, ಹಂತ ಹಂತವಾಗಿ ಪದೋನ್ನತಿ ಹೊಂದಿ, ಶಿಕ್ಷಣ ತರಬೇತಿ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿ, ಸಾವಿರಾರು ಶಿಕ್ಷಕರನ್ನು ತರಬೇತಿಗೊಳಿಸಿದರು. ಈ ದೇಶದ ಹಿಂದಿನ ಜನಪ್ರಿಯ ಪ್ರಧಾನಮಂತ್ರಿಗಳಾಗಿದ್ದ ಸನ್ಮಾನ್ಯ ಡಾ. ಪಿ.ವಿ. ನರಸಿಂಹರಾವ್ ಅವರ ಹೆಣ್ಣುಮಕ್ಕಳಿಗೆ ಪಾಠ ಹೇಳಿದ ಹೆಗ್ಗಳಿಕೆ ಇವರದು.

ಕನ್ನಡ, ಸಂಸ್ಕೃತ, ಅಂಗ್ಲ, ಹಿಂದಿ, ಉರ್ದು ಭಾಷಾ – ಸಾಹಿತ್ಯವನ್ನು ಚೆನ್ನಾಗಿ ಓದಿದ್ದ ಇವರು ಹರಿಕಥಾ ಪ್ರವೀಣೆ ಸಹ. ತಮ್ಮ ವೃತ್ತಿಯ ಜೊತೆಗೆ ಹಾಸ್ಯ–ಶಿಶುಸಾಹಿತ್ಯ, ನಾಟಕಗಳು ರಚಿಸಿದ್ದರು. ಹತ್ತಾರು ಕಾದಂಬರಿಗಳನ್ನು ರಚಿಸಿದ್ದಾರೆ. 'ಸರಸ್ವತಿ ಸಂಹಾರವೇ' ಕಾದಂಬರಿಯನ್ನು ಆಧರಿಸಿ, ಚಲನಚಿತ್ರವೂ ನಿರ್ಮಾಣವಾಯಿತು.

ಸಾಹಿತ್ಯ ಕಾಯಕದೊಂದಿಗೆ ಪ್ರೊ. ಲಲಿತಾಂಬಾ ಅವರು ಸಂಸ್ಕೃತ–ಕನ್ನಡದಲ್ಲಿ ರಚಿಸಿರುವ ಭಕ್ತಿ–ನವಗ್ರಹ ಕೀರ್ತನೆಗಳು, ಕರ್ನಾಟಕ ಶಾಸ್ತ್ರೀಯ ಹಾಗೂ ಹಿಂದೂಸ್ಥಾನಿ ಸಂಗೀತ ಶೈಲಿಯಲ್ಲಿ, ಧ್ವನಿಸುರಳಿಗಳಾಗಿ ಹೊರಬಂದಿವೆ. ಸಂಸ್ಕೃತ–ಕನ್ನಡ ಭಾಷೆಗಳಲ್ಲಿ ಹರಿಕಥೆ ಮಾಡಿ ಭಾರತೀಯ ಸನಾತನ ಮೌಲ್ಯಗಳನ್ನು ಜನಮಾನಸದಲ್ಲಿ ಪ್ರತಿಪಾದಿಸಿದ್ದರು.

ಪ್ರೊ. ಲಲಿತಾಂಬಾ ಅವರು ಶಿಕ್ಷಣ, ಸಾಹಿತ್ಯ, ಸಂಗೀತ, ಭಾಷೆಗಳು, ಆಧ್ಯಾತ್ಮಿಕತೆ ಕ್ಷೇತ್ರಗಳಲ್ಲಿ ಸಲ್ಲಿಸಿದ ಮೂರು ದಶಕಗಳಿಗೂ ಮೀರಿದ ಸೇವೆಗಳಿಗೆ 35ಕ್ಕೂ ಹೆಚ್ಚು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಪ್ರಶಸ್ತಿಗಳು ಹುಡುಕಿಕೊಂಡು ಬಂದವು. ಅವುಗಳಲ್ಲಿ ಪ್ರಮುಖವಾದವು ಅಂತಾರಾಷ್ಟ್ರೀಯ ವೃತ್ತಿನಿರತ ಮತ್ತು ವಾಣಿಜ್ಯೋದ್ಯಮಿ ಮಹಿಳೆ ಸಂಘ ಪ್ರಶಸ್ತಿ (1998), ಅಮೆರಿಕನ್ ಭಯಾಗ್ರಾಫಿಕಲ್ ಇನ್ಸ್‌ಟಿಟ್ಯೂಟಿನ ವಿಶೇಷ ಗೌರವ (1998), ಆಂಧ್ರ ಸರ್ಕಾರ, ಕೇಂದ್ರ ಸರ್ಕಾರದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ, ಆದರ್ಶ ಶಿಕ್ಷಕಿ ಪ್ರಶಸ್ತಿ (2008), ಕನ್ನಡ ಸಾಹಿತ್ಯ ಪರಿಷತ್‌ನ ಶ್ರೇಷ್ಠ ಲೇಖಕಿ ಪ್ರಶಸ್ತಿ (2007) ಮುಂತಾದವು.

ಹೈದರಾಬಾದ್‌ನ ಜ್ಯೋತಿಶ್ಯಾಸ್ತ್ರಜ್ಞ ಶ್ರೀ ಸೇತುಮಾಧವರಾವ್ ಪಗಡಿ ಅವರಲ್ಲಿ ಜ್ಯೋತಿಷ್ಯ ಕಲಿತು, ಯಾವುದೇ ಫಲಾಪೇಕ್ಷೆಯಿಲ್ಲದೆ ಅವರ ಸಲಹೆ ಕೇಳಿದ ಸಾವಿರಾರು ಕುಟುಂಬಗಳಿಗೆ ಸೂಕ್ತ ಜೀವನ ನಡೆಸಲು ಮಾರ್ಗದರ್ಶಕರಾಗಿದ್ದರು.

ಆಂಧ್ರಪ್ರದೇಶ ಸರ್ಕಾರದ ಕೃಷಿ ಇಲಾಖೆಯಲ್ಲಿ ಸಹನಿರ್ದೇಶಕರಾಗಿದ್ದ ಪತಿ ಶ್ರೀ ಹೆಚ್.ಜಿ. ಚಂದ್ರಶೇಖರ್, ಸುಪುತ್ರರಾದ ಟಿ.ಎಲ್.ಆರ್.ಎನ್‌ಒಡಬ್ಲ್ಯು ಕನ್ಸಲ್ಟೆಂಟಿನ ಸಂಸ್ಥಾಪಕರಾದ ಶ್ರೀ ಬದರೀನಾಥ್, ನೈಸರ್ಗಿಕ ತೈಲ ಅನ್ವೇಷಣಾ ಸಂಸ್ಥೆಯ ಸ್ಥಾಪಕರಾದ ಶ್ರೀ ವಿಶ್ವನಾಥ್‌ಕುಮಾರ್, ಖ್ಯಾತ ಹೃದಯತಜ್ಞ, ಡಾ॥ ಸಿ. ಚಂದ್ರಮೌಳಿ ಸ್ವಾಮಿ, ಕುಟುಂಬ ಪರಿವಾರ, ಅಪಾರ ಸಂಖ್ಯೆಯ ಬಂಧು–ಮಿತ್ರರನ್ನು ಪ್ರೊ. ಲಲಿತಾಂಬ ಚಂದ್ರಶೆಖರ್ ಅವರು ಅಗಲಿದ್ದಾರೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು–ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

**ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,**

**ಬನಶಂಕರಿ 2ನೆ ಹಂತ, ಬೆಂಗಳೂರು–70.**

**ದೂರವಾಣಿ : 080–26770066/26771695**

**ಸಮಯ : ಸಂಜೆ 5.00 ರಿಂದ 7.00 ರವರೆಗೆ**

**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು : ಶ್ರೀಮತಿ ಜಯಲತಾ ಸತ್ಯನಾರಾಯಣ್**

**ಮೊ. : 9916325902**


**ಸದಸ್ಯರು**

**ಶ್ರೀಮತಿ ನಳಿನಿ ನಟರಾಜ್, ಮೊ. : 9481788495**

**ಶ್ರೀಮತಿ ಗಾಯತ್ರಿ ರಾವ್, ಮೊ>9980481245**

# ರಾಷ್ಟ್ರಕ್ಕೆ ಶಂಕರಾಚಾರ್ಯರ ಅನುಪಮ ಕೊಡುಗೆ

**– ಪ್ರೊ. ಎಂ.ಕೆ. ಶ್ರೀಧರ್**



ಭಾರತ ಸರ್ಕಾರ ಪ್ರತಿವರ್ಷ ಶಂಕರಾಚಾರ್ಯರ ಜನ್ಮದಿನೋತ್ಸವದ ಅಂಗವಾಗಿ ಮೇ 18 ತಾರೀಖನ್ನು "ರಾಷ್ಟ್ರೀಯ ದಾರ್ಶನಿಕರ ದಿನ' ಎಂದು ಘೋಷಿಸಿದೆ. ಅಂದು ದೇಶದಾದ್ಯಂತ ಎಲ್ಲ ವಿಶ್ವವಿದ್ಯಾಲಯಗಳು, ದರ್ಶನ ಅಥವಾ ತತ್ತ್ವಶಾಸ್ತ್ರ ಬೋಧಿಸುವ ಸಂಸ್ಥೆಗಳು ನಮ್ಮ ಹಾಗೂ ಇತರ ದೇಶಗಳ ಪ್ರಸಿದ್ಧ ತತ್ತ್ವಶಾಸ್ತ್ರಜ್ಞರ, ಚಿಂತಕರ ನೆನಪು ಮಾಡಿಕೊಂಡು ಅವರ ಜೀವನ–ಸಾಧನೆ–ಉಪದೇಶಗಳಿಗೆ ಸಂಬಂಧಿಸಿದ ಉಪನ್ಯಾಸ, ವಿಚಾರಗೋಷ್ಠಿಗಳನ್ನು ಏರ್ಪಡಿಸುತ್ತವೆ. ಶಂಕರರ ಸಮಗ್ರ ಜೀವನ, ಪವಾಡಗಳ ಬಗ್ಗೆ ಹಲವಾರು ಲೇಖನ, ಪುಸ್ತಕಗಳು ಇರುವುದರಿಂದ ಅವನ್ನು ಹೊರತುಪಡಿಸಿ ಅವರು ರಾಷ್ಟ್ರಕ್ಕೆ / ವಿಶ್ವಕ್ಕೆ ನೀಡಿದ ಕೊಡುಗೆಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

ಕೇರಳ ದೇಶದ ಪೂರ್ಣಾನದೀ ತೀರದ ಕಾಲಟಿ ಗ್ರಾಮದಲ್ಲಿ ದೈವಭಕ್ತ ಬ್ರಾಹ್ಮಣ ದಂಪತಿಗಳಾದ ಅರ್ಯಾಂಬಾ ಮತ್ತು ಶಿವಗುರುಗಳಿಗೆ ಜನಿಸಿದ ಒಬ್ಬನೇ ಮಗ ಶಂಕರ. ಆ ತೇಜಸ್ವಿ ಬಾಲಕ ಎಂಟನೇ ವರ್ಷಕ್ಕೆ ನಾಲ್ಕು ವೇದಗಳು, ಆರು ವೇದಾಂಗಗಳು ಮತ್ತು ಆಸ್ತಿಕ ದರ್ಶನಗಳು, ಚಾರ್ವಾಕ, ಬೌದ್ಧ, ಜೈನ ಮತಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ ಪ್ರಸ್ಥಾನತ್ರಯಗಳೆಂದು ಹೆಸರಾದ ವೇದವ್ಯಾಸರ ಬ್ರಹ್ಮಸೂತ್ರಗಳು, ಉಪನಿಷತ್ ಹಾಗೂ ಭಗವದ್ಗೀತೆಗೆ ಭಾಷ್ಯ ರಚಿಸಿ ಅಸಂಖ್ಯ ಸ್ತೋತ್ರಗಳನ್ನು ವಿರಚಿಸಿ, ಈ ದೇಶದ ನಾಲ್ಕು ದಿಕ್ಕುಗಳಲ್ಲಿ ಅದ್ವೈತ ಮಠಗಳನ್ನು ಸ್ಥಾಪಿಸಿ, ವೇದಾಂತವನ್ನು ಪ್ರಚಾರ ಮಾಡಿದ್ದು ಅನುಪಮ ಸಾಧನೆ.

ಭಾರತೀಯರಿಗೆ ಪವಿತ್ರವಾದ ವೇದಗಳಲ್ಲಿ ಪ್ರತಿಪಾದಿತವಾಗಿರುವುದು ವೈದಿಕ ಧರ್ಮ ಮತ್ತು ವೈದಿಕ ಸಂಸ್ಕೃತಿ. ಪಾಶ್ಚಾತ್ಯರು, ಜನಸಾಮಾನ್ಯರು ಇದನ್ನೇ ಹಿಂದೂ ಧರ್ಮ, ಸಂಸ್ಕೃತಿ ಎಂದು ಕರೆಯುತ್ತಾರೆ. ಆದರೆ ಇದರ ನಿಜವಾದ ಹೆಸರು ಸನಾತನ ಧರ್ಮ. ಈ ದೇಶ ಸಹಸ್ರಾರು ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದ ಸನಾತನ ಧರ್ಮಕ್ಕೆ ಎರಡು ಸಾವಿರ ವರ್ಷಗಳ ಹಿಂದೆ ಭಾರೀ ಆಘಾತವುಂಟಾಯಿತು. ವೇದಗಳು ಹಾಗೂ ದೇವರನ್ನು ನಂಬದ ಚಾರ್ವಾಕರೆಂಬ ಭೌತಿಕವಾದಿಗಳು, ನಾಸ್ತಿಕವಾದಿಗಳು ಪ್ರಬಲರಾಗಿ ಇಂದಿನ ಕಮ್ಯುನಿಷ್ಟರಂತೆ, ಭಾರತದ ಪ್ರಾಚೀನವಾದ ಎಲ್ಲ ವಿಚಾರಧಾರೆಗಳನ್ನು ವಿತಂಡವಾದದಿಂದ ನಾಶ ಮಾಡಲು ಆರಂಭಿಸಿದರು. ಇದೇ ಸಮಯದಲ್ಲಿ ಬೌದ್ಧ ವಿದ್ವಾಂಸರು ರಾಜಾಶ್ರಯ ಪಡೆದು ವೈದಿಕ ಆಚಾರ–ವಿಚಾರಗಳನ್ನು ದೂಷಿಸಲು ಪ್ರಾರಂಭಿಸಿದರು. ಇವರೊಂದಿಗೆ ಜೈನರು, ತಾಂತ್ರಿಕರೂ ಸೇರಿಕೊಂಡು ವಾಮಾಚಾರಗಳಲ್ಲಿ ತೊಡಗಿ ವೇದಗಳನ್ನು ವಿಪರೀತವಾಗಿ ಅರ್ಥೈಸಿ ಇಡೀ ದೇಶವನ್ನು ಕ್ಷೋಭೆಗೊಳಿಸಿದರು. ಅರಿಷಡ್ವರ್ಗಗಳಿಗೆ ಬಲಿಯಾದ ರಾಜರು ತಮ್ಮ ತಮ್ಮಲ್ಲೇ ಹೋರಾಡುತ್ತ ಅವನತಿ ಹೊಂದಿ ರಾಷ್ಟ್ರ ಕಗ್ಗತ್ತಲೆಯಲ್ಲಿ ಮುಳುಗಿತ್ತು. ಅಂತಹ ದಾರುಣ ಸಮಯದಲ್ಲಿ ಶಂಕರಾಚಾರ್ಯರು ಉದಯಿಸಿ, ತಮ್ಮ ಹುಟ್ಟು ಪ್ರತಿಭೆ, ಪ್ರಚಂಡ ತರ್ಕ, ಅಸೀಮ ದೈಹಿಕ, ಮಾನಸಿಕ ಶಕ್ತಿಗಳ ಮೂಲಕ ಸನಾತನ ಧರ್ಮವನ್ನು ಉದ್ಧರಿಸಿದರು. (ಸಾ.ಶ.788–820) ಶಂಕರಾಚಾರ್ಯರು ಬದುಕಿದ್ದು ಕೇವಲ 32 ವರ್ಷಗಳಾದರೂ, ಸಾಧಿಸಿದ್ದು ಹಲವಾರು ಸಂಸ್ಥೆಗಳು ಮಾಡಬಹುದಾದ ಕೆಲಸದಷ್ಟು.

ನಮ್ಮ ಪ್ರಾಚೀನ ಋಷಿಮುನಿಗಳು ಧ್ಯಾನ–ಸಮಾಧಿಗಳಲ್ಲಿ ಮಗ್ನರಾಗಿದ್ದಾಗ ಅವರ ಒಳಗಣ್ಣಿಗೆ ಹೊಳೆದ ಸತ್ಯಗಳೇ ವೇದಗಳು. ಶಂಕರರು ಆ ವೈದಿಕ ಸತ್ಯಗಳನ್ನು ಸರಳ, ಸುಬೋಧ ಸಂಸ್ಕೃತ ಭಾಷೆಯಲ್ಲಿ ನಮಗೆ ತಿಳಿಸಿಕೊಟ್ಟರು. ನಾವು ದಿನನಿತ್ಯ ಪಾಲಿಸುವ ಆಚಾರ–ವಿಚಾರಗಳು. ನೀತಿ–ನಿಯಮಗಳು, ರೀತಿ–ರಿವಾಜುಗಳು ಪರಂಪರೆಯಿಂದ ಬಂದದ್ದು. ಅವೇ ಸ್ಮೃತಿಗಳು. ಇವು ಕಾಲಕಾಲಕ್ಕೆ ಬದಲಾಗುತ್ತವೆ. ಮುನಿಗಳು ವೇದಮಂತ್ರಗಳನ್ನು ಕೇಳಿದ್ದರಿಂದ ಶ್ರುತಿಗಳು, ಈಗಿನಂತೆ ಶಂಕರರ ಕಾಲದಲ್ಲಿ ಶ್ರುತಿ–ಸ್ಮೃತಿ ಅಂಶಗಳು ಹಾಸುಹೊಕ್ಕಾಗಿ ಆಚಾರ ವಿಚಾರಗಳನ್ನೇ ಶ್ರುತಿ ಎಂದು ತಿಳಿದಿದ್ದಾಗ, ಅವುಗಳಿಗಿರುವ ಭೇದಗಳನ್ನು ತಿಳಿಸಿ, ಶ್ರುತಿಯೇ ಪರಮ ಎಂದು ಸಾರಿದರು. **(ಶ್ರುತಿ ಸ್ಮೃತಿ ವಿರೋಧೇಷು ಶ್ರುತಿರೇವ ಗರೀಯಸಿ)**. ವೈದಿಕ ಜೀವನದ ಮೂಲಕ ಇಹ–ಪರಗಳೆರಡರಲ್ಲೂ ಈ ಸುಖ–ಶಾಂತಿ ಹೊಂದಬಹುದೆಂದು ತಮ್ಮ ಜೀವನದ ಮೂಲಕ ತೋರಿಸಿಕೊಟ್ಟರು. ಹೀಗೆ ಶಿಥಿಲವಾಗಿದ್ದ ವೈದಿಕ ಧರ್ಮ ಅಥವಾ ಸನಾತನ ಧರ್ಮವನ್ನು ಪುರುಜ್ಜೀವನಗೊಳಿಸಿದರು.

**ವೇದಃ ಶಿವೋ ಶಿವೋ ವೇದಃ। ವೇದಾಭ್ಯಾಸೀ ಸದಾಶಿವಃ।** ಎಂಬ ಆರ್ಷೇಯ ವಾಕ್ಯದಂತೆ ವೇದಗಳು ಮಂಗಳವಾದವು. ಶಿವಸ್ವರೂಪ, ವೇದವೇ ಶಿವ, ಶಿವನೇ ವೇದ. ವೇದವನ್ನು ಮುಕ್ತವಾಗಿ ಪಠಿಸುವವನು ಯಾವಾಗಲೂ ಮಂಗಳನೇ, ಶಿವನೇ ಎಂದು ಸಾರಿದರು.

ಎರಡನೆಯದಾಗಿ ಕೆಲವರು ಸೂರ್ಯ, ಶಕ್ತಿ, ಗಣಪತಿ, ಈಶ್ವರ, ಭೈರವ ಮುಂತಾದ ದೇವತೆಗಳನ್ನು ತಮಗೆ ತೋಚಿದ ರೀತಿಯಲ್ಲಿ ಪೂಜಿಸುತ್ತಿದ್ದರು. ಈ ಪೂಜೆಗೆ ತಂತ್ರಾಗಮ ಗ್ರಂಥಗಳನ್ನು ಅವಲಂಬಿಸಿದ್ದರು. ಇದನ್ನು ನೋಡಿದ ಶಂಕರರು ಎಲ್ಲ ಮತಗಳಿಗೆ ವೈದಿಕ ನೆಲಗಟ್ಟು ನೀಡಿ ಪುರಾಣಗಳಲ್ಲಿರುವ ಪಂಚ ಉಪಚಾರ ಅಥವಾ ಷೋಡಶ ಉಪಚಾರ ವಿಧಿಗಳನ್ನು ಆಚರಣೆಗೆ ತಂದರು. ಅದರಲ್ಲಿ ಪಂಚಾಯತನ ಪೂಜೆ ಸೇರಿದೆ. ಉದಾಹರಣೆಗೆ ಶಿವಪಂಚಾಯತನದಲ್ಲಿ ಸೂರ್ಯ, ಪಾರ್ವತಿ, ವಿಷ್ಣು, ಗಣೇಶ, ಈಶ್ವರ ಸೇರುತ್ತವೆ). ಹೀಗಾಗಿ ಆರು ಮತಗಳನ್ನು ಸ್ಥಾಪಿಸಿದ ಅವರಿಗೆ ಷಣ್ಮತ ಸ್ಥಾಪನಾಚಾರ್ಯ ಎಂಬ ಬಿರುದು ಸಿಕ್ಕಿತು.

ಇಷ್ಟದೇವತೆಯನ್ನು ಪೂಜಿಸುವ ಸಮಯದಲ್ಲಿ, ಕಾಲಾವಧಿ ಕಡಿಮೆಯಿದ್ದಾಗ ಪಂಚೋಪಚಾರಗಳನ್ನು ಮಾಡಬಹುದು. ಅವೇ ಗಂಧ, ಪುಷ್ಪ, ಧೂಪ, ದೀಪ ಮತ್ತು ನೈವೇದ್ಯ. ಸಮಯವಿದ್ದಾಗ ವೇದ–ಪುರಾಣಗಳ ಮಂತ್ರಗಳನ್ನು ಪಠಿಸುತ್ತಾ ಷೋಡಶೋಪಚಾರ ವಿಧಿಗಳನ್ನು ಕೈಗೊಂಡು ಭಗವಂತನನ್ನು ಪೂಜಿಸಬಹುದು. ಆ

ಹದಿನಾರು ವಿಧಿಗಳು ಯಾವುದೆಂದರೆ ದೇವರ ಆವಾಹನೆ, ಆಸನ, ವಿಗ್ರಹದ ಕೈಕಾಲು ತೊಳೆಯುವ ಪಾದ್ಯ, ಅರ್ಘ್ಯ, ಆಚಮನ, ಸ್ನಾನ, ವಸ್ತ್ರ ಅಥವಾ ಗೆಜ್ಜೆವಸ್ತ್ರ, ಜನಿವಾರ, ಗಂಧ, ಧೂಪ, ಪುಷ್ಪ, ದೀಪ, ನೈವೇದ್ಯ, ತಾಂಬೂಲ, ಮಂತ್ರಪೂರ್ವಕ ಸ್ತುತಿ ಮತ್ತು ಪ್ರದಕ್ಷಿಣ ನಮಸ್ಕಾರ. ಶಂಕರರು ಜಾರಿಗೊಳಿಸಿದ ಈ ಪೂಜಾವಿಧಿಯನ್ನು ಅಂದಿನಿಂದ ಇಂದಿನವರೆಗೆ ಭಾರತದ, ಉದ್ದಗಲಕ್ಕೂ ಜನರು ಆಚರಿಸುವುದನ್ನು ನಾವು ನೋಡಬಹುದು.

ಮೂರನೆಯದಾಗಿ ತಾವು ಸ್ಥಾಪಿಸಿದ ಅದ್ವೈತ ದರ್ಶನವನ್ನು ದೇಶದಲ್ಲಿ ದೃಢಗೊಳಿಸಲು ಪೂರ್ವದ ಪುರಿ, ದಕ್ಷಿಣದ ಶೃಂಗೇರಿ, ಪಶ್ಚಿಮದ ದ್ವಾರಕಾ ಹಾಗೂ ಉತ್ತರದ ಬದರಿಯಲ್ಲಿ ಆಮ್ನಾಯ ಪೀಠಗಳನ್ನು ಸ್ಥಾಪಿಸಿ, ತಮ್ಮ ಶಿಷ್ಯರಲ್ಲಿ ಪ್ರಧಾನರಾಗಿದ್ದ ಶ್ರೀ ಹಸ್ತಾಮಲಕಾಚಾರ್ಯ, ಶ್ರೀ ಸುರೇಶ್ವರಾಚಾರ್ಯ, ಶ್ರೀ ಪದ್ಮಪಾದಾಚಾರ್ಯ ಮತ್ತು ಶ್ರೀ ತ್ರೋಟಕಾಚಾರ್ಯರನ್ನು ಅನುಕ್ರಮವಾಗಿ ಪೀಠಾಧಿಪತಿಗಳನ್ನಾಗಿ ಮಾಡಿದರು. 1200 ವರ್ಷಗಳ ನಂತರವೂ ಆ ಮಠಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ. ವಿಶೇಷವಾಗಿ ಬದರೀನಾಥ್ ದೇವಸ್ಥಾನದಲ್ಲಿರುವ ಯೋಗಿನಾರಾಯಣ ವಿಗ್ರಹವನ್ನು ಆ ಕಾಲದಲ್ಲಿ ಬೌದ್ಧರು ಹಿಮಾಲಯದ ಕಾಡಿನಲ್ಲಿ ಎಸೆದಿದ್ದರಂತೆ. ಶಂಕರರು ತಮ್ಮ ಯೋಗದೃಷ್ಟಿಯಿಂದ ನೋಡಿ, ವಿಗ್ರಹ ಹುಡುಕಿ ಪುನಃ ಪ್ರತಿಷ್ಠಾಪನೆ ಮಾಡಿದರು ಎಂದು ಸ್ಥಳೀಯ ಐತಿಹ್ಯ ಹೇಳುತ್ತದೆ. ಈ ವಿಷಯವನ್ನೇ ಬದರೀನಾಥ್ ದೇವಸ್ಥಾನದ ಪ್ರಧಾನ ಅರ್ಚಕರಾದ ರಾವತ್ 2008ರಲ್ಲಿ ನನಗೆ ವಿವರಿಸಿದ್ದರು.

ಶಂಕರರು ಆ ಕಾಲದಲ್ಲೇ ಕಾಲಟಿಯಿಂದ ಕಾಶ್ಮೀರದವರೆಗೆ, ದ್ವಾರಕೆಯಿಂದ ಕಾಮರೂಪಕ್ಕೆ (ಇಂದಿನ ಅಸ್ಸಾಂ) ಕಾಲ್ನಡಿಗೆಯಲ್ಲಿ ಸಂಚರಿಸಿ, ಮೂರು ಬಾರಿ ಭಾರತದೇಶ ಯಾತ್ರೆ ಮಾಡಿ, 64 ಸ್ಥಳಗಳನ್ನು ಸಂದರ್ಶಿಸಿದ್ದು, ಅಸಾಧಾರಣ ಸಾಧನೆಯೇ? ಇಂದು ನಮಗೆ ಎಲ್ಲ ರೀತಿ ವಾಹನ, ವಸತಿ, ಆಹಾರ, ಧನ ಸೌಕರ್ಯವಿದ್ದರೂ ಶಂಕರರಂತೆ ಭಾರತಯಾತ್ರೆ ಮಾಡಲು ಬಹುಶಃ ಉತ್ಸಾಹ ತೋರುವುದಿಲ್ಲ. ಚಾರಣಿಗನಾಗಿ ಪಶ್ಚಿಮ ಘಟ್ಟಗಳಲ್ಲಿ, ಹಿಮಾಲಯದಲ್ಲಿ ವ್ಯಾಪಕವಾಗಿ ತಿರುಗಾಡಿರುವ ನನಗೆ ಶಂಕರರ ಸಾಧನೆ ಬೆರಗು ಹುಟ್ಟಿಸುತ್ತದೆ. ವಿಶೇಷವಾಗಿ ವಿದ್ಯಾರ್ಥಿಗಳೊಂದಿಗೆ 1987ರಲ್ಲಿ ನೇಪಾಳದ ಕುಂಭುಗ್ಲೇಸಿಯರ್ (ಹಿಮನೀರ್ಗಲ್ಲು). 1993ರಲ್ಲಿ ಗೋಮುಖ್ ಗ್ಲೇಸಿಯರ್‌ನಲ್ಲಿ ಅತ್ಯಾಧುನಿಕ ಪರ್ವತ ಸಾಮಗ್ರಿ, ಉಡುಗೆ-ತೊಡುಗೆಗಳನ್ನು ಧರಿಸಿ, ಓಡಾಡುವಾಗಲೂ ಬಹಳ ಕಷ್ಟವಾಗಿತ್ತು. ಅವುಗಳ ಸಹಾಯವಿಲ್ಲದೇ ಶಂಕರಾಚಾರ್ಯರು ಮತ್ತು ಅವರ ಶಿಷ್ಯರು ಹೇಗೆ ಗೋಮುಖ್‌ಗ್ಲೇಸಿಯರ್ ಮೂಲಕ ಕೇದಾರ್‌ಡೂಮ್ ಪರ್ವತವನ್ನು ಹತ್ತಿ (22,000 ಅಡಿ), ಇಳಿದು ಕೇದಾರ್‌ನಾಥ್‌ಗೆ ಹೋದರೋ ? ಇದು ಅವರ ಅಸೀಮ ದೈಹಿಕ ಸಾಮರ್ಥ್ಯವನ್ನು, ಪ್ರಚಂಡ ಮನೋಬಲವನ್ನು ಸೂಚಿಸುತ್ತದೆ.

ಶಂಕರರು ತಮ್ಮ ಅಸಾಧಾರಣ ತರ್ಕ, ಪಾಂಡಿತ್ಯ, ವಾಗ್ಮಿತೆಯ ಮೂಲಕ ಏಕಾಂಗಿಯಾಗಿ ಬೌದ್ಧರನ್ನು ವಾದದಲ್ಲಿ ಸೋಲಿಸಿದ್ದರಿಂದ ಕಂಗೆಟ್ಟ ಬೌದ್ಧ ಮತಾವಲಂಬಿಗಳು ಈ ದೇಶದಿಂದ ಪಲಾಯನ ಮಾಡಿದರು. ಅವರ ಸಂಖ್ಯೆ ಕ್ಷೀಣಿಸಿತು. ಸನಾತನಧರ್ಮ ಮತ್ತೆ ವಿಜೃಂಭಿಸಿತು.

ಉತ್ತರ ಭಾರತದಲ್ಲಿ ವಿಶೇಷವಾಗಿ ಕಾಶ್ಮೀರದಲ್ಲಿ ಪ್ರಸಿದ್ಧವಾಗಿದ್ದ ದೇವಿ ಶಾರದೆಯನ್ನು ದಕ್ಷಿಣದ ಶೃಂಗೇರಿಯಲ್ಲಿ ಸ್ಥಾಪಿಸಿ, ರಾಷ್ಟ್ರೀಯ ಭಾವೈಕ್ಯತೆ ಉಂಟು ಮಾಡಿದರು. ನಂತರ ದೇವಸ್ಥಾನವನ್ನು ಮುಸ್ಲಿಂ ರಾಜರು ನಾಶ ಮಾಡಿದ್ದರು. ಈಗ ನಮ್ಮ ನೆಚ್ಚಿನ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಹೊಸದಾಗಿ ಕಾಶ್ಮೀರದಲ್ಲಿ ಶಾರದಾ ಮಂದಿರ ನಿರ್ಮಾಣವಾಗಿ, ಶೃಂಗೇರಿಯಿಂದ ಶ್ರೀ ಶಾರದಾದೇವಿ ವಿಗ್ರಹ ನಿರ್ಮಾಣವಾಗಿ ಪ್ರತಿಷ್ಠಾಪಿಸಲಾಗಿದೆ.

ಮೊದಲಿಗೆ ಶಂಕರರು, ನಂತರ ಹತ್ತೊಂಬತ್ತನೇ ಶತಮಾನದಲ್ಲಿ ಸ್ವಾಮಿ ವಿವೇಕಾನಂದರು ಈ ದೇಶದ ಒಂದು ಸನ್ಯಾಸಿ ಪರಂಪರೆಗೆ ಭದ್ರಬುನಾದಿ ಹಾಕಿಕೊಟ್ಟು ದಶನಾಮೀ ಸಂಪ್ರದಾಯನ್ನು ಜಾರಿಗೆ ತಂದಿದ್ದು ಇಂದಿಗೂ ಚಾಲ್ತಿಯಲ್ಲಿದೆ (ಉದಾಹರಣೆಗೆ ಸ್ವಾಮಿಗಳ ಹೆಸರಿನಲ್ಲಿ ತೀರ್ಥ, ಸರಸ್ವತಿ, ನಾಥ, ಮುನಿ ಮುಂತಾದವು ಸೇರುತ್ತದೆ).

ಅವರು ಪ್ರತಿಪಾದಿಸಿದ ಅದ್ವೈತ ಮತವು ಪ್ರಧಾನವಾಗಿ ಜ್ಞಾನಮಾರ್ಗದ್ದು, ಜನಸಾಮಾನ್ಯರಿಗೆ ಅರ್ಥವಾಗುವುದು ಸ್ವಲ್ಪ ಕಷ್ಟ. ಅದಕ್ಕೋಸ್ಕರ ಆ ತತ್ತ್ವಗಳನ್ನು ಸ್ತೋತ್ರಗಳ ಮೂಲಕ ರಚಿಸಿದರು. ಅವುಗಳಲ್ಲಿ ಮುಖ್ಯವಾದವು ಗಣೇಶ ಪಂಚರತ್ನ, ಶಿವಾನಂದ ಲಹರೀ, ಸೌಂದರ್ಯ ಲಹರೀ, ಭಜಗೋವಿಂದ, ಶಾರದಾಷ್ಟಕ ಮುಂತಾದವು. ಆಸ್ತಿಕರು ಪೂಜೆ, ಸ್ತೋತ್ರ ಪಠನಗಳ ಮೂಲಕ ಭಕ್ತಿಭಾವದಿಂದ ಭಗವಂತನನ್ನು ಪೂಜಿಸಿ ಸುಖ, ಆನಂದ ಪಡೆಯಬಹುದೆಂದು ತೋರಿಸಿಕೊಟ್ಟರು. ಒಬ್ಬ ಕ್ರಿಯಾಶೀಲ ಸನ್ಯಾಸಿಯಾಗಿ ದೇಶಾದ್ಯಂತ ಸಂಚರಿಸಿ, ಕರ್ಮಯೋಗಿಯಾಗಿ, ಜ್ಞಾನ-ಕರ್ಮ-ಭಕ್ತಿ ಮಾರ್ಗಗಳ ಸಮನ್ವಯಕಾರರಾದರು.

ವಿಶ್ವವಿಖ್ಯಾತ ದಾರ್ಶನಿಕರೂ, ನಮ್ಮ ದೇಶದ ಅಧ್ಯಕ್ಷರಾಗಿದ್ದ ಡಾ.ಎಸ್. ರಾಧಾಕೃಷ್ಣನ್ ಅವರು ತಮ್ಮ ಭಾರತೀಯ ದರ್ಶನ ಎಂಬ ಉದ್ಗ್ರಂಥದಲ್ಲಿ ಶಂಕರರ ಬಗ್ಗೆ ಹೀಗೆ ಹೇಳುತ್ತಾರೆ He is a philosopher and a poet, a savant and a saint, a mystic and a religious reformer. There have been few minds more universal than this (Indian philosophy, Vol II).

ಶಂಕರರು ಸನ್ಯಾಸಿಯಾದ ಮಾತ್ರಕ್ಕೆ ತಮ್ಮ ಕರ್ತವ್ಯಗಳನ್ನು ಮರೆಯಲಿಲ್ಲ. ಎಂಟನೇ ವರ್ಷದಲ್ಲಿ ಸನ್ಯಾಸ ಸ್ವೀಕಾರ ಸಮಯದಲ್ಲಿ ತಮ್ಮ ತಾಯಿಗೆ ಊರಿಗೆ ಮರಳಲು ಮಾತುಕೊಟ್ಟಿದ್ದರಂತೆ. ತಾಯಿಯ ತೀವ್ರ ಅನಾರೋಗ್ಯ ಸ್ಥಿತಿಯನ್ನು ಯೋಗದೃಷ್ಟಿಯಿಂದ ತಿಳಿದು, ಉತ್ತರ ಭಾರತದಿಂದ ಧಾವಿಸಿ ಬಂದು, ಉಪಚರಿಸಿ, ತಾಯಿಗೆ ಜ್ಞಾನದ ಸವಿಯುಣಿಸಿ, ತಾಯಿ ಗತಿಸಿದ ನಂತರ, ದೇಹ ಸಂಸ್ಕಾರವನ್ನು ನಿರ್ಲಿಪ್ತರಾಗಿ ಮಾಡಿದ್ದು ಹೆಗ್ಗಳಿಕೆ. ಶಂಕರರು ಆತ್ಮಸಾಕ್ಷಾತ್ಕಾರ ಹೊಂದಿ ಜೀವನ್ಮುಕ್ತರಾಗಿದ್ದರೂ ಕರ್ಮಯೋಗಿಯಾಗಿದ್ದು ಅನನ್ಯ.

ತಮ್ಮ ಗುರುಗಳಾದ ಗೋವಿಂದ ಭಗವತ್ಪಾದರ ಆದೇಶದಂತೆ ವೈದಿಕ ಧರ್ಮ ರಕ್ಷಿಸಿ, ಹಲವು ವಿದ್ವಾಂಸರನ್ನು ವಾದದಲ್ಲಿ ಜಯಿಸಿ, ಕಾಶ್ಮೀರದಲ್ಲಿದ್ದ ಸರ್ವಜ್ಞ ಪೀಠವನ್ನು ಅಲಂಕರಿಸಿದ ಮೊದಲ ದಾಕ್ಷಿಣಾತ್ಯರಾಗಿ, ಕೇದಾರದಲ್ಲಿ ದೇಹತ್ಯಾಗ ಮಾಡಿದರು.

ಪಂಡಿತ್ ಜವಹರ್‌ಲಾಲ್ ನೆಹರೂ ವಿವರಿಸಿದಂತೆ "ಶಂಕರರು ಆ ಕಾಲದಲ್ಲೇ ವಿವಿಧತೆಯಲ್ಲಿ ಐಕ್ಯತೆ ಮೂಡಿಸಿದರು. ಧಾರ್ಮಿಕ, ಆಧ್ಯಾತ್ಮಿಕ ಮಟ್ಟದಲ್ಲಿ, ಏಕತೆಗಾಗಿ ಶ್ರಮಿಸಿದರು. ಜ್ಞಾನಿಗಳ ಸಾಮಾನ್ಯ ಭಾಷೆಯಾಗಿದ್ದ ಸಂಸ್ಕೃತದಲ್ಲಿ ಸಂಭಾಷಿಸಿ, ಗಹನ ತತ್ತ್ವಗಳನ್ನು ಸರಳಭಾಷೆಯಲ್ಲಿ ಬರೆದಿದ್ದು ಕೇವಲ 32 ವರ್ಷಗಳ ಅಲ್ಪಾಯುಷ್ಯದಲ್ಲಿ ಹಲವು ಜನ್ಮಗಳ ಕೆಲಸ ಮಾಡಿದ್ದು ಅದ್ವಿತೀಯ ಸಾಧನೆ." (ಡಿಸ್ಕವರಿ ಆಫ್ ಇಂಡಿಯಾ).

**ಶಂಕರರ ಅದ್ವೈತ ಸಿದ್ಧಾಂತ :**

ವೇದಾಂತವೆಂದರೆ ವೇದಗಳ ಕೊನೆಯಲ್ಲಿ ಬರುವ ಉಪನಿಷತ್ತುಗಳು. ಅವುಗಳಲ್ಲಿ ಸೂಕ್ಷ್ಮ ರೂಪದಲ್ಲಿದ್ದ ವಿಷಯಗಳನ್ನು ತೆಗೆದುಕೊಂಡು, ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರ ಪ್ರಕಾರ ಪರಬ್ರಹ್ಮ ಒಂದೇ ಸತ್ಯ. ಜಗತ್ತು ಮಿಥ್ಯಾರೂಪವುಳ್ಳದ್ದು. ಜೀವವು ಬ್ರಹ್ಮ ಹೊರತು ಬೇರೆ ಅಲ್ಲ (**ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ**). ಆದರೆ ನಮ್ಮ ಅಜ್ಞಾನದಿಂದಾಗಿ ನಾವು ಜಗತ್ತನ್ನು ಸತ್ಯವೆಂದು ತಿಳಿಯುತ್ತೇವೆ. ಐಂದ್ರಜಾಲಿಕನು ನಿರ್ಮಿಸುವ ವಸ್ತುಗಳಂತೆ. ಹಾಗೆಯೇ ಈಶ್ವರನು ತನ್ನ ಅದ್ಭುತ ಮಾಯಾಶಕ್ತಿಯಿಂದ ಈ ಜಗತ್ತನ್ನು ಸೃಷ್ಟಿಸಿದ್ದಾನೆ. ಅದು ಕತ್ತಲಲ್ಲಿ ಹಗ್ಗವನ್ನು ಹಾವೆಂದು, ಕಪ್ಪೆಚಿಪ್ಪನ್ನು ಬೆಳ್ಳಿ ಎಂದು ಭ್ರಮಿಸಿದಂತೆ. ಆದರೆ ನೈಜ ಜ್ಞಾನದ ಅರಿವಾದಾಗ, ನಾನೇ ಬ್ರಹ್ಮ (**ಅಹಂ ಬ್ರಹ್ಮಾಸ್ಮಿ**) ಎಂದು ತಿಳಿದಾಗ ಜಗತ್ತು ಮಿಥ್ಯೆಯಾಗಿ ಅವನಿಗೆ ಪರಿಣಮಿಸುತ್ತದೆ. ಅದೇ ಆತ್ಮಸಾಕ್ಷಾತ್ಕಾರ. ಇದಕ್ಕೆ ಇರುವ ಸಾಧನೆಗಳು ಹಲವಾರು. ಚಿತ್ತ ಶುದ್ಧಿ, ಜ್ಞಾನದ ಮೂಲಕ ಈ ಅರಿವು. ಕರ್ಮ-ಭಕ್ತಿ ಅದಕ್ಕೆ ಸಹಾಯಕ. ಉಪಾಸನೆ, ಧ್ಯಾನ ಹಲವಾರಿವೆ. ಕಾಮ-ಕ್ರೋಧ ಮುಂತಾದ ಅರಿಷಡ್ವರ್ಗಗಳಿಂದ ಮುಕ್ತರಾಗಿ ಈ ಜನ್ಮದಲ್ಲಿ ಜೀವನ್ಮುಕ್ತರಾಗಿ ನಂತರ ಪರದಲ್ಲಿ ಮೋಕ್ಷ ಹೊಂದಬಹುದು ಎಂದು ಸಾರಿದರು.

ಒಂದೇ ಪರಮಸತ್ಯದಿಂದ ವಿಶ್ವವೆಲ್ಲವೂ ಆವರಿಸಲ್ಪಟ್ಟಿದೆ. ಎರಡು ಸತ್ಯ ಅಥವಾ ಚೈತನ್ಯವೆಂಬುದಿಲ್ಲ ಎಂಬ ಶಂಕರಾಚಾರ್ಯರ ತತ್ತ್ವವು ಇಂದಿನ ಅತ್ಯಾಧುನಿಕ ಕ್ವ್ಯಾಂಟಮ್ ಸಿದ್ಧಾಂತ ಮತ್ತು ಅಣುಭೌತಶಾಸ್ತ್ರ (Particle or Theoretical Physic) ನಿಯಮಗಳಿಗೆ ಬಹಳ ಸಮೀಪವಾಗಿದೆ ಎಂದು ಇಂದಿನ ವಿಜ್ಞಾನಿಗಳು, ವಿಶ್ವವಿಖ್ಯಾತ ಭೌತಶಾಸ್ತ್ರಜ್ಞರಾದ ಡಾ|| ಈ.ಸಿ.ಜಿ. ಸುದರ್ಶನ್ ಮುಂತಾದವರು ಹೇಳುತ್ತಿದ್ದಾರೆ. ಅವರ ಪ್ರಕಾರ 'ವಿಶ್ವವೆಲ್ಲವೂ ಒಂದೇ ಮೂಲಭೂತ ಕಣಗಳಿಂದ ನಿರ್ಮಿಸಲ್ಪಟ್ಟಿವೆ. ಅವು ಹಲವಾರು ರೂಪಾಂತರಗಳನ್ನು ಹೊಂದುತ್ತವೆ.' ಆರ್ಥರ್ ಐಸೆನ್‌ಬರ್ಗ್ ಎಂಬ ಭೌತವಿಜ್ಞಾನಿ ಪ್ರಕಾರ 'ಶಂಕರರು ಕೇವಲ ತತ್ವಜ್ಞಾನಿಯಷ್ಟೇ ಅಲ್ಲ, ಭೌತಶಾಸ್ತ್ರಜ್ಞರೂ ಹೌದು. ಅವರ ತತ್ವಗಳು ಅಲ್ಬರ್ಟ್ ಐನ್‌ಸ್ಟೀನ್‌ನ ಸಾಪೇಕ್ಷ ಸಿದ್ಧಾಂತಕ್ಕೆ ಸಮೀಪವಾಗಿವೆ' (Theory of Relativity) ಎಂದು ಅಭಿಪ್ರಾಯಿಸುತ್ತಾರೆ.

"Advaith Vedanta of Shankara provide a complete philosophical and conceptual frame work within which the findings of advanced modern physical science can be placed without stress or fear. Shankara's philosophy is absolutely worth studying, the appeal of which became for greater with Einstein's discovery that matter and energy are interchangeable…. We must realize that, Shankara must ever be remembered among the best sons not of Mother India alone but of all mankind."

ಹೀಗೆ ವಿಶ್ವಮಾನ್ಯರಾದ ಆದಿಶಂಕರಾಚಾರ್ಯರ ಜೀವನ-ಸಾಧನೆ, ತತ್ವಗಳು ಭವಿಷ್ಯ ಜನಾಂಗಕ್ಕೆ ವಿಶೇಷವಾಗಿ ನಮ್ಮ ಪ್ರತಿಭಾಶಾಲಿಗಳಾದ ಯುವ ಪೀಳಿಗೆಗೆ ದಾರಿದೀಪವಾಗಲಿ.

ಜಾಹಿರಾತು

**ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ**

**# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,**
**ಬ್ಯಾಂಕ್ ಕಾಲೋನಿ, ಬೆಂಗಳೂರು-560 050.**

**ಸ್ಥಳದ ಬಾಡಿಗೆ ಇರುವುದಿಲ್ಲ**

**ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,**
**ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,**
**ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು**
**ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**
**ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.**
**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**
**ದೂರವಾಣಿ : 080-26793054 ಮೊಬೈಲ್ 8277433666**

# ಭಗವದ್ರಾಮಾನುಜರು

– ಡಾ|| ಗೀತಾ ಮಧುಸೂದನ್
ಪ್ರಾಧ್ಯಾಪಕರು, ಜೈನ್ ವಿಶ್ವವಿದ್ಯಾಲಯ



ಚೆನ್ನೈ ನಗರದಿಂದ ಸುಮಾರು ಮೂವತ್ತು ಕಿ.ಮೀ. ದೂರದಲ್ಲಿ ಶ್ರೀಪೆರಂಬುದೂರ್ ಎಂಬ ಗ್ರಾಮವಿದೆ. ಅಲ್ಲಿ ಶ್ರೀ ಆದಿಕೇಶವ ಎಂಬ ವಿಷ್ಣುವಿನ ದೇವಸ್ಥಾನವು ರಾರಾಜಿಸುತ್ತಿದೆ. ದೇವಾಲಯದ ಮತ್ತೊಂದು ಪ್ರಾಕಾರದಲ್ಲಿ ನಮಸ್ಕಾರ ಮುದ್ರೆಯೊಂದಿಗಿನ ಯತಿಗಳಿಗೆಲ್ಲಾ ರಾಜನೆಂಬಂತೆ ಶ್ರೀರಾಮಾನುಜಾಚಾರ್ಯರು ವಿಗ್ರಹ ರೂಪದಲ್ಲಿ ಭಕ್ತರಿಗೆಲ್ಲಾ ಪ್ರೀತಿಯ ನಾಯಕರಾಗಿ ವಿರಾಜಮಾನರಾಗಿದ್ದಾರೆ.

ಸುಮಾರು ಸಾವಿರ ವರ್ಷಗಳ ಹಿಂದೆ ಆಸೂರಿಕೇಶವಾಚಾರ್ಯರು ಈ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು. ಆಳವಂದಾರ್ ಎಂಬ ಯಾಮುನಾಚಾರ್ಯರು ವೈಷ್ಣವ ಸಂಪ್ರದಾಯದ ಅನುಯಾಯಿಗಳಿಗೆ ಗುರುಗಳಾಗಿದ್ದ ಸಮಯವದು. ಅವರು ಕಾವೇರಿ ತೀರದಲ್ಲಿ ಶ್ರೀರಂಗಂ ಎಂಬ ರಂಗನಾಥ ಕ್ಷೇತ್ರದಲ್ಲಿ ಇದ್ದರು. ಇವರ ಶಿಷ್ಯರು ಪೆರಿಯತಿರುಮಲೈನಂಬಿ. ಇವರಿಗೆ ಇಬ್ಬರು ತಂಗಿಯರಿದ್ದರು ಭೂದೇವಿ ಎಂಬ ಕಾಂತಿಮತಿ ಮತ್ತು ಶ್ರೀದೇವಿ ಎಂಬ ದ್ಯುತಿಮತಿ.

ಕಾಂತಿಮತಿ ಆಸೂರಿಕೇಶವಾಚಾರ್ಯರನ್ನು ಮದುವೆಯಾದರು. ದ್ಯುತಿಮತಿ ಕಮಲನಯನಭಟ್ಟರವರನ್ನು ಮದುವೆಯಾದರು. ಮದುವೆಯಾಗಿ ಹಲವು ವರ್ಷಗಳು ಕಳೆದರೂ ಆಸೂರಿ ದಂಪತಿಗಳಿಗೆ ಪುತ್ರ ಭಾಗ್ಯ ಸಿಗಲಿಲ್ಲ. ನಂತರ ತಿರುವಳ್ಳಿಕೇಣಿ ಕ್ಷೇತ್ರದ ಪಾರ್ಥಸಾರಥಿ ದೇವರ ಅನುಗ್ರಹದಿಂದ 1017 ಚೈತ್ರಮಾಸ ಶುಕ್ಲಪಕ್ಷ ಪಂಚಮಿಯಂದು ಕಟಕ ರಾಶಿಯ ಆರ್ದ್ರಾ ನಕ್ಷತ್ರದಲ್ಲಿ ಭಗವಾದ್ರಾಮಾನುಜರು ಮಗುವಾಗಿ ಜನಿಸಿದರು. ಅದೇ ಸಮಯದಲ್ಲಿ ದ್ಯುತಿಮತಿ ಮತ್ತು ಕಮಲನಯನ ಭಟ್ಟರಿಗೆ ಗೋವಿಂದನೆಂಬ ಪುತ್ರನು ಜನಿಸಿದನು.

ಬಾಲಕ ರಾಮಾನುಜ ಬಹಳ ಬುದ್ಧಿವಂತ ಇಂತಹ. ಹುಡುಗನನ್ನು ಕಂಡು ಎಲ್ಲಾ ಗುರುಗಳಿಗೂ ಸಂತೋಷ ಮತ್ತು ಪ್ರೀತಿ. ಸೂಕ್ತ ಕಾಲದಲ್ಲಿ ಉಪನಯನವಾಯಿತು.ಬಾಲ್ಯದಲ್ಲಿ ವೇದ, ವೇದಾಂಗಗಳ ಪಾಠವಾಯಿತು. ಅವರಿಗೆ ಹದಿನಾರು ವರ್ಷವಾದಾಗ ರಕ್ಷಾಂಬಾಳ್ ಎಂಬಾಕೆಯೊಂದಿಗೆ ಮದುವೆಯಾಯಿತು. ಕೆಲವು ತಿಂಗಳುಗಳಲ್ಲಿಯೇ ತಂದೆ ಮರಣ ಹೊಂದಿದರು. ಈ ದುಃಖವನ್ನು ಸಹಿಸಲಾಗದೆ ತಾಯಿ ಮತ್ತು ಹೆಂಡತಿಯರೊಡನೆ ಕಾಂಚೀಪುರಕ್ಕೆ ಹೋಗಿ ನೆಲೆಸಿದರು.

ರಾಮಾನುಜರಿಗೆ ವೇದಾಂತದ ಬಗ್ಗೆ ಪೂರ್ಣಪಾಠವಾಗಿರಲಿಲ್ಲ ಸರಿಯಾದ ಗುರುವಿಗಾಗಿ ಹುಡುಕಾಡುತ್ತಿದ್ದರು. ಯಾದವಪ್ರಕಾಶರು ಎಂಬುವವರು ಆ ಕಾಲದ ಬಹುದೊಡ್ಡ ವಿದ್ವಾಂಸರು. ರಾಮಾನುಜರು ಅವರ ಶಿಷ್ಯರಾದರು. ಆದರೆ ಗುರುಗಳ ಕೆಲವೊಂದು ಅರ್ಥಗಳು ವಿವರಣೆಗಳು ರಾಮಾನುಜರಿಗೆ ಹಿಡಿಸಲಿಲ್ಲ. ರಾಮಾನುಜರು ತಮ್ಮದೇ ಆದ ಅರ್ಥ ನೀಡಿದರು. ಆಗ ಗುರುಗಳು ಕೋಪಗೊಂಡರು. "ನನ್ನ ಅರ್ಥ ವಿವರಗಳು ನಿನಗೆ ಸರಿಕಾಣದಿದ್ದರೆ ನನ್ನ ಬಳಿ ಪಾಠಕ್ಕೆ ಬರಲೇಬೇಡ" ಎಂದರು. ರಾಮಾನುಜರು ಮರುಮಾತನಾಡದೆ ನಮ್ರತೆಯಿಂದ ಹೊರಬಂದರು ಮತ್ತು ಕಂಚಿ ವರದರಾಜಸ್ವಾಮಿಯ ಸೇವೆಯಲ್ಲಿ ಕಾಲವನ್ನು ಕಳೆಯಲಾರಂಭಿಸಿದರು.

ಇತ್ತ ಶ್ರೀರಂಗಂನಲ್ಲಿ ಯಾಮುನಾಚಾರ್ಯರಿಗೆ ಅವರ ಅಂತ್ಯಕಾಲ ಸಮೀಪಿಸಿತ್ತು. ಕಂಚಿಗೆ ಹೋಗಿ ರಾಮಾನುಜರನ್ನು ಕರೆದುಕೊಂಡು ಬರಲು ಮಹಾಪೂರ್ಣ ಎಂಬ ತಮ್ಮ ಶಿಷ್ಯರನ್ನು ಕಳುಹಿಸಿದರು. ಆದರೆ ರಾಮಾನುಜರು ಬರುವ ಮುನ್ನವೇ ಯಾಮುನರು ಇಹಲೋಕವನ್ನು ತ್ಯಜಿಸಿಬಿಟ್ಟಿದ್ದರು. ಮಹಾಪೂರ್ಣರು ಹಗಲು ರಾತ್ರಿ ಪ್ರಯಾಣ ಮಾಡಿ ಕಾಂಚೀಪುರವನ್ನು ತಲುಪಿದರು. ರಾಮಾನುಜರು ಆ ಮಹಾತ್ಮನನ್ನು ದರ್ಶಿಸಬೇಕೆಂದು ಆತುರಪಟ್ಟರು. ಕೂಡಲೇ ಅವರಿಬ್ಬರೂ ಶ್ರೀರಂಗಕ್ಕೆ ಪ್ರಯಾಣವನ್ನು ಬೆಳೆಸಿದರು. ಕಾವೇರಿ ತೀರದ ಬಳಿಗೆ ಅವರು ಬಂದರು. ಆಗ ಅಲ್ಲಿ ಜನರ ಗುಂಪು ಕಾಣಿಸಿತು. ವಿಚಾರಿಸಿದಾಗ ಯಾಮುನರ ಅಂತ್ಯಕ್ರಿಯೆಗಾಗಿ ಜನರ ಗುಂಪು ಸೇರಿದ್ದು ತಿಳಿದುಬಂತು. ಆ ವಿಷಯ ರಾಮಾನುಜರಿಗೆ ಸಿಡಿಲುಬಡಿದಂತಾಯಿತು. ಆದರೂ ಸಮಾಧಾನಪಟ್ಟುಕೊಂಡು ಅವರ ಶರೀರವನ್ನಾದರೂ ನೋಡುವ ಪುಣ್ಯ ಲಭಿಸಿತಲ್ಲ ಎಂದು ತಮ್ಮನ್ನು ಸಂತೈಸಿಕೊಂಡರು.

ಆಗ ಒಂದು ವಿಚಿತ್ರ ಸಂಗತಿ ನಡೆಯಿತು. ಯಮುನಾಚಾರ್ಯರ ಬಲಗೈ ಕಡೆ ನೋಡಿದರು ಮೂರು ಬೆರಳುಗಳು ಮಡಿಸಿಕೊಂಡಿವೆ. ರಾಮಾನುಜರು ಯಮುನಾಚಾರ್ಯರ ಶಿಷ್ಯರನ್ನು ಅದರ ಬಗ್ಗೆ ಕೇಳಿದರು. ಯಾಮುನರ ಆಸೆಗಳು ಏನಾದರೂ ಇದ್ದವೆ ಎಂದು ಪ್ರಶ್ನಿಸಿದರು. ಅವರು ಮೂರು ಕಾರ್ಯಗಳನ್ನು ಮಾಡಬೇಕೆಂದಿದ್ದರು ಎಂದು ಶಿಷ್ಯರು ಹೇಳಿದರು. ರಾಮಾನುಜರು ಅವನ್ನು ತಾವು ಪೂರ್ಣ ಮಾಡುವುದಾಗಿ ಘೋಷಿಸಿದರು. ಅವುಗಳು "ಶ್ರೀ ವೈಷ್ಣವ ಧರ್ಮಪ್ರಸಾರಮಾಡಿ ವ್ಯಾಸ ಮತ್ತು ಪರಾಶರರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಮ್ಮಾಳ್ವರರಿಗೆ ಪ್ರೀತಿಯ ಕಾಣಿಕೆ ಸಲ್ಲಿಸುತ್ತೇನೆ. ವ್ಯಾಸರ ಬ್ರಹ್ಮಸೂತ್ರಗಳಿಗೆ ವಿಶಿಷ್ಟಾದ್ವೈತದ ಅರ್ಥವನ್ನು ಬರೆಯುತ್ತೇನೆ."

ಒಂದೊಂದು ಆಸೆಯನ್ನು ಘೋಷಿಸಿದಾಗಲೂ ಒಂದೊಂದು ಬೆರಳು ತೆರೆದುಕೊಂಡವು. ಯಾಮುನರ ಅನುಗ್ರಹ ರಾಮಾನುಜರ ಮೇಲೆ ಇದೆ ಎಂಬುದು ಸ್ಪಷ್ಟವಾಯಿತು.

ಹಾಗೆಯೇ ಶ್ರೀ ವೈಷ್ಣವ ಪರಂಪರೆಗೆ ರಾಮಾನುಜರೇ ಮುಂದಿನ ಆಚಾರ್ಯರು ಎಂಬುದು ತಿಳಿದಂತಾಯಿತು / ವಿದಿತವಾಯಿತು. ಅವರು ಕಾಂಚೀಪುರಕ್ಕೆ ತೆರಳಿದರು.

ರಾಮಾನುಜರಿಗೆ ಜಾತಿ ಪದ್ಧತಿಗಳಲ್ಲಿ ನಂಬಿಕೆ ಇರಲಿಲ್ಲ. ಕಾಂಚೀ ಪೂರ್ಣರೆಂಬ ಯತಿಗಳು ವರದರಾಜಸ್ವಾಮಿ ಭಕ್ತರು. ಇವರು ಮಹಿಮಾನ್ವಿತರು, ಬ್ರಾಹ್ಮಣರಲ್ಲ. ರಾಮಾನುಜರು ಇವರನ್ನು ತಮ್ಮ ಗುರುಗಳೆಂದೇ ಭಾವಿಸಿ ನಮಸ್ಕರಿಸುತ್ತಿದ್ದರು. ಕಾಂಚೀಪೂರ್ಣರು ತಮಗೆ ನಮಸ್ಕಾರ ಮಾಡಬಾರದೆಂದು ಹೇಳುತ್ತಿದ್ದರು. ಆದರೆ ರಾಮಾನುಜರು ಇದನ್ನು ಒಪ್ಪುತ್ತಿರಲಿಲ್ಲ. ಒಮ್ಮೆ ರಾಮಾನುಜರು ತಮ್ಮ ಗುರುಗಳಾದ ಕಾಂಚೀಪೂರ್ಣರನ್ನು ಮನೆಗೆ ಊಟಕ್ಕೆ ಆಹ್ವಾನಿಸಿದರು. ಅವರು ಊಟ ಮಾಡಿದ ನಂತರ ಆ ಪ್ರಸಾದವನ್ನು ಸ್ವೀಕರಿಸಬೇಕೆಂಬುದು ಆಚಾರ್ಯರ ಉದ್ದೇಶವಾಗಿತ್ತು. ರಾಮಾನುಜರ ಪತ್ನಿ ರಕ್ಷಾಂಬಾಳ್ ಬಹಳ ಮಡಿವಂತ ಹೆಂಗಸೆಂಬುದು ಕಾಂಚೀಪೂರ್ಣರಿಗೆ ತಿಳಿದಿತ್ತು. ಆದ್ದರಿಂದ ರಾಮಾನುಜರು ತಮ್ಮನ್ನು ಹುಡುಕಿಕೊಂಡು ಬಂದಾಗ ಅವರು ಬೇರೆ ದಾರಿಯಿಂದ ಅವರ ಮನೆಗೆ ಹೋಗಿ ಊಟ ಮಾಡಿ ಹೊರಟರು. ರಾಮಾನುಜರ ಹೆಂಡತಿ ಉಳಿದ ಅಡಿಗೆಯನ್ನು ಯಾರಿಗೋ ಕೊಟ್ಟು ಸ್ನಾನವನ್ನು ಮಾಡಿ ಮಡಿಯುಟ್ಟು ಬೇರೆ ಅಡುಗೆಯನ್ನು ಮಾಡತೊಡಗಿದರು. ರಾಮಾನುಜರು ಮನೆಗೆ ಹಿಂತಿರುಗಿದರು. ನಡೆದುದ್ದೆಲ್ಲವನ್ನು ತಿಳಿದು ಸಿಟ್ಟುಗೊಂಡರು. ರಾಮಾನುಜರ ಮುಂದಿನ ಗುರುಗಳು ಮಹಾಪೂರ್ಣರು ಅವರನ್ನು ಕಾಣಲು ಶ್ರೀರಂಗಕ್ಕೆ ಹೊರಟರು. ಅದೇ ಸಮಯದಲ್ಲಿ ಯಾಮುನರ ಸ್ಥಾನಕ್ಕೆ ರಾಮಾನುಜರನ್ನು ಕರೆತರಲು ಮಹಾಪೂರ್ಣರ ತಮ್ಮ ಪತ್ನಿ ಸಮೇತ ಕಾಂಚೀಪುರಕ್ಕೆ ಹೊರಟರು. ದಾರಿಯಲ್ಲಿ ಅವರಿಬ್ಬರ ಸಮಾಗಮವಾಯಿತು. ರಾಮಾನುಜರು ಮಹಾಪೂರ್ಣರಿಗೆ ವಂದಿಸಿ ಅವರನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಪ್ರಾರ್ಥಿಸಿದರು. ಅವರಿಂದ ಆಳ್ವಾರುಗಳು ರಚಿಸಿದ ನಾಲ್ಕು ಸಾವಿರ ದಿವ್ಯಪ್ರಬಂಧಗಳ ಅಂತರಾರ್ಥವನ್ನು ಕಲಿತರು. ಮಹಾಪೂರ್ಣರು ಬ್ರಾಹ್ಮಣರಲ್ಲ. ಒಮ್ಮೆ ಹೆಂಡತಿ ಬಾವಿಯಲ್ಲಿ ನೀರು ಸೇದುವಾಗ ರಾಮಾನುಜರ ಹೆಂಡತಿಯ ಕೊಡದ ಮೇಲೆ ಸ್ವಲ್ಪ ನೀರು ಬೀಳುತ್ತದೆ. ತನ್ನ ಮಡಿ ಹಾಳಾಯಿತ್ತೆಂದು ರಕ್ಷಾಂಬಾಳ್ ಜಗಳವಾಡಿದಳು. ಇದರಿಂದ ನೊಂದು ಮಹಾಪೂರ್ಣರು ಗಂಡಹೆಂಡತಿ ಜಗಳಕ್ಕೆ ತಾವು ಕಾರಣರಾಗಬಾರದೆಂದು ಪತ್ನಿಯೊಂದಿಗೆ ಶ್ರೀರಂಗಕ್ಕೆ ಹಿಂತಿರುಗಿದರು. ಈ ವಿಷಯ ತಿಳದು ರಾಮಾನುಜರು ಇದನ್ನೆ ನೆಪ ಮಾಡಿಕೊಂಡು ಹೆಂಡತಿಯನ್ನು ತವರು ಮನೆಗೆ ಬಿಟ್ಟು ಸನ್ಯಾಸವನ್ನು ಸ್ವೀಕರಿಸಿದರು. ಕಾಷಾಯ ವಸ್ತ್ರ, ತ್ರಿದಂಡಗಳನ್ನು ಧರಿಸಿ ರಾಮಾನುಜರು 'ಯತಿರಾಜ'ರಾದರು.

ರಾಮಾನುಜರು ಸನ್ಯಾಸಿಗಳಾದ ಸುದ್ದಿ ಎಲ್ಲೆಡೆ ಹರಡಿತು. ಅವರನ್ನು ನೋಡಲು ಬಂದವರು ಅವರ ಶಿಷ್ಯರಾದರು. ಅವರಲ್ಲಿ ಕೂರೇಶರು ಮುಖ್ಯರಾದವರು. ಯಾದವಪ್ರಕಾಶರು ಕೂಡ ಶ್ರೀವೈಷ್ಣವಧರ್ಮವನ್ನು ಸ್ವೀಕರಿಸಿದರು. ಶ್ರೀರಂಗದಲ್ಲಿ ಪ್ರತಿದಿನ ಶಿಷ್ಯರಿಗೆ ಬೋಧನೆ ಮಾಡುತ್ತಿದ್ದ ರಾಮಾನುಜರಿಗೆ ಇನ್ನೂ ಕಲಿಯಬೇಕಾದುದು ಎಷ್ಟೋ ಇದೆ ಎನ್ನಿಸಿತು. ಆಗ ಮಹಾಪೂರ್ಣರು ತಿರುಕೊಷ್ಟಿಯೂರಿನಲ್ಲಿ ಗೋಷ್ಠಿ ಪೂರ್ಣ ಎಂಬ ಬಹುದೊಡ್ಡ ವಿದ್ವಾಂಸರನ್ನು ಪರಿಚಯಿಸಿದರು. ಗೋಷ್ಠಿಪೂರ್ಣರು ರಾಮಾನುಜರಿಗೆ ಬೇಗ ಅನುಗ್ರಹ ನೀಡಲಿಲ್ಲ. ಅವರ ಯೋಗ್ಯತೆ, ಶ್ರದ್ಧೆಗಳನ್ನು ಪರೀಕ್ಷಿಸಬೇಕೆಂದುಕೊಂಡರು. ಒಮ್ಮೆ ಬಂದಾಗ ಮತ್ತೊಮ್ಮೆ ಬರುವಂತೆ ತಿಳಿಸಿದರು. ಹೀಗೆ ಹದಿನೆಂಟುಸಲ ಸುತ್ತಾಡಿಸಿದರು. ಕಡೆಗೆ ಅವರಿಗೆ ಅಷ್ಟಾಕ್ಷರೀ ತಿರುಮಂತ್ರವನ್ನು, ಅದರ ಅರ್ಥವನ್ನು ಉಪದೇಶಿಸಿದರು. ಈ ಮಂತ್ರವನ್ನು ಜಪಿಸುವವರಿಗೆ ಪರಮಪದ ಸಿಗುವುದೆಂದು ತಿಳಿಸಿ, ಎಚ್ಚರಿಕೆಯಿಂದ ಇರುವಂತೆ ತಿಳಿಸಿದರು. ಆದರೆ ರಾಮಾನುಜರ ಮನಸ್ಸು ಬೇರೆ ಕಡೆಗೆ ಹರಿಯಿತು. ಇಂತಹ ದಿವ್ಯಜ್ಞಾನ ಕೆಲವರಿಗೆ ಮಾತ್ರ ಏಕೆ? ಎಲ್ಲರೂ ತಿಳಿದು ಧನ್ಯರಾಗಲಿ ಎಂದು ತಿರುಕೋಷ್ಟಿಯೂರ್ ಅಥವಾ ಗೋಷ್ಠಿಪುರಂ ಎಂಬ ಆ ಊರಿನ ದೊಡ್ಡ ದೇವಾಲಯದ ಗೋಪುರವನ್ನೇರಿ ನಗರದ ಜನಗಳನ್ನೆಲ್ಲಾ ಕರೆದರು. ತಾವು ರಹಸ್ಯವಾಗಿ ಪಡೆದಿದ್ದ ಉಪದೇಶಗಳನ್ನು ಅವರಿಗೆಲ್ಲ ನೀಡಿದರು.



ಈ ವಿಚಾರ ತಿಳಿದ ಗೋಷ್ಠಿಪೂರ್ಣರು ಕೋಪಗೊಂಡರು ರಾಮಾನುಜರು ಅವರ ಬಳಿಗೆ ಬಂದಾಗ ಈ ಅಪರಾಧದ ಪರಿಣಾಮ ಗೊತ್ತೇ? ಎಂದು ಪ್ರಶ್ನಿಸಿದರು. ಅದಕ್ಕೆ ರಾಮಾನುಜರು ತಾಳ್ಮೆಯಿಂದ ಉತ್ತರಿಸಿದರು. "ಗೊತ್ತು, ಗುರುವಿನ ಮಾತು ಮೀರಿದುದಕ್ಕೆ ನನಗೆ ನರಕ ಪ್ರಾಪ್ತಿಯಾಗುತ್ತದೆ. ಆಗಲಿ ಆದರೆ ಇಷ್ಟೊಂದು ಜನಕ್ಕೆ ಮೋಕ್ಷಪ್ರಾಪ್ತಿಯಾಗಿ, "ಕಲ್ಯಾಣವಾಗುವಾಗ ನನಗೆ ನರಕಪ್ರಾಪ್ತಿಯಾದರೂ ಚಿಂತೆಯಿಲ್ಲ".

ಈ ಮಾತುಗಳು ಗೋಷ್ಠಿಪೂರ್ಣರ ಕತ್ತಲ ಹೃದಯದಲ್ಲಿ ಬೆಳಕು ಮೂಡಿಸಿದವು.

ಯಾಮುನಾಚಾರ್ಯರ ಜ್ಞಾನಧಾರೆ ಅವರ ಐವರು ಶಿಷ್ಯರಾದ ಕಾಂಚಿಪೂರ್ಣ, ಗೋಷ್ಠಿಪೂರ್ಣ, ಮಹಾಪೂರ್ಣ, ಮಾಲಾಧರ, ವರರಂಗರಲ್ಲಿ ಹಂಚಿಹೋಗಿತ್ತು. ರಾಮಾನುಜಾಚಾರ್ಯರು ಈ ಐವರು ಶಿಷ್ಯರುಗಳಿಂದ ಉಪದೇಶ ಪಡೆದು ಪರಿಪೂರ್ಣರಾದರು.

ಮುಂದೆ ಚೋಳರಾಜನಿಂದ ತಪ್ಪಿಸಿಕೊಂಡು ರಾಮಾನುಜರು ಕರ್ನಾಟಕವನ್ನು ಪ್ರವೇಶಿಸಿ ಸಾಲಿಗ್ರಾಮವನ್ನು ತಲುಪಿದರು. ಅಲ್ಲಿಂದ ಮೇಲುಕೋಟೆ, ತೊಣ್ಣೂರು ಮುಂತಾದ ಸ್ಥಳಗಳಲ್ಲಿ ನೆಲೆಸಿ ಶಿಷ್ಯಕೋಟಿಯನ್ನು ಸಂಪಾದಿಸಿದರು.ಇಪ್ಪತ್ತು ವರ್ಷಗಳ ಕಾಲ ನೆಲೆಸಿದರು. ಮೇಲುಕೋಟೆಯಲ್ಲಿ ಯತಿರಾಜ ಮಠವನ್ನು ಸ್ಥಾಪಿಸಿದರು.

ರಾಮಾನುಜಾಚಾರ್ಯರು ಸಮಾನತೆಗೆ ಸಂಕೇತರಾದರು. ಭಕ್ತಿಪಂಥಕ್ಕೆ ಒಂದು ಉತ್ತಮ ಚೌಕಟ್ಟನ್ನು ರೂಪಿಸಿಕೊಟ್ಟರು. ಜಾತಿ, ಮತ, ಭೇದವಿಲ್ಲದೇ ಎಲ್ಲರನ್ನು ಪ್ರೀತಿಯಿಂದ ಕಂಡರು.

ತೆಲಂಗಾಣ ರಾಜ್ಯದ ರಂಗಾರೆಡ್ಡಿ ಜಿಲ್ಲೆಯಲ್ಲಿ ರಾಮಾನುಜರ ಸಮಾನತೆಯ ಸಂಕೇತವಾಗಿ ಸುಮಾರು 216 ಅಡಿಗಳ ಎತ್ತರದ ಪ್ರತಿಮೆಯನ್ನು ಕಳೆದ ವರ್ಷ ಪ್ರತಿಷ್ಠಾಪಿಸಲಾಗಿದೆ.

# ರಾಜಮಂತ್ರವೀಣ ಹೆಚ್.ವಿ. ನಂಜುಂಡಯ್ಯ

– ಸುರೇಶ ಮೂನ



ಮೈಸೂರು ಸಂಸ್ಥಾನವನ್ನು ಆಳಿದ ದಿವಾನರುಗಳನ್ನು ಪೂರ್ಣಪ್ರಮಾಣದ ದಿವಾನರು, ಹಂಗಾಮಿ ದಿವಾನರು ಮತ್ತು ದಿವಾನರಾಗಬಲ್ಲವರಾಗಿದ್ದರೂ ಕೆಲವು ಕಾರಣಗಳಿಂದಾಗಿ ಹಾಗಾಗದೆ, ಅಷ್ಟೇಗಹಾನವಾದ ಸೇವೆಯನ್ನು ರಾಜ್ಯಕ್ಕೆ ಸಲ್ಲಿಸಿದವರು ಎಂದು ವಿಂಗಡಿಸಬಹುದು. ಈ ಮೂರನೇ ಗುಂಪಿಗೆ ಸೇರಿದವರೇ ರಾಜಮಂತ್ರ ಪ್ರವೀಣ ಹೆಚ್.ವಿ. ನಂಜುಂಡಯ್ಯ ಅವರು.

ಹೆಚ್.ವಿ. ಎಂದೇ ಪ್ರಸಿದ್ಧರಾದ ಇವರು ಆಡಳಿತ, ನ್ಯಾಯಾಂಗ, ಶಿಕ್ಷಣ ಮುಂತಾದ ಕ್ಷೇತ್ರಗಳಿಗೆ ಸಲ್ಲಿಸಿರುವ ಸೇವೆ ಅಪಾರ.

ಸರ್. ಎಂ. ವಿಶ್ವೇಶ್ವರಯ್ಯ ಮತ್ತು ಹೆಚ್.ವಿ.ಎನ್. ಸಮಕಾಲೀನರು. ಮೈಸೂರು ಸಂಸ್ಥಾನದ ದಿವಾನರಾಗಲು ಸಮಾನ ಅರ್ಹತೆ ಮತ್ತು ಪರಿಣಿತಿಯನ್ನು ಹೊಂದಿದವರು. ಆದರೂ, ಸರ್. ಎಂ.ವಿ. ಅವರು ದಿವಾನರಾದರಲ್ಲದೆ ಇಂದಿಗೂ ನಮ್ಮ ನಾಡಿನಲ್ಲಿ ಮನೆ ಮಾತಾಗಿದ್ದಾರೆ. ಹೆಚ್.ವಿ.ಎನ್. ಅವರು ದಿವಾನರಾಗದಿದ್ದರೂ, ಅಷ್ಟೇ ಮಹತ್ತರವಾದ ಸೇವೆಯನ್ನು ನಾಡಿಗೆ ಸಲ್ಲಿಸಿದ್ದರೂ, ಆ ಪ್ರಮಾಣದಲ್ಲಿ ಪ್ರಸಿದ್ಧರಾಗಲಿಲ್ಲ. ಆದರೆ ನಾವಾಗಲಿ ನಮ್ಮ ಮುಂದಿನ ಪೀಳಿಗೆಯಾಗಲಿ ಮರೆಯಬಾರದ ಮಹಾನ್ವ್ಯಕ್ತಿತ್ವ ಇವರದ್ದು.

ಹೆಚ್.ವಿ.ಎನ್. ರವರು ಮುಲುಕನಾಡು ಬ್ರಾಹ್ಮಣ ಕುಟುಂಬ ಒಂದರಲ್ಲಿ 1860ರಅಕ್ಟೋಬರ್ 13ರಂದು ಜನಿಸಿದರು. ಬಡತನದಲ್ಲಿಯೇ ಮುಂದೆ ಬಂದ ಇವರ ಅಧ್ಯಯನ ಶೀಲಪ್ರವೃತ್ತಿಯನ್ನು ಗಮನಿಸಿದ ಆಗಿನ ಬ್ರಿಟಿಷ್ನ್ಯಾಯಾಧೀಶರು ಇವರ ವಿದ್ಯಾಭ್ಯಾಸಕ್ಕೆ ನೆರವಾದರು. ಪದವಿ ತರಗತಿಗೆ ಸೇರಬೇಕಾದರೆ ಆಗ ಮದ್ರಾಸಿಗೆ ಹೋಗಬೇಕಾಗಿತ್ತು. ಹಾಗೆ ಮೈಸೂರಿನಿಂದ ಮದರಾಸಿಗೆ ಉನ್ನತ ಶಿಕ್ಷಣಕ್ಕೆ ಹೋದ ವಿದ್ಯಾರ್ಥಿಗಳಲ್ಲಿ ಇವರು ಎರಡನೆಯವರಾದರು. 1880 ರಲ್ಲಿ ಬಿಎ ಪರೀಕ್ಷೆಯಲ್ಲಿ ದ್ವಿತೀಯ ಸ್ಥಾನಪಡೆದ ಇವರು 1883 ರಲ್ಲಿ ಎಂ.ಎ. ಪದವಿಯನ್ನು ಅದೇ ವಿಶ್ವವಿದ್ಯಾನಿಲಯದಿಂದ ಪಡೆದು, ಕನ್ನಡನಾಡಿಗೆ ಹಿಂತಿರುಗಿ ಕೊಳ್ಳೇಗಾಲದ ಸಬ್‌ರಿಜಿಸ್ಟ್ರಾರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ನಂತರ, ಹಂತ ಹಂತವಾಗಿ ಮೇಲೇರಿದ ಇವರು 1904 ರಲ್ಲಿ ಮೈಸೂರಿನ ಮುಖ್ಯ ನ್ಯಾಯಾಲಯದ ನ್ಯಾಯಾಧೀಶರಾಗಿ 1907 ರಿಂದ 1908 ರ ಅವಧಿಯಲ್ಲಿ ಮುಖ್ಯ ನ್ಯಾಯಾಧೀಶರಾಗಿಯೂ ಸೇವೆಸಲ್ಲಿಸಿದರು. 1912ರಲ್ಲಿ ಕೌನ್ಸಿಲ್ನ ಪ್ರಥಮ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದರು.

ದಿವಾನ್ಜಿ ಆನಂದರಾಯರು ನಿವೃತ್ತರಾದ ಮೇಲೆ ಕೌನ್ಸಿಲ್ನ ಹಿರಿಯದ ಸದಸ್ಯರಾದ ಇವರೇ ದಿವಾನರಾಗಬೇಕಾಗಿತ್ತು. ಆದರೆ ಆಸ್ಥಾನಕ್ಕೆ ಮಹಾರಾಜ ಕೃಷ್ಣರಾಜಒಡೆಯರ್ ಅವರು ಸರ್. ಎಂ ವಿಶ್ವೇಶ್ವರಯ್ಯನವರನ್ನು ನೇಮಕಮಾಡಿದ್ದರು. ಸರ್. ಎಂ. ವಿ ಮತ್ತು ಹೆಚ್. ವಿ. ಎನ್ ಇಬ್ಬರೂ ಬಹಳ ಕಾಲದಿಂದ ಮಿತ್ರರಾಗಿದ್ದವರೇ. 1906ರಲ್ಲಿ ಸರ್. ಎಂ. ವಿ. ಅವರೇ ಹೆಚ್. ವಿ.ಎನ್. ಅವರಿಗೆ ಬರೆದ ಒಂದು ಪತ್ರದಲ್ಲಿ ಮುಂದೆ ನೀವು ಮೈಸೂರು ಸಂಸ್ಥಾನದ ದಿವಾನರಾಗಬೇಕು ಎಂದು ಸೂಚಿಸಿದ್ದರು. ಆದರೆ ಕಾರಣಾಂತರಗಳಿಂದ ಅವರೇ ಆಸ್ಥಾನವನ್ನು ತೆಗೆದುಕೊಳ್ಳಬೇಕಾಯಿತು. ಆಗಿನ ಪತ್ರಿಕೆಗಳಲ್ಲಿ ಈ ಬಗ್ಗೆ ಪರವಿರೋಧವಾಗಿ ಸಾಕಷ್ಟು ಚರ್ಚೆಗಳಾದವು. ಹೆಚ್.ವಿ.ಎನ್. ಇದರಿಂದ ವಿಚಲಿತರಾಗದೆ ಅವರೊಂದಿಗೆ ತಮ್ಮ ಸ್ನೇಹವನ್ನು ಹಾಗೆಯೇ ಮುಂದುವರಿಸಿದರು.

ಕೌನ್ಸಿಲ್ನ ಪ್ರಥಮ ಸದಸ್ಯರಾಗಿದ್ದಾಗ ಕನ್ನಡ ನಾಡಿನ ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ಹೆಚ್ಚು ಗಮನ ನೀಡಿದರು. ಬೆಂಗಳೂರಿನ ಕೃಷಿ ಪಾಠಶಾಲೆ ಪ್ರಾರಂಭಕ್ಕೂ ಇವರೇ ಕಾರಣರಾದರು. ಇದು ಮುಂದೆ ವಿಸ್ತಾರಗೊಂಡು ಕೃಷಿ ವಿಶ್ವವಿದ್ಯಾನಿಲಯವಾಯಿತು. ಹಾಗೆಯೇ ಇವರ ಪ್ರಯತ್ನದಿಂದ ಇಲ್ಲಿ ಮೆಡಿಕಲ್ಸ್ಕೂಲ್ಪ್ರಾರಂಭವಾಯಿತು. ಶಾಲಾ ಮಟ್ಟದಲ್ಲಿ ನೈತಿಕ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆಕೊಟ್ಟಿದ್ದು, ಮಹಿಳೆಯರ ಶಿಕ್ಷಣದ ಅಭಿವೃದ್ಧಿ, ಇವೆಲ್ಲ ಹೆಚ್ಚಿನವರ ಕನಸಿನ ಕೂಸುಗಳೇ.

ಸರ್. ಎಂ. ವಿ ಅವರ ಪ್ರಗತಿ ಪರಚಿಂತನೆಯಲ್ಲಿ ಉನ್ನತ ಶಿಕ್ಷಣಕ್ಕೆ ಒಂದು ಸ್ವತಂತ್ರ ವಿಶ್ವವಿದ್ಯಾನಿಲಯ ಮತ್ತು ನಾಡಭಾಷೆಯ ಅಭಿವೃದ್ಧಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ ಇವು ಸೇರಿದ್ದವು. ಈ ಎರಡೂ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರುವ ಜವಾಬ್ದಾರಿಯನ್ನು ಸರ್. ಎಂ. ವಿ. ತಮ್ಮ ಮಿತ್ರರಾದ ಹೆಚ್.ವಿ.ಎನ್. ಅವರಿಗೆ ವಹಿಸಿದ್ದರು. ಮುಂದೆ 1915ರ ಮೇ ತಿಂಗಳಿಂದ 1920ರ ಮಾರ್ಚ್‌ರೆಗೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆ ಸಂಸ್ಥೆಯ ಸರ್ವತೋಮುಖ ಬೆಳವಣಿಗೆಗೆ ಕಾರಣರಾದರು. 1915 ರಲ್ಲಿ ಬೆಂಗಳೂರಲ್ಲಿ ನಡೆದ ಮತ್ತು 1917ರಲ್ಲಿ ಮೈಸೂರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಇವರೇ ಅಧ್ಯಕ್ಷರಾಗಿದ್ದರು. ಪ್ರಥಮ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡ ಭಾಷೆಯು ಅನ್ಯಭಾಷೆಯಿಂದ ನಾಡಭಾಷೆಯಾಗಿ ಬೆಳವಣಿಗೆ ಆಗಬೇಕಾದುದರ ಅವಶ್ಯಕತೆ ಮುಂತಾದ ನಾಡುನುಡಿಗೆ ಸಂಬಂಧಿಸಿದ ಸಂಗತಿಗಳ ಬಗ್ಗೆ ಮಾಡಿದ ಭಾಷಣ ಇಂದಿಗೂ ಪ್ರಸ್ತುತವಾಗಿದೆ.

1916 ರ ಏಪ್ರಿಲ್ ತಿಂಗಳಿನಲ್ಲಿ ಸರ್ಕಾರಿ ಕೆಲಸದಿಂದ ನಿವೃತ್ತಿ ಹೊಂದಿದ ಮೇಲೆ ಇವರನ್ನು ಆ ವರ್ಷದ ಜುಲೈ 1 ರಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಾರಂಭಕ್ಕೆ ಬೇಕಾದ ಸೂಕ್ತ ಸಿದ್ಧತೆಗಳನ್ನು ಮಾಡುವ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಯಿತು. ಸರ್. ಎಂ. ವಿಯವರು ಆಗ ಹೆಚ್. ವಿ. ಎನ್ ರವರಿಗೆ ಬರೆದಪತ್ರದಲ್ಲಿ'... ಸರ್. ಹಾರ್ಕೋರ್ಟ್‌ಬಟ್ಲಂಬ ತಜ್ಞರು ಬೆಂಗಳೂರು ವಿಶ್ವವಿದ್ಯಾನಿಲಯದ

ರೂಪರೇಷೆಗಳ ಬಗ್ಗೆ ಚರ್ಚಿಸಲು ಬರುತ್ತಿದ್ದಾರೆ, ಅವರೊಂದಿಗೆ ನಾವಿಬ್ಬರೂ ಕೂತು ಮಾತಾಡಬೇಕಾಗಿದೆ. ಈ ಇಡೀ ಪ್ರಕ್ರಿಯೆಯು ನೀವು ಮುಂಚೆ ತಯಾರಿಸಿದ ಯೋಜನೆಯನ್ನೇ ಆಧರಿಸಿದೆ...' ಎಂದು ಬರೆದಿದ್ದರು. ಹೀಗೆ ಕನ್ನಡ ನಾಡಿನ ಈ ಉನ್ನತ ಸಂಸ್ಥೆಯ ಸ್ಥಾಪನೆಗೆ ಕಾರಣರಾದ ಇವರು ಅದರ ಪ್ರಥಮ ಉಪಕುಲಪತಿಗಳಾಗಿ ನಾಲ್ಕು ವರ್ಷಗಳ ಕಾಲ ಸಮರ್ಪಕವಾಗಿ ಕೆಲಸ ಮಾಡಿ ಅದರ ಸರ್ವಾಂಗೀಣ ಬೆಳವಣಿಗೆ ಮತ್ತು ಘನತೆ ಗೌರವಗಳನ್ನು ಗಳಿಸುವುದಕ್ಕೆ ಸಂಬಂಧಿಸಿದಂತೆ ಭದ್ರವಾದ ಬುನಾದಿಯನ್ನು ಹಾಕಿದರು.

ಹೆಚ್.ವಿ.ಎನ್ ಅವರಿಗೆ ಕನ್ನಡ ಭಾಷೆಗೆ ಹಾಗೆಯೇ ಇಲ್ಲಿನ ಜನರಿಗೆ ಸೂಕ್ತ ಸ್ಥಾನಮಾನಗಳು ದೊರಕಬೇಕೆಂಬುದು ಪ್ರಬಲ ಆಕಾಂಕ್ಷೆಯಾಗಿತ್ತು. 1905ರಲ್ಲಿ ಮೈಸೂರಿನಲ್ಲಿ ನ್ಯಾಯಾಧೀಶರಾಗಿದ್ದಾಗ ತಮ್ಮ ಭಾಷಣ ಒಂದರಲ್ಲಿ, ಮೈಸೂರು ಸಿವಿಲ್ಸರ್ವಿಸ್ಪರೀಕ್ಷೆಗಳನ್ನು ಹೊರಗಿನ ಎಲ್ಲರೂ ತೆಗೆದುಕೊಳ್ಳಲು ಸರಕಾರ ಅವಕಾಶ ನೀಡಿರುವ ಕ್ರಮವನ್ನು ಪ್ರಸ್ತಾಪಿಸಿ ಇದರಿಂದ ಮಣ್ಣಿನ ಮಕ್ಕಳಿಗೆ ಅನ್ಯಾಯವಾಗುವುದೆಂದು ಸರ್ಕಾರವನ್ನು ನೇರವಾಗಿ ಟೀಕಿಸಿದ್ದರು. ಮಹಾರಾಜರಿಗೆ ತಮ್ಮ ಅಭಿಪ್ರಾಯದ ಪ್ರಾಮಾಣಿಕತೆಯನ್ನು ತಿಳಿಯಪಡಿಸಿದ್ದರು.

ಇವರು ಕನ್ನಡ ನಾಡಿಗೆಸಲ್ಲಿಸಿದ ಅಪಾರ ಸೇವೆಯನ್ನು ಗುರುತಿಸಿ ಮಹಾರಾಜರು ರಾಜ ಮಂತ್ರ ಪ್ರವೀಣ ಎಂಬ ಬಿರುದನ್ನು, ಬ್ರಿಟಿಷ್ ಸರ್ಕಾರವು ಸಿಐಇ ಗೌರವವನ್ನು ನೀಡಿ ಸತ್ಕರಿಸಲಾಗಿತ್ತು. ಹೆಚ್.ವಿ.ಎನ್ ಅವರು ಎಷ್ಟೇ ಉನ್ನತ ಹುದ್ದೆಯಲ್ಲಿದ್ದರೂ ಅವರಲ್ಲಿ ಅಪಾರವಾದ ಮಾನವೀಯತೆ, ಅನುಕಂಪ, ನಾಡಿನ ಜನತೆಯ ಅಭಿವೃದ್ಧಿ ಮುಂತಾದವುಗಳ ಬಗ್ಗೆ ಇದ್ದ ಉನ್ನತ ಚಿಂತನೆಗಳನ್ನು ತಿಳಿಸಿಕೊಡುವ ಹಲವಾರು ನಿದರ್ಶನಗಳು ಅವರ ಜೀವನದಲ್ಲಿ ಕಂಡುಬರುತ್ತವೆ.

ತಮ್ಮ ವಿಶ್ರಾಂತ ಜೀವನಕ್ಕಾಗಿ ಇವರು ಬೆಂಗಳೂರಿನ ಮಲ್ಲೇಶ್ವರದಲ್ಲಿ ಭವ್ಯವಾದ ಕಲ್ಲಿನ ಬಂಗಲೆಯನ್ನು ಕಟ್ಟಿಸಿದ್ದರು. ಪ್ರತಿ ನಿತ್ಯ ಈ ಮನೆಯಲ್ಲಿ ನೂರಾರು ಮಂದಿಗೆ ಅನ್ನದಾನ ನಡೆಯುತ್ತಿತ್ತು. ಶಿಕ್ಷಣ ಸಾಹಿತ್ಯ ಮುಂತಾದ ವಿಷಯಗಳ ಬಗ್ಗೆ ಗಣ್ಯವ್ಯಕ್ತಿಗಳ ಸಮಾಲೋಚನೆಗಳು ನಡೆಯುತ್ತಿದ್ದವು. ಇವರ ನಂತರ ಈ ಕಟ್ಟಡವನ್ನು ಒಂದಿಷ್ಟುಕಾಲ ಚಲನಚಿತ್ರ ತಯಾರಿಸಲು ಬಳಸಿಕೊಳ್ಳಲಾಗುತ್ತಿತ್ತು, ನಂತರ ಇದನ್ನು ಸರಕಾರಿ ಬಾಲಕಿಯರ ಪ್ರೌಢಶಾಲೆಯನ್ನಾಗಿ ಮಾಡಲಾಯಿತು. ಇಂದಿಗೂ ಇದನ್ನು ಸೂಕ್ತರೀತಿಯಲ್ಲಿ ಸಂರಕ್ಷಿಸಲಾಗಿದೆ. ಈ ಅದ್ಭುತವಾದ ಕಲ್ಲಿನ ಕಟ್ಟಡ ಹೆಚ್ವಿ.ವಿ.ಎನ್.ರವರ ಧೀಮಂತ ವ್ಯಕ್ತಿತ್ವದ ಪ್ರತೀಕವಾಗಿದೆ. ಮಲ್ಲೇಶ್ವರದ ಒಂದು ಮುಖ್ಯ ರಸ್ತೆಗೆ ಇವರ ಹೆಸರನ್ನೇ ಇಟ್ಟು ಗೌರವಿಸಲಾಗಿದೆ. ಹೀಗೆ ಕನ್ನಡ ನಾಡಿಗೆ ಬಹುಮುಖ ಸೇವೆಸಲ್ಲಿಸಿದ ಈ ಮಹನೀಯರು 1920 ರಲ್ಲಿ ದೈವಾಧೀನರಾದರು.


**ಜಾಹಿರಾತು**

# ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

# Sri Srinivasa Nilaya Dharmika Sabha Mandira

**ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ**

**ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085**

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**

**ಸ್ಥಳದ ಬಾಡಿಗೆ ಇರುವುದಿಲ್ಲ.**

**ದಕ್ಷಿಣ ಮತ್ತು ಉತ್ತರ ಭಾರತದ ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು**

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**

## ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಾಹ್ಮಣರ ಪಾತ್ರ – 7

# ಪಂಡಿತ್ ಮದನ ಮೋಹನ ಮಾಲವೀಯ

– ಛಾಯಾಪತಿ ಕೆ.ಎನ್.




(ಸನಾತನ ಧರ್ಮದ ಉಜ್ಜೀವಕ)

ವಿದ್ಯೆ ಮತ್ತು ಬಡತನ ಎರಡೂ ಬ್ರಾಹ್ಮಣರ ಜೀವನಸಂಗಾತಿಗಳು ಬಡತನದ ಬೇಗೆಯಿಂದ ಶಾಲೆಗೆ ಹೋಗುವ ದಿನ ಹಿಂದಿನ ದಿನದ ಹಳಸಿದ ರೊಟ್ಟಿಯನ್ನು ಮಜ್ಜಿಗೆಯಲ್ಲಿ ನೆನೆಸಿ ತಿಂದು ಓದಿ ಶ್ರೇಷ್ಠ ವ್ಯಕ್ತಿಯಾಗಿ ತಾಯಿ ಭಾರತಿಯ ಸೇವೆ ಮಾಡಿದ ಆದರ್ಶ ಬ್ರಾಹ್ಮಣ ಪುರುಷ ಮದನಮೋಹನ ಮಾಲವೀಯ.

ಕಾಶಿ ಹಿಂದೂ ವಿಶ್ವವಿದ್ಯಾಲಯ ಅಥವಾ ಬೆನಾರಸ್ ಹಿಂದೂ ಯುನಿವರ್ಸಿಟಿ ಇದನ್ನು ಕೇಳಿದಾಕ್ಷಣ ಮನಸ್ಸು ಪುಳಕಿತಗೊಳ್ಳುತ್ತದೆ. ಈ ಹೆಸರು ಏನೋ ಒಂದು ರೀತಿಯ ಪವಿತ್ರ ಭಾವನೆಯಿಂದ ಮನಸ್ಸನ್ನು ಅಲ್ಲಿ ನೆಲೆಗೊಳಿಸುತ್ತದೆ. ಅಂದಿನ ದಿನಗಳಲ್ಲಿ ಬ್ರಿಟಿಷರ ಆಳ್ವಿಕೆಯ ಪ್ರಭಾವದಿಂದ ಶಿಕ್ಷಣ ಪದ್ಧತಿಯಂತೂ ಪಾಶ್ಚಾತ್ಯ ಚಿಂತನ ರೀತಿಯಿಂದ ರೂಪುಗೊಂಡಿತ್ತು. ಭಾರತೀಯ ಧರ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸಬಲ್ಲ ಒಂದಾದರೂ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಬೇಕೆಂಬ ಬಲವಾದ ಸಂಕಲ್ಪ ಮತ್ತು ಇಚ್ಛೆ ಇಟ್ಟುಕೊಂಡು ಕಾರ್ಯರೂಪಕ್ಕೆ ತಂದವರೇ ಮದನಮೋಹನ ಮಾಲವೀಯರು.

ಸತ್ಸಂಪ್ರದಾಯ ಬ್ರಾಹ್ಮಣ ಮನೆತನಕ್ಕೆ ಸೇರಿದವರು ಮದನಮೋಹನ ಮಾಲವಿಯರು. ಉತ್ತರ ಭಾರತದಲ್ಲಿ ಝಾನ್ಸಿಯ ಸಮೀಪ ಇರುವ ಮಾಲವ ಎಂಬ ಊರಿನಲ್ಲಿ ಜನಿಸಿದರು. ಆದಕಾರಣ ಅವರ ಹೆಸರಿನ ಜೊತೆಯಲ್ಲಿ ಅವರ ಊರಿನ ಹೆಸರು ಸೇರಿ ಮದನ ಮೋಹನ ಮಾಲವೀಯ ಆದರು. ಅಹಿಯಾಪುರ ಇಂದು ಮಾಲವ ನಗರ ಎಂದು ಪ್ರಸಿದ್ಧಿಯಾಗಿದೆ. ಈ ಊರಿನಲ್ಲೇ 1861ರಲ್ಲಿ ಮದನ ಮೋಹನ ಮಾಲವೀಯರು ಜನಿಸಿದರು. ತಂದೆ ವ್ರಜನಾಥರು ತಾಯಿ ಮೂನಾದೇವಿ. ವ್ರಜನಾಥರು ಭಾಗವತ ಪುರಾಣ ಕಥಾವಚನ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಮಣ್ಣಿನ ಗೋಡೆಯ ಒಂದು ಪುಟ್ಟ ಮನೆ. ಬಂದ ಜನರನ್ನು ಒಳಗೆ ಕರೆಯಲೂ ಆಗದ ಸ್ಥಿತಿ. ಶ್ರದ್ಧಾಶೀಲನೂ, ಆಚಾರ್ಯವಂತನೂ, ವಿಚಾರವಂತನೂ, ಆದ ಬ್ರಾಹ್ಮಣನಿಗೆ ಜೀವನ ನಿರ್ವಹಣೆ ಅದೆಷ್ಟು ಕಠಿಣವಾಗಿರುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ. ಶ್ರೀಮಂತಿಕೆಯನ್ನು ಅರಸಿಕೊಂಡು ಅಕ್ರಮವಾಗಿ ಸಂಪಾದಿಸಿ ಸುಖವಾದ ಜೀವನ ಅವರಿಗೆ ಬೇಕಾಗಿರುವುದಿಲ್ಲ. ಕರುಣಾಶಾಲಿ ದೇವರಲ್ಲಿ ನಂಬಿಕೆ,ಆಚಾರ, ವಿಚಾರ,ಸಂಸ್ಕೃತಿ, ಸಂಸ್ಕಾರಗಳೇ ಅವರ ಶ್ರೀಮಂತಿಕೆ. ಸರಳ ಜೀವನ ಉನ್ನತ ಚಿಂತನೆಯೇ (Simple living and high thinking) ಅವರ ಜೀವನ. ಅದರಲ್ಲೇ ಆನಂದ.

ಹುಡುಗ ಮದನಮೋಹನ ಸದಾ ಹಸನ್ಮುಖಿ. ಚೈತನ್ಯದ ಮೂರ್ತಿ . ಆತನ ಐದನೇ ವರ್ಷದಿಂದಲೇ ಶಿಕ್ಷಣ ಪ್ರಾರಂಭವಾಯಿತು. ಪ್ರಯಾಗದ ಮೊಹಲ್ಲಾದಲ್ಲಿ ಯಾವ ಶಾಲೆಯು ನಡೆಯುತ್ತಿರಲಿಲ್ಲ. ಪಂಡಿತ ಹರದೇವ ಎಂಬ ವಿದ್ವಾಂಸರು ಧರ್ಮಜ್ಞಾನೋಪದೇಶ ಪಾಠಶಾಲೆ ಎಂಬ ಶಾಲೆ ನಡೆಸುತ್ತಿದ್ದರು. ತಂದೆಯವರು ಮಾಲವೀಯನನ್ನು ಆ ಪಾಠಶಾಲೆಗೆ ಸೇರಿಸಿದರು. ಅಲ್ಲಿ ಸಂಸ್ಕೃತ, ಗೀತೆ, ಕೌಮುದಿ, ಮನುಸ್ಮೃತಿ ಮತ್ತು ಅನೇಕಾನೇಕ ಸಂಸ್ಕೃತ ನೀತಿ ಶ್ಲೋಕಗಳನ್ನು ಕಲಿತನು.

ಮದನಮೋಹನನ ವಾರಿಗೆ ಹುಡುಗರು ಆಂಗ್ಲ ಶಾಲೆಗೆ ಸೇರಿದರು. ಇದನ್ನು ನೋಡಿ ನಾನೂ ಏಕೆ ಇಂಗ್ಲೀಷ್ ಶಾಲೆಗೆ ಹೋಗಬಾರದೆಂದು ಅನಿಸಿತು. ಆದರೆ ಮನೆಯಲ್ಲಿ ಬಡತನ ಇಂಗ್ಲಿಷ್ ಶಾಲೆಗೆ ಶುಲ್ಕ ನೀಡಲು ಹಣವಿಲ್ಲ. ಆಗ ಮದನಮೋಹನನ ತಾಯಿ ತನ್ನ ಚಿಕ್ಕಪುಟ್ಟ ಒಡವೆಗಳನ್ನು ಗಿರವಿ ಇಟ್ಟು ಆ ಹಣದಲ್ಲಿ ಮಗನನ್ನು ಇಂಗ್ಲಿಷ ಶಾಲೆಗೆ ಸೇರಿಸಿದರು. ಬಡತನದ ದೆಸೆಯಿಂದ ಅಡಿಗೆ ಮಾಡಲು ಶಕ್ತರಲ್ಲದ ಇವರ ಮನೆಯಲ್ಲಿ ಹಿಂದಿನ ದಿನ ಮಾಡಿದ ಹಳಸಿದ ರೊಟ್ಟಿಯನ್ನು ಮಜ್ಜಿಗೆಯಲ್ಲಿ ನೆನೆಸಿ ತಿಂದು ಮಾಲವೀಯ ಶಾಲೆಗೆ ಹೋಗುತ್ತಿದ್ದ. ಚಿಕ್ಕಮನೆಯಲ್ಲಿ ಕುಳಿತು ಓದಲು ಜಾಗದ ಕೊರತೆ. ರಾತ್ರಿಯಲ್ಲಿ ಅವನ ಗೆಳೆಯನ ಮನೆಯಲ್ಲಿ ಓದಿ ಬೆಳಗ್ಗೆ ಮನೆಗೆ ಹಿಂದಿರುಗುತ್ತಿದ್ದ. ಎಷ್ಟೇ ಕಷ್ಟವಿದ್ದರೂ ಪ್ರಾತಃಕಾಲ ಸಂಧ್ಯಾಕಾಲ ಸಂಧ್ಯಾವಂದನೆ ಮಾಡುತ್ತಿದ್ದ. 1881ರಲ್ಲಿ ಮದನಮೋಹನ ಮ್ಯೋರ್ ಸೆಂಟ್ರಲ್ ಕಾಲೇಜಿನಲ್ಲಿ ಎಫ್.ಎ ಪರೀಕ್ಷೆಗೆ ಕುಳಿತು ತೇರ್ಗಡೆಯಾದ. ಜ್ಞಾನಪಿಪಾಸುವಾಗಿದ್ದ ಆ ತರುಣ ಬೇರೆಯವರ ಸಹಾಯದಿಂದ ಬಿ.ಎ. ಓದಲು ಕಲ್ಕತ್ತೆಗೆ ತೆರಳಿದ. ಬಿ. ಎ.ಪರೀಕ್ಷೆ ಮುಗಿಸಿ ಉತ್ತೀರ್ಣನಾದ. ಎಂ.ಎ. ವ್ಯಾಸಂಗ ಮಾಡಲು ಮನಸ್ಸು ಉತ್ಕಟವಾಗಿದ್ದರೂ ಮನೆಯ ಕಷ್ಟದ ಪರಿಸ್ಥಿತಿ ಅರಿತು ತಂದೆ ತಾಯಿಗೆ ನೆರವಾಗಲು ನೌಕರಿಗೆ ಸೇರಬೇಕಾಯಿತು. ಮಾಸಿಕ 40 ರೂಪಾಯಿ ವೇತನಕ್ಕೆ ಅಧ್ಯಾಪಕ ವೃತ್ತಿಯನ್ನು

ಸ್ವೀಕರಿಸಿದರು. ಅಲ್ಲದೆ ಅವರೊಬ್ಬ ಹುಟ್ಟು ಕವಿ. ಅನೇಕ ಕವಿತೆಗಳನ್ನು ರಚಿಸಿದ್ದಾರೆ. *ಮಕರಂದ* ಎಂಬುದು ಅವರ ಕಾವ್ಯನಾಮ. *ರಾಧಿಕಾ ರಾಣಿ* ಎಂಬುದೇ ಅವರ ಮೊದಲ ಕಾವ್ಯ ರಚನೆ.

ಮಾಲವೀಯರಿಗೆ ಬಹಳ ಚಿಕ್ಕ ವಯಸ್ಸಿನಲ್ಲೇ ವಿವಾಹವಾಯಿತು. ಮಿರ್ಜಾಪುರದಲ್ಲಿ ಒಮ್ಮೆ ವಿದ್ವಾಂಸರ ಮಂಡಳಿಯೊಂದು ಶಾಸ್ತ್ರಾರ್ಥ ಮಂಡನೆಗೋಷ್ಠಿ ಕಾರ್ಯಕ್ರಮವೇರ್ಪಡಿಸಿದ್ದರು. ಅಲ್ಲಿಯ ವಿದ್ವಾಂಸರ ಚರ್ಚೆಯನ್ನು ಕೇಳಿ ಈತನಿಗೂ ವಿಷಯ ಮಂಡನೆ ಮಾಡಲು ಕಾತುರ. ಒಂದೆರಡು ಸಲ ವಿಳಲು ಪ್ರಯತ್ನಿಸಿದ. ಕೊನೆಗೆ ಅವಕಾಶ ದೊರೆಯಿತು. ಗಂಭೀರವಾಣಿಯಲ್ಲಿ ಮಾತಿಗೆ ಪ್ರಾರಂಭಿಸಿದ. ಸಂಸ್ಕೃತ ಭಾಷೆಯಲ್ಲಿ ನಿರರ್ಗಳ ಮಂಡನೆ, ಅಸಾಧಾರಣ ತರ್ಕಸರಣಿ, ಅತ್ಯಪೂರ್ವವಾದ ವಿದ್ವತ್ತು ಇವೆಲ್ಲಾ ಕಂಡು ಅಲ್ಲಿಯ ಪಂಡಿತರೆಲ್ಲಾ ಬೆರಗಾದರು. ಅಧ್ಯಕ್ಷರ ಪೀಠ ಧರಿಸಿದ್ದ ಪಂಡಿತ ಆದಿತ್ಯರಾವ್ ಅವರು ಮದನಮೋಹನನ ವಿದ್ಯೆ, ರೂಪ, ವಿನಯ, ಗಾಂಭೀರ್ಯ ಮತ್ತು ವಾಕ್ ಪಟುತ್ವಕ್ಕೆ ಮುಗ್ಧರಾಗಿದಷ್ಟೇ ಅಲ್ಲ ಅವರಿಗೆ ಮಾತೇ ಬರಲಿಲ್ಲ. ಕೊನೆಗೆ ಆತನಿಗೆ ಮನಸೋತು ಎಲ್ಲಾ ತಂದೆ ತಾಯಿಯರು ಒಳ್ಳೆಯ ವರನನ್ನು ಅಪೇಕ್ಷೆ ಪಡುವಂತೆ ತನ್ನ ತೃತೀಯ ಪುತ್ರಿ ಕುಂದನದೇವಿಯನ್ನು ಕೊಟ್ಟು ಮದುವೆ ಮಾಡಿದರು. ಉಳ್ಳವರ ಮನೆಯಲ್ಲಿ ಸುಖವಾಗಿ ಬೆಳೆದ ಹೆಣ್ಣು ಮಗಳು ದಾರಿದ್ರದಿಂದ ಜೀವನ ಸಾಗಿಸುತ್ತಿದ್ದ ಮನೆಗೆ ಸೊಸೆಯಾಗಿ ಬಂದಳು. ಕಾಲಕ್ರಮೇಣ ಗಂಡನ ಮನೆಗೆ ಹೊಂದಿಕೊಂಡು ಪತಿಗೆ ತಕ್ಕ ಸತಿಯಾಗಿ ಸಹನಶೀಲತೆ ಹಾಗೂ ಔದಾರ್ಯದಿಂದ ಜೀವನದುದ್ದಕ್ಕೂ ಪತಿಗೆ ಸಹಕರಿಸಿದಳು. ಮಾಲವೀಯರಿಗೆ ಕಾನೂನು ಪದವಿ ಪಡೆಯಬೇಕೆಂಬ ಆಸೆ ಇತ್ತು. ಆದರೆ ಅವರಿಗೆ ಆರ್ಥಿಕಶಕ್ತಿ ಇರಲಿಲ್ಲ. ಆಗ ಇವರ ಪ್ರತಿಭೆಯನ್ನು ನೋಡಿ ರಾಜಾರಾಮ್ ವಾಲಾ ಎಂಬ ವ್ಯಕ್ತಿಯು ಅವರ ಕಾನೂನು ವ್ಯಾಸಂಗಕ್ಕೆ ಸಹಾಯ ಮಾಡಿದರು. ಹೀಗಾಗಿ 1982 ರಲ್ಲಿ ಪ್ರಯಾಗ ವಿಶ್ವವಿದ್ಯಾನಿಲಯದಿಂದ ಎಲ್ ಎಲ್ ಬಿ ಪದವಿ ಪಡೆದರು. ಮತ್ತು ಅಲಹಾಬಾದ್ ಹೈಕೋರ್ಟಿನಲ್ಲಿ ವಕೀಲರಾದರು. ಸ್ವಲ್ಪ ಕಾಲದಲ್ಲಿಯೇ ಬಹು ಪ್ರಸಿದ್ಧ ವಕೀಲರಾದರು. ಆ ವೃತ್ತಿಯನ್ನು ಕೇವಲ ಹಣಸಂಪಾದನೆಗೆ ಸೀಮಿತ ಮಾಡಿಕೊಳ್ಳಲಿಲ್ಲ.ಅಸತ್ಯ ಮತ್ತು ನಿರರ್ಥಕ ಕೇಸುಗಳನ್ನು ಮುಟ್ಟುತ್ತಿರಲಿಲ್ಲ. ನಿರಪರಾಧಿಗಳು, ದೀನದಲಿತರು, ಬಡವರ ಪರವಾಗಿಯೇ ವಾದಿಸಿ ಗೆಲ್ಲುತ್ತಿದ್ದರು. ಮಾಲವೀಯರು ಸಾಹಿತ್ಯಕ್ಷೇತ್ರದಲ್ಲೂ ಮುಂಚೂಣಿಯಲ್ಲಿದ್ದರು. ಅನೇಕ ಪತ್ರಿಕೆಗಳಲ್ಲಿ ಸಂಪಾದಕರಾಗಿಯೂ ಸಹ ಕೆಲಸ ಮಾಡಿದ್ದರು.

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮಾ ಗಾಂಧಿ, ಸುಭಾಷ್ ಚಂದ್ರ ಬೋಸ್, ಸರ್ದಾರ್ ಪಟೇಲ್, ಗೋಖಲೆ ಹೇಗೆ ಹೊರನೋಟಕ್ಕೆ ಕಾಣಿಸುತ್ತಾರೋ ಹಾಗೆ ಮಾಲವೀಯರು ಕಾಣಿಸುವುದಿಲ್ಲ.ಆದರೆ ಸ್ವಾತಂತ್ರ್ಯ ಭವನದ ಅಸ್ತಿಭಾರವಿದ್ದಂತೆ ಇದ್ದರು. ಗಾಂಧೀಜಿಯವರು *ರಾಷ್ಟ್ರಪಿತ* ಎನಿಸಿದ್ದರೆ ಮಾಲವೀಯರು *ರಾಷ್ಟ್ರಗುರು* ಎನಿಸಿದ್ದಾರೆ. ಅವರೆಂದೂ ಕ್ರಾಂತಿಕಾರಿ ಕಾರ್ಯವಾಗಲಿ, ಸತ್ಯಾಗ್ರಹ, ಉಪವಾಸ ಸತ್ಯಾಗ್ರಹವಾಗಲಿ ಮಾಡಲಿಲ್ಲ, ಲಾಟಿ ಏಟು ಗುಂಡಿನ ರುಚಿಯನ್ನೂ ನೋಡಲಿಲ್ಲ. ಆದರೆ ಗಾಂಧೀಜಿಯಿಂದ ಹಿಡಿದು ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೂ ಪ್ರೇರಣಾತದಾಯಿಯಾಗಿದ್ದರು. ಡಾಕ್ಟರ್ ಬಾಬಾ ಸಾಹೇಬ ಅಂಬೇಡ್ಕರ್ ರವರು ಸಹ ಇವರಿಂದ ಪ್ರಭಾವಿತರಾಗಿದ್ದರು. ಭಗತ್ ಸಿಂಗ್ ಯಾವ ಕಾರಣಕ್ಕಾಗಿ ತನ್ನ ಪ್ರಾಣಾರ್ಪಣೆ ಮಾಡಿದನೋ, ಆ ಕಾರ್ಯವನ್ನು ಅತಿ ಶೀಘ್ರವಾಗಿ ಈಡೇರಿಸಲು ಸಂಕಲ್ಪ ಮಾಡಬೇಕಾಗಿದೆ. ಇಲ್ಲಿಯ ವಿದೇಶಿ ಪ್ರಭುತ್ವ ನೀಗಬೇಕೆಂಬುದು ಅವರ ಪ್ರಬಲ ಇಚ್ಛೆಯಾಗಿತ್ತು. ನಿಮಗೆ ಭಗತ್ ಸಿಂಗ್ ನಲ್ಲಿ ನಿಜವಾದ ಪ್ರೇಮವಿದ್ದರೆ ನೀವೆಲ್ಲ ಈ ದೇಶದಿಂದ ಬ್ರಿಟಿಷ್ ಪ್ರಭುತ್ವವನ್ನು ನಿರ್ನಾಮ ಮಾಡಲು ಶ್ರಮಿಸಬೇಕು. ಆಗ ಮಾತ್ರ ಭಗತ್ ಸಿಂಗನ ಆತ್ಮಕ್ಕೆ ಶಾಂತಿ ದೊರೆತೀತು. 1923ರಲ್ಲಿ ಚೌರಿ ಚೌರ ಕಾಂಡದ ಹಿನ್ನೆಲೆಯಲ್ಲಿ ಅಪರಾಧಿಗಳಾಗಿದ್ದ 151 ಜನ ಕಾರ್ಯಕರ್ತರ ಪರವಾಗಿ ಪ್ರಯಾಗದ ಉಚ್ಚನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಾಡಿ ಮರಣ–ದಂಡನೆಯಿಂದ ರಕ್ಷಿಸಿದ್ದರು. ಇಂಡಿಮ್ನಿಟಿ ಕುರಿತು ಮಾಲವೀಯರು ಶಾಸನಸಭೆಯಲ್ಲಿ ದೀರ್ಘ ಭಾಷಣದಲ್ಲಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಬಗ್ಗೆ ಸವಿವರವಾಗಿ ಮತ್ತು ಹರಿತವಾದ ಪರಾಮರ್ಶೆ ಮಾಡಿದರು. (1919 ಸೆಪ್ಟೆಂಬರ್ 18, 19 ಮತ್ತು 25) ಸಮಗ್ರತೆ ಮತ್ತು ನಿಶಿತತೆಯ ಕಾರಣದಿಂದ ಅವರ ಭಾಷಣ ಇತಿಹಾಸಾರ್ಥವೆಂದು ದಾಖಲಾಯಿತು. ಹೀಗೆ ಇನ್ನೂ ಅನೇಕ ರೀತಿಯ ಲೇಖನ, ಭಾಷಣ, ಮಾರ್ಗದರ್ಶನ ಮಾಡಿ ಸ್ವಾತಂತ್ರ್ಯ ಕಿಚ್ಚನ್ನು ಹಚ್ಚಿದರು. ದುಂಡುಮೇಜಿನ ಪರಿಷತ್ತು ಮೊದಲಾದ ಪ್ರಮುಖ ಸಂದರ್ಭಗಳಲ್ಲೆಲ್ಲ ಗಾಂಧೀಜೀಯವರು ಮಾಲವೀಯರ ಸಲಹೆ ಸೂಚನೆ ಕೇಳುತ್ತಿದ್ದರು. ಗಾಂಧೀಜಿಯವರಿಗಿಂತ ಎಂಟು ವರ್ಷ ಹಿರಿಯರಾದ ಮಾಲವೀಯರು ಗಾಂಧೀಜಿಯವರನ್ನು ಕಿರಿಯ ಸೋದರನೆಂದು ಪರಿಗಣಿಸಿ ವಿಶೇಷ ವಾತ್ಸಲ್ಯ ತೋರುತ್ತಿದ್ದರು.

## ಮಾಲವೀಯರ ಜೀವನದ ಪ್ರಮುಖ ಘಟ್ಟ

ಕಾಶಿ ಹಿಂದೂ ವಿಶ್ವವಿದ್ಯಾಲಯ (ಅಥವಾ ಬನಾರಸ್ ಹಿಂದೂ ಯುನಿವರ್ಸಿಟಿ) ಇದರ ಬಗ್ಗೆ ತಿಳಿಯಬೇಕಾದದ್ದು ನಮ್ಮೆಲ್ಲರ ಕರ್ತವ್ಯ.

ಮಾಲವೀಯರು ಎರಡು ಮೂರುಬಾರಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ಎಲ್ಲೆಡೆ ಪ್ರವಾಸ ಮಾಡುವಾಗ ಬಹಳ ಖೇದಕರವಾದ ಸಂಗತಿ ಅವರ ಗಮನಕ್ಕೆ ಬಂದಿತು. ಅದರ ಬಗ್ಗೆ ವ್ಯಾಕುಲರಾದರು. ಪಾಶ್ಚಿಮಾತ್ಯರ ಆಳ್ವಿಕೆಯ ಪರಿಣಾಮವಾಗಿ ವಿದ್ಯಾಕ್ಷೇತ್ರದಲ್ಲಿ, ಶಿಕ್ಷಣ ಪದ್ಧತಿಯಲ್ಲಿ ಕೆಟ್ಟ ಬೆಳವಣಿಗೆಗಳು ಪ್ರಾರಂಭವಾಗಿದ್ದವು. ಭಾರತೀಯ ಸಂಸ್ಕೃತಿ ಆಧಾರಿತ ಶಿಕ್ಷಣ ಮೂಲೆಗುಂಪಾಗಿತ್ತು. ಬಹುಮಂದಿ ಭಾರತೀಯರಲ್ಲಿ ಇಂಗ್ಲಿಷ್ ಭಾಷೆ, ಅವರ ನಡೆ, ಆಚಾರ, ಸಂಸ್ಕೃತಿ ಹೆಮ್ಮೆಯ ವಿಷಯವಾಗಿತ್ತು. ಅದಕ್ಕೇ ಆದ್ಯತೆ ಕಾಣುತ್ತಿತ್ತು. ನಾನೊಬ್ಬ ಹಿಂದೂ ನಾನೊಬ್ಬ ಭಾರತೀಯ ಎಂದು ಹೇಳಿಕೊಳ್ಳಲು ಅಸಹ್ಯಪಡುತ್ತಿದ್ದರು. ಭಾರತೀಯ ಎಂದು ಹೇಳಿಕೊಳ್ಳಲು

ಕೀಳರಿಮೆಯಿತ್ತು (Infiriorty complex) ತಮ್ಮತನವನ್ನು ಬದಿಗೊತ್ತಿ, ಭಾರತ ತ್ಯಾಗಭೂಮಿ, ಧರ್ಮ ಭೂಮಿ, ಕರ್ಮಭೂಮಿ ಮತ್ತು ಮೋಕ್ಷಭೂಮಿ ಎಂಬುದನ್ನು ಮರೆತು ಕೇವಲ ಭೋಗ ಜೀವನ ನಡೆಸುವ ಪಾಶ್ಚಿಮಾತ್ಯ ಸಂಸ್ಕೃತಿಯ ಶಿಕ್ಷಣ ಪದ್ಧತಿಯನ್ನು ಅನುಕರಣೆ ಪ್ರಾರಂಭವಾಗಿತ್ತು. 1857ರಲ್ಲಿ ಅಂದಿನ ಸರ್ಕಾರ ಕಲ್ಕತ್ತಾ ಮುಂಬೈ ಮತ್ತು ಮಹಾರಾಷ್ಟ್ರಗಳಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿತ್ತು. ಇವೆಲ್ಲವೂ ಇಂಗ್ಲೆಂಡಿನ ವಿಶ್ವವಿದ್ಯಾಲಯಗಳನ್ನೇ ಅನುಸರಿಸುತ್ತಿದ್ದವು. ಇದೆಲ್ಲವನ್ನೂ ಮನಗಂಡ ಮಾಲವೀಯರು, ಭಾರತೀಯ ಸಂಸ್ಕೃತಿಗೆ ತಕ್ಕ ಗೌರವ ದೊರೆಯಬೇಕು, ನಮ್ಮ ಸನಾತನ ಸಂಸ್ಕೃತಿಯನ್ನು ಅಭ್ಯಸಿಸಬೇಕು ತನ್ಮೂಲಕ ಹಿಂದುತ್ವ, ಹಿಂದೂ ಸಂಸ್ಕೃತಿ, ಭಾರತೀಯತೆ, ರಾಷ್ಟ್ರಭಕ್ತಿ ಮೈಗೂಡಿಸಿಕೊಳ್ಳುವಂತೆ ಮಾಡಬೇಕೆಂದು ವಾರಣಾಸಿಯಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂಬ ಹಂಬಲ. ಒಂದು ಸಾಮಾನ್ಯ ಶಾಲೆಯನ್ನು ನಡೆಸುವುದೇ ಕಷ್ಟ. ಅದರಲ್ಲೂ ಒಂದು ವಿಶ್ವವಿದ್ಯಾಲಯ ಸ್ಥಾಪಿಸಿ ನಡೆಸಿಕೊಂಡು ಹೋಗುವುದು ಸುಲಭದ ಕೆಲಸವೇ. ಅದೂ ಒಬ್ಬ ವ್ಯಕ್ತಿಯ ಪ್ರಯತ್ನದಿಂದ. ಆದರೆ ಈ ಜ್ಞಾನಗಂಗೆಯ ಭಕ್ತ ಹೊಸ ಭಗೀರಥ ನಿರ್ಧಾರ ಮಾಡಿಬಿಟ್ಟಿದ್ದರು. ಅಖಿಲ ಭಾರತ ಕಾಂಗ್ರೆಸ್ಸಿನ 21ನೆಯ ಅಧಿವೇಶನ ಕಾಶಿಯಲ್ಲಿ ಸೇರಿತ್ತು. ಗೋಪಾಲಕೃಷ್ಣ ಗೋಖಲೆಯವರು ಅಧ್ಯಕ್ಷ ಸ್ಥಾನ ಅಲಂಕರಿಸಿದ್ದರು. ಈ ಸಮಯವನ್ನು ಸದುಪಯೋಗಪಡಿಸಿಕೊಂಡು ಕಾಂಗ್ರೆಸ್ಸಿನ ಅನೇಕ ನಾಯಕರನ್ನು ಒಟ್ಟುಗೂಡಿಸಿ ಆ ಸಭೆಯಲ್ಲಿ ಕಾಶಿ ವಿಶ್ವವಿದ್ಯಾಲಯದ ಬಗ್ಗೆ ಪ್ರಸ್ತಾಪ ಮಾಡಿದರು. ಎಲ್ಲರೂ ಮನಃಪೂರ್ವಕವಾಗಿ ಸಂತೋಷದಿಂದ ಸ್ವಾಗತಿಸಿದರು. ಇಂದು ತಲೆಯೆತ್ತಿ ನಿಂತಿರುವ ಕಾಶಿ ವಿಶ್ವವಿದ್ಯಾಲಯದ ಜಾಗವನ್ನು ಕಾಶಿಯ ದೊರೆ ಬಳುವಳಿಯಾಗಿ ನೀಡಿದರು. ವಿಶ್ವವಿದ್ಯಾಲಯದ ನಿರ್ಮಾಣದ ವೇದಿಕೆ ಸಿದ್ಧವಾಯಿತು. ಅದರ ಹಿಂದೆಯೇ ಹಣದ ಚಿಂತೆ ಪ್ರಾರಂಭವಾಯಿತು. ಮಾಲವೀಯರು ಹಣ ಸಂಗ್ರಹಣೆಗಾಗಿ ದೇಶ ಸಂಚಾರ ಕೈಗೊಂಡರು. ಭಿಕ್ಷಾ ಜೋಳಿಗೆ ಹಿಡಿದು ಕೈಚಾಚಿ ಬೇಡಲು ಪ್ರಾರಂಭಿಸಿದರು. ಹೋದಲ್ಲೆಲ್ಲ ಅವರ ಜೋಳಿಗೆ ತುಂಬುತ್ತಾ ನಡೆಯಿತು. ಹೀಗೆ ಬೇಡುತ್ತಾ ಹೈದರಾಬಾದಿಗೂ ಆಗಮಿಸಿದರು. ಹೈದರಾಬಾದ್ ನಿಜಾಮರನ್ನು ಕಂಡು ಹಣ ಸಹಾಯ ಕೇಳಿದರು. ಹಿಂದೂ ಹೆಸರಿನ ವಿಶ್ವವಿದ್ಯಾಲಯ ನಿರ್ಮಾಣಕ್ಕೆ ಹಣ ಕೊಡಲು ನಿಜಾಮರು ಒಪ್ಪಲಿಲ್ಲ. ಬರಿ ಕೈಯಲ್ಲಿ ಹಿಂದಿರುಗಬೇಕಾಯಿತು. ಹೈದರಾಬಾದಿನ ಒಬ್ಬ ಹಿಂದೂ ಶ್ರೀಮಂತ ನಿಧನ ಹೊಂದಿದ್ದ. ವೈಭವದಿಂದ ಅವನ ಶವದ ಮೆರವಣಿಗೆ ಸಾಗುತ್ತಿತ್ತು. ಅವನ ಭಕ್ತರು ಹೆಣದ ಮೇಲೆ ಹಣವನ್ನು ತೂರುತ್ತಿದ್ದರು. ಇದನ್ನು ಕಂಡ ಮಾಲವೀಯರು ಶವದ ಮೇಲಿಂದ ಬಿದ್ದ ಹಣವನ್ನು ಹೆಕ್ಕಿ ಜೋಳಿಗೆಗೆ ತುಂಬಿಸಿಕೊಳ್ಳುತ್ತಿದ್ದರು. ಜನರಿಗೆ ಪರಮಾಶ್ಚರ್ಯ. ಕೊನೆಗೆ ಜನರೇ ಆರಿಸಿ ಅವರ ಜೋಳಿಗೆಗೆ ಹಾಕಲಾರಂಭಿಸಿದರು.

ಜೋಳಿಗೆ ಭರ್ತಿಯಾಯಿತು. ಕೊನೆಗೆ ನಿಜಾಮರ ಕಿವಿಗೂ ಈ ವಾರ್ತೆ ತಲುಪಿತು. ಅವನಿಗೆ ನಾಚಿಕೆಯಾಯಿತು. ಮಾಳವೀಯರನ್ನು ಕರೆಸಿ ಧಾರಾಳವಾಗಿ ಹಣ ಸಹಾಯ ಮಾಡಿದನು. ಹಣ ಸಂಗ್ರಹಣೆಯ ಅಂಗವಾಗಿ ಒಮ್ಮೆ ಮಾಳವೀಯರು ದರ್ಭಾಂಗದಲ್ಲಿ ಭಾಗವತ ಪ್ರವಚನ ನಡೆಸಿದರು. ಕೊನೆಯ ದಿನ ಮಂಗಳಕ್ಕೆ ಅಲ್ಲಿಯ ಮಹಾರಾಜರು ಆಗಮಿಸಿದ್ದರು. ಅವರ ಪ್ರವಚನ ಕೇಳಿ ಮುಗ್ಧರಾದ ಮಹಾರಾಜರು ಇವರ ವಿಶ್ವವಿದ್ಯಾಲಯ ನಿರ್ಮಾಣಕ್ಕೆ 25 ಲಕ್ಷ ಹಣ ನೀಡಿದರು. ಮಾಳವೀಯರ ಕಣ್ಣು ಆನಂದಭಾಷ್ಪದಿಂದ ತುಂಬಿತು. ಅಷ್ಟಕ್ಕೇ ಸುಮ್ಮನಾಗದ ದರ್ಭಾಂಗ ಮಹಾರಾಜರು ಇವರ ಜೊತೆಯಲ್ಲಿಯೇ ಪ್ರವಾಸ ಮಾಡಿ ಹೇರಳವಾಗಿ ಹಣ ಸಂಗ್ರಹಿಸಿಕೊಟ್ಟರು. ದೇಶದಲ್ಲೆಲ್ಲಾ ಸಂಚರಿಸಿದ ಮಾಳವಿಯರು ಒಟ್ಟು ಒಂದು ಕೋಟಿ 3 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ಭಿಕ್ಷುಕಸಾಮ್ರಟ ಎಂಬ ಬಿರುದು ಪಡೆದರು. 1916ನೇ ಫೆಬ್ರವರಿ 4ರಂದು ಗಂಗಾ ತೀರದಲ್ಲಿ ಕಾಶಿ ವಿಶ್ವವಿದ್ಯಾಲಯಕ್ಕೆ ಶಂಕುಸ್ಥಾಪನೆಯಾಯಿತು. ಕೆಲವೇ ವರ್ಷದಲ್ಲಿ ಕಾಶಿ ವಿಶ್ವವಿದ್ಯಾಲಯ ಪ್ರಾರಂಭವಾಯಿತು. ವೇದಗಳು, ಉಪನಿಷತ್ತು, ಗೀತೆ, ರಾಮಾಯಣ, ಮಹಾಭಾರತ, ಶೃತಿ, ಸ್ಮೃತಿ, ಪುರಾಣ ಇವುಗಳ ಅಧ್ಯಯನ, ಹಿಂದೂ ಸಂಸ್ಕೃತಿ, ಮತ್ತು ಸಂಸ್ಕೃತ ಭಾಷೆಯ ಸಂರಕ್ಷಣೆ ಇವು ಪ್ರಧಾನ ವ್ಯಾಸಂಗದ ಅಂಶಗಳಾದವು. ಕಾಶಿ ವಿಶ್ವವಿದ್ಯಾಲಯ ದೇಶ ವಿದೇಶಗಳಲ್ಲೂ ಪ್ರಸಿದ್ಧವಾಯಿತು.

ರಾಷ್ಟ್ರೀಯತೆಯ ನೈಜ ಉಪಾಸಕರು, ಉಚ್ಚಸ್ತರದ ಪತ್ರಕರ್ತರು, ಸಮಾಜ ಸಂಘಟಕರ, ಶಿಕ್ಷಣವೇತರು, ಸುಧಾರಕರು ಇಂತಹ ಹಲವಾರು ಗುಣಗಳ ಸಮುಚ್ಚಯವಾಗಿದ್ದ ಪಂಡಿತ ಮದನಮೋಹನ ಮಾಲವೀಯರು ವಕೀಲರಾಗಿಯೂ ಪ್ರತಿಷ್ಠೆ ಗಳಿಸಿದ್ದರು. ಒಂದೇ ಮಾತಿನಲ್ಲಿ ಹೇಳುವುದಾದರೆ ಅವರು ಜೀವನಪೂರ್ತಿ ಪೂರ್ಣಾವಧಿ ಸಾಮಾಜಿಕ ಕಾರ್ಯಕರ್ತರಾಗಿದ್ದರು. ನಾನು ಮೃತನಾದಲ್ಲಿ ಕಾಶಿಯಲ್ಲಿ ಅಂತ್ಯಸಂಸ್ಕಾರ ಮಾಡಬೇಡಿ, ಕಾರಣ ನನಗೆ ಮೋಕ್ಷದ ಆಸೆ ಇಲ್ಲ, ಈ ಭರತ ಭೂಮಿಯ ಸೇವೆ ಮಾಡಲು ಮತ್ತೆ ಹುಟ್ಟಿ ಬರಬೇಕು ಎನ್ನುತ್ತಿದ್ದರು. ಎಂತಹ ರಾಷ್ಟ್ರಭಕ್ತಿ ಎಲ್ಲರೂ ಮೋಕ್ಷವನ್ನೇ ಅಪೇಕ್ಷಿಪಡುವ ಈ ಭರತ ಖಂಡದಲ್ಲಿ ನನಗೆ ಮೋಕ್ಷ ಬೇಡ ಮತ್ತೊಮ್ಮೆ ಈ ತಾಯಿಯ ಸೇವೆ ಮಾಡಲು ನಾನು ಹುಟ್ಟಿ ಬರಬೇಕೆಂಬ ಕಲ್ಪನೆ ನಿಜವಾಗಿಯೂ ಸಹ ಎಲ್ಲರಿಗೂ ಒಂದು ಆದರ್ಶವಾಗಿದೆ.

1942ರಲ್ಲಿ ಮಾಲವೀಯರ ಪತ್ನಿ ಕುಂದನದೇವಿಯವರು ಮೃತರಾದರು. 12ನೇ ನವಂಬರ್ 1946ರಲ್ಲಿ ಮಾಲವೀಯರು ಸ್ವರ್ಗಸ್ಥರಾದರು.

**//ಭಾರತ್ ಮಾತಾ ಕೀ ಜೈ//**

# ದೈವ ಮತ್ತು ಪುರುಷ ಪ್ರಯತ್ನ

**ಕೃಪೆ : ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು**

**– ಡಾ. ಕೆ.ಎಲ್. ಶಂಕರನಾರಾಯಣ ಜೋಯ್ಸ್**

ಹಣೆಯ ಬರಹ, ವಿಧಿ, ದೈವ ಎಂಬ ಸ್ಥಾನದಲ್ಲಿ ಬಳಕೆಯಲ್ಲಿರುವ ಇನ್ನೊಂದು ಪದ 'ಗ್ರಹಚಾರ' ಎಂದು. 'ಅಯ್ಯೋ ನನ್ನ ಗ್ರಹಚಾರಕ್ಕೆ ಇಂದು ಟ್ರೈನ್ ಕ್ಯಾನ್ಸೆಲ್ ಆಗಿದೆ' ಎಂದು ನೊಂದು ನುಡಿಯುವುದುಂಟು. 'ಮೇಲಿಂದ ಮೇಲೆ ತೊಂದರೆಗಳೇ ಬರುತ್ತಿವೆ, ಅವನ ಗ್ರಹಚಾರ ಸರಿಯಿಲ್ಲವೆಂದು ಅನ್ನಿಸುತ್ತದೆ' ಎಂದು ಪರಸ್ಪರರು ಒಬ್ಬನ ವಿಷಯದಲ್ಲಿ ಮಾತನಾಡುವುದುಂಟು. ಯಾವುದಾದರೂ ಅಪಾಯವು ಬರುವಂತೆ ಕಂಡು ಮತ್ತೆ ಮರೆಯಾದರೆ 'ದೊಡ್ಡ ಗ್ರಹಚಾರದಿಂದ ಪಾರಾದೆ' ಎಂದು ತಮ್ಮ ಹಗುರವಾದ ಹೃದಯವನ್ನು ಹೇಳಿಕೊಳ್ಳುವುದುಂಟು. ಒಬ್ಬನ ಜೊತೆಗೂಡಿದ್ದರಿಂದ ಯಾವುದಾದರೂ ತೊಡಕುಗಳು ಕಂಡುಬಂದರೆ 'ಅವನ ಗ್ರಹಚಾರಕ್ಕೆ ನಾನು ಬಲಿಯಾಗಬೇಕೆ?' ಎಂದು ಆಕ್ಷೇಪಿಸುವುದಂಟು. ಗ್ರಹಗಳ ಬಲದಿಂದಲೇ ಎಲ್ಲವೂ ಘಟಿಸುತ್ತಿದೆ. ಆ ಎಲ್ಲ ಬಲವೂ ನೀನೇ ಎಂಬ ಭಾವದಿಂದ ಭಗವಂತನನ್ನು ಭಾವಿಸುವ ದಾಸರು 'ಸಕಲ ಗ್ರಹಬಲ ನೀನೇ ಸರಸಿಜಾಕ್ಷ' ಎಂದು ಕೊಂಡಾಡುತ್ತಾರೆ. ಇಂತಹ ಹಲವು ಮಾತುಗಳು ಗ್ರಹಗತಿಯಿಂದ ಜೀವನದ ಏರಿಳಿತಗಳು ಸಾಗುತ್ತಿವೆಯೆಂದು, ಒಂದೆಡೆ ಸಾರುತ್ತಲಿದ್ದರೆ ಇದಕ್ಕೆ ವಿಪರೀತವಾದ ಮಾತುಗಳೂ ಇಲ್ಲದಿಲ್ಲ. 'ಗ್ರಹಚಾರವೇನ್ರೀ ಮಾಡುತ್ತೆ? ಕಷ್ಟಪಟ್ಟು ಕೆಲಸ ಮಾಡಬೇಕು' ಎಂದು ಒಬ್ಬನ ದಾರಿದ್ರ್ಯವನ್ನು ಕುರಿತು ಹೇಳುವುದುಂಟು. 'ಅದಾವ ಗ್ರಹಚಾರ? ಅವಿವೇಕದಿಂದ ತಂದುಕೊಂಡದ್ದು' ಎಂದು ಅನರ್ಥಕ್ಕೆ ಅವನವನ ಅವಿವೇಕವೇ ಕಾರಣವೆಂದು ಕಥನ ಮಾಡುವುದುಂಟು. 'ಗ್ರಹಚಾರವೇನು ಮಾಡುತ್ತದೆ? ಅವನ ತಲೆಯ ಮೇಲೆ ಅವನೇ ಕಲ್ಲು ಹಾಕಿಕೊಂಡ' ಎಂದು ಗ್ರಹಚಾರವನ್ನು ನಿರಾಕರಿಸಿ ಮಾತನಾಡುವುದುಂಟು. ಹೀಗೆ ವಿಭಿನ್ನವಾದ, ಅಲ್ಲದೇ ಪರಸ್ಪರ ವಿರುದ್ಧವಾದ ಆಶಯಗಳಿಗೆ ಎಡೆ ನೀಡಿರುವ 'ಗ್ರಹಚಾರ'ದ ಬಗ್ಗೆ ಜಿಜ್ಞಾಸೆಯುಂಟಾದರೆ ಅಸಹಜವೇನಲ್ಲ. 'ಗ್ರಹಚಾರ' ಎಂಬ ಪದ ಬಳಸುವಾಗ ಜ್ಯೋತಿಶ್ಶಾಸ್ತ್ರವು ನಿರೂಪಿಸುವ ಗ್ರಹಗಳ ಗತಿಸ್ಥಿತಿ ಮೊದಲಾದವುಗಳು ನಮ್ಮ ಬುದ್ಧಿಯಲ್ಲಿ ಉಪಸ್ಥಿತವಾಗುತ್ತವೆ. ಇಲ್ಲಿ ಆ ಜ್ಯೋತಿಷಶಾಸ್ತ್ರದ ಮೌಲಿಕ ಸಿದ್ಧಾಂತಗಳ ಬಗ್ಗೆಯೇ ಸಾಕಷ್ಟು ಆಕ್ಷೇಪಗಳಿವೆ. ಉದಾಹರಣೆಗೆ: 'ಗ್ರಹಗಳು ಭೂಮಿಯನ್ನು ಸುತ್ತುತ್ತಿವೆ. ಭೂಮಿಯೇ ಕೇಂದ್ರವಾಗಿದೆ' ಎಂಬ ಜ್ಯೋತಿಶ್ಶಾಸ್ತ್ರದ ಆಶಯವು ಇಂದು ಪ್ರಯೋಗ–ಸಂಶೋಧನೆಗಳ ಹಿನ್ನೆಲೆಯಲ್ಲಿ ಬೆಳೆದು ಬರುತ್ತಿರುವ ಆಧುನಿಕ ವಿಜ್ಞಾನದ ನಿಲುವಿಗೆ ನೇರ ವಿರೋಧವಾಗಿದೆ. ಹೀಗೆ ಮೂಲತಃ ಅಸತ್ಯವಾದ ಸಂಗತಿಯನ್ನು ಅವಲಂಬಿಸಿ ಮುಂದುವರಿದಿರುವ ಈ ಶಾಸ್ತ್ರವನ್ನು ಪ್ರಮಾಣವಾಗಿ ಪರಿಗಣಿಸುವುದಾದರೂ ಹೇಗೆ? ಅಲ್ಲದೇ ನಕ್ಷತ್ರ, ಗ್ರಹ, ಉಪಗ್ರಹವೆಂಬ ವಿಭಾಗವು ಆಧುನಿಕ ವಿಜ್ಞಾನದ ಸರಣಿಯಲ್ಲಿ ದೃಢಪಟ್ಟ ಸತ್ಯವಾಗಿರುವಾಗ– ಈ ಲೆಕ್ಕಾಚಾರವೇ ಇಲ್ಲದ ಜ್ಯೋತಿಷ ಶಾಸ್ತ್ರದ ನವಗ್ರಹಗಳ ವ್ಯವಸ್ಥೆ ಅಂಗೀಕಾರಕ್ಕೆ ಯೋಗ್ಯವಾಗಬಲ್ಲದೇ? ಆಧುನಿಕ ವಿಜ್ಞಾನದ ದೃಷ್ಟಿಯಿಂದ ಸ್ವಯಂಪ್ರಕಾಶಿಯಾದ ಸೂರ್ಯನು ನಕ್ಷತ್ರ ವರ್ಗಕ್ಕೆ ಸೇರುತ್ತಾನೆ. ಚಂದ್ರನು ಭೂಕೇಂದ್ರದಲ್ಲಿ ಸುತ್ತುವವನಾದ್ದರಿಂದ ಅವನು ಭೂಮಿಯ ಉಪಗ್ರಹ. ಮಂಗಳ ಮೊದಲಾದ ಐದು ಸ್ವತಃ ಪ್ರಕಾಶವನ್ನು ಹೊಂದದೇ ಸೂರ್ಯಪ್ರಕಾಶದಿಂದ ಬೆಳಗುತ್ತಾ ಸೂರ್ಯ–ಕೇಂದ್ರದಲ್ಲಿ ಸುತ್ತುತ್ತಲಿರುವುದರಿಂದ ಗ್ರಹವೆನ್ನಿಸಿಕೊಂಡಿವೆ. ಇದು ಆಧುನಿಕ ಖಗೋಲ ವಿಜ್ಞಾನದ ನಿಲವು. ಆದರೆ ಜ್ಯೋತಿಷ ಶಾಸ್ತ್ರವು ಸೂರ್ಯ, ಚಂದ್ರ, ಮಂಗಳ ಮೊದಲಾಗಿ ಏಳನ್ನೂ ಗ್ರಹವೆಂದು ಕರೆದಿದೆ! ಇದಲ್ಲದೇ ರಾಹು ಕೇತುಗಳೆಂಬ ಇನ್ನೆರಡು ಗ್ರಹಗಳಂತೂ ಕಲ್ಪನೆಯ ಕೂಸೇ ವಿನಃ ಅವುಗಳಿಗೆ ಬಾಹ್ಯವಾದ ಅಸ್ತಿತ್ವವಿಲ್ಲ. ಹೀಗೆ ಕಲ್ಪನೆಗಳ ಮೇಲೆ ಬೀಡು ಬಿಟ್ಟಿರುವ ಶಾಸ್ತ್ರವು ಪ್ರಾಮಾಣಿಕಾಗುವುದಾದರೂ ಹೇಗೆ? ಗ್ರಹಗಳ ಗತಿಯು ಎಲ್ಲವನ್ನೂ ನಿರ್ಣಯಿಸುತ್ತದೆಯೆಂಬ ಸಿದ್ಧಾಂತವಂತೂ ತೀರ ಬುದ್ಧಿಗೆ ನಿಲುಕದ ವಿಷಯವಾಗಿದೆ. ಕ್ರಿಯೆ ಪ್ರತಿಕ್ರಿಯೆಗಳ ಪರಂಪರೆಯಾಗಿ ಲೋಕದ ವ್ಯವಹಾರವು ಸಾಗುತ್ತಿರುವಾಗ ಗ್ರಹದ ಪಾತ್ರವಾದರೂ ಏನು? ಯಾವುದೇ ಒಂದು ಘಟನೆಯನ್ನು ವಿಶ್ಲೇಷಿಸಿದರೂ ಅದರ ಹಿಂದೆ ಒಂದೊಂದು ಕಾರಣವಿದ್ದೇ ಇರುತ್ತದೆ. ಒಂದು ವಾಹನ ಅಪಘಾತವಾಗಿದೆಯೆಂದರೆ ಕಾರಣವನ್ನು ಪರಿಶೀಲಿಸಿ ನೋಡಬಹುದು. ವಾಹನವು ತನ್ನ ವ್ಯವಸ್ಥೆಯನ್ನು ಕಳೆದುಕೊಂಡಾಗ ಅಪಘಾತವಾಗಬಹುದು. ವಾಹನ ಚಾಲಕನು ಮದ್ಯದ ಮದಕ್ಕೆ ಒಳಗಾಗಿರಬಹುದು. ಅತಿವೇಗವಾಗಿ ವಾಹನವನ್ನು ನಡೆಸುತ್ತಿರಬಹುದು. ಅನ್ಯಾಸಕ್ತನಾಗಿಯೋ ನಿದ್ರಾಪರವಶನಾಗಿಯೋ ಇರಬಹುದು. ಇಂದ್ರಿಯದೋಷಗಳಿಂದಲೋ ಮನೋದೋಷಗಳಿಂದಲೋ ಕೂಡಿರಬಹುದು. ದುರುದ್ದೇಶವುಳ್ಳವನಾಗಿರಬಹುದು. ಧೂಳು, ಹೊಗೆ, ಮೊದಲಾದವುಗಳಿಂದ ರಸ್ತೆ ಕಾಣದಿರಬಹುದು. ರಸ್ತೆಯಲ್ಲಿ ಭ್ರಮೆಗೆ ಕಾರಣವಾದ ವಿಷಯವಿರಬಹುದು. ಇದೇ ರೀತಿ ಅಪಘಾತಕ್ಕೆ ಒಳಗಾಗುವವನೂ ಸಹ ವೇಗ, ಮತ್ತತೆ, ಅಸಾವಧಾನತೆ, ಇಂದ್ರಿಯದೋಷ ಮೊದಲಾದ ಕಾರಣಗಳಿಂದ ಕೂಡಿದ್ದಾಗ ಅಪಘಾತವಾಗಬಹುದು. ಹೀಗೆ ಒಂದು ಅಪಘಾತವೆಂದಾಗ ಅಲ್ಲೊಂದು ಸ್ಪಷ್ಟವಾದ ಕಾರಣವು ಕಂಡುಬರುತ್ತಿರುವಾಗ ಇದಲ್ಲದೇ ಗ್ರಹಚಾರವೆಂಬ ಮಾತಿಗೆ ಅರ್ಥವಾದರೂ ಏನು? ಇದೇ ರೀತಿಯಾಗಿ ಒಂದು ರೋಗ ಗೋಚರಿಸಿದರೆ ಅದರ ಹಿಂದೆ ಕಾರಣವೊಂದು ಇದ್ದೇ ಇರುತ್ತದೆ. ಒಬ್ಬನಲ್ಲಿ ತಪ್ಪು ಆಹಾರವ್ಯವಹಾರಗಳಿದ್ದು ರೋಗ ಉಂಟಾಗಿರಬಹುದು. ಪ್ರಕೃತಿಮಾಲಿನ್ಯದಿಂದ ರೋಗವು ಬರಬಹುದು. ಆನುವಂಶ್ಯವಾದ ಕಾರಣಗಳಿಂದ ರೋಗ ಬರಬಹುದು. ರೋಗದ ಕಾರಣವು ಒಮ್ಮೆ, ನಮ್ಮ ಬುದ್ಧಿಗೆ ನಿಲುಕದಿರಬಹುದು. ಆದರೆ ಅದಿದ್ದೇ ಇರಬೇಕೆಂಬುದು ಪ್ರಕೃತಿ ನಿಯಮ. ಹೀಗಿರುವಾಗ ಗ್ರಹಚಾರಕ್ಕೆ ಏನು ಸ್ಥಾನ? ಗ್ರಹಗಳ ಪ್ರಭಾವದಿಂದ ಎಲ್ಲ ಘಟನೆಗಳೂ ನಡೆಯುವುದಾದರೆ ಒಂದು ಕಾಲ–ದೇಶಗಳಿಗೆ ಒಳಪಟ್ಟಿರುವವರಿಗೆಲ್ಲ ಒಂದೇ ರೀತಿಯಾದ ಘಟನೆಗಳು ಸಂಪನ್ನಗೊಳ್ಳಬೇಕು. ಆದರೆ ಒಂದೇ ಕಾಲ ದೇಶದಲ್ಲಿರುವವರಲ್ಲಿ ಒಂದೊಂದು ವಿಧವಾದ ಘಟನೆಗಳು ದೃಷ್ಟಿ ಗೋಚರವಾಗುತ್ತವೆ. ಅವುಗಳಲ್ಲಿ ಯಾವುದೇ ಏಕರೂಪತೆ ಕಂಡು ಬರುವುದಿಲ್ಲ. ಹುಟ್ಟಿನ ಕ್ಷಣದ ಮೇಲೆ ಬರೆದ ಜಾತಕವು ಆಗುಹೋಗುಗಳನ್ನು ಗ್ರಹದ ಪ್ರಭಾವವಾಗಿ ತಿಳಿಸುತ್ತದೆ ಎಂಬ ಮಾತಂತೂ ತೀರ ನಂಬಲಸಾಧ್ಯವಾದ ವಿಷಯ. ಒಂದು ನಿರ್ದಿಷ್ಟ

ಕ್ಷಣದಲ್ಲಿ ಒಬ್ಬ ರಾಜಕುಮಾರ ಹಾಗೂ ಒಂದು ಕತ್ತೆ ಹುಟ್ಟಬಹುದು. ಅವುಗಳಿಗೆ ಜಾತಕವೊಂದನ್ನು ತಯಾರಿಸಿದರೆ– ಎರಡು ಜಾತಕವೂ ಒಂದೇ ಸ್ವರೂಪದ್ದಾಗಿರುತ್ತದೆ. ಹೀಗಿರುವಾಗ ಆ ಜಾತಕವು ಕತ್ತೆಯ ಹಾಗೂ ರಾಜಕುಮಾರನ ಜೀವನದ ಆಗುಹೋಗುಗಳನ್ನು ತಿಳಿಸುವುದಾರೂ ಹೇಗೆ? ರಾಜಕುಮಾರನ ಜೀವನವೆಲ್ಲಿ? ಕತ್ತೆಯ ಜೀವನವೆಲ್ಲಿ? ಅಷ್ಟೇಕೆ, ಅವಳಿ–ಜವಳಿ ಮಕ್ಕಳಾಗುವುದುಂಟು. ಅವುಗಳ ಹುಟ್ಟು ಬಹಳಷ್ಟುಮಟ್ಟಿಗೆ ಏಕದೇಶ ಏಕಕಾಲದಲ್ಲಿ ಸಂಭವಿಸಿರುತ್ತದೆ. ಈ ಮಕ್ಕಳ ಬಗ್ಗೆ ರಚಿತವಾದ ಜಾತಕವೂ ಒಂದೇ ಗ್ರಹಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ಆದರೆ ಅವರಿಬ್ಬರ ಜೀವನದ ಘಟನಾವಳಿಗಳೆಲ್ಲವೂ ಭಿನ್ನಭಿನ್ನವಾಗಿರುತ್ತದೆ. ಒಂದು ಗಂಡು, ಒಂದು ಹೆಣ್ಣು. ಒಂದು ಆರೋಗ್ಯವಾದಂತಹ ಶಿಶು. ಮತ್ತೊಂದು ಇಂದ್ರಿಯವಿಕಲವಾದ ಶಿಶು. ಹೀಗೆ ಹುಟ್ಟಿನ ಕ್ಷಣದಲ್ಲೇ ಪ್ರತ್ಯಕ್ಷವಾಗಿಯೇ ಅನೇಕ ವ್ಯತ್ಯಾಸಗಳು ಗೋಚರವಾಗುತ್ತದೆ. ಆ ಎರಡು ಶಿಶುಗಳ ಜೀವನವನ್ನು ಪರಿಶೀಲಿಸಿದರಂತೂ ವಿಭಿನ್ನವಾದ ಕಾಲದೇಶಗಳಲ್ಲಿ ವಿಭಿನ್ನಸ್ವರೂಪದ ಘಟನೆಗಳೇ ಮನವರಿಕೆಯಾಗುತ್ತವೆ. ಹೀಗಿರುವಾಗ ಒಂದೇ ಜಾತಕವು ಎರಡು ವಿಭಿನ್ನವಾದ ಜೀವನಪರಿಯನ್ನು ತೋರಿಸುವುದರಲ್ಲಿ ಸಾಧನವಾಗುವುದಾದರೂ ಹೇಗೆ? ಹುಟ್ಟಿನ ಕ್ಷಣದ ಮೇಲೆ ರೂಪಿತವಾಗುವ ಜಾತಕವು ಗ್ರಹಸ್ಥಿತಿಗತಿಗಳ ಮೇಲೆ ಎಲ್ಲವನ್ನೂ ನಿರೂಪಿಸುತ್ತದೆಯಾದರೆ ಆ ಹುಟ್ಟಿನ ಕ್ಷಣವನ್ನೇ ನಮ್ಮ ಇಚ್ಚೆಯಂತೆ ರೂಪಿಸಿಕೊಳ್ಳಲು ಇಂದು ಅವಕಾಶವಿದೆ. ಇಂದು ಶಸ್ತ್ರಚಿಕಿತ್ಸೆಯ ವಿಜ್ಞಾನ ಕರಗತವಾಗಿರುವುದರಿಂದ, ಯಾವುದೇ ತಿಥಿ, ವಾರ, ನಕ್ಷತ್ರ–ಲಗ್ನ ಮೊದಲಾದ ಕಾಲದಲ್ಲಿ ನಮ್ಮ ಇಷ್ಟದಂತೆ ಮಗುವಿಗೆ ಜನನ ಮಾಡಿಸಬಹುದು. ಇತ್ತೀಚೆಗೆ ಚೋದ್ಯದ ವಿಷಯವೆಂದರೆ ಪ್ರಸೂತಿ ವೈದ್ಯರು ಗರ್ಭಿಣಿಯ ಪರೀಕ್ಷಾನಂತರ 'ಇಂದು ಸಹಜವಾಗಿ ಪ್ರಸೂತಿಯಾಗದಿದ್ದರೆ, ಕಾಯಲು ಸಾಧ್ಯವಾಗುವುದಿಲ್ಲ. ನಾಳೆ ಎಷ್ಟು ಹೊತ್ತಿಗೆ ಪ್ರಸವ ಮಾಡಿಸಬೇಕು ಎಂದು ನಿರ್ಣಯ ಮಾಡಿ ಹೇಳಿ' ಎಂದು ಕೇಳುವುದುಂಟು. ಆ ಮಾತಿನ ಮೇಲೆ ಒಳ್ಳೆಯ ನಕ್ಷತ್ರ, ಜಾತಕ ಬರುವಂತೆ ಒಂದು ಮುಹೂರ್ತವನ್ನು ಜ್ಯೋತಿಷ್ಕರಿಂದ ಕೇಳಿಪಡೆದು ಅದರಂತೆ ಅದೇ ಸಮಯದಲ್ಲೇ ಶಸ್ತ್ರಚಿಕಿತ್ಸೆಯಿಂದ ಪ್ರಸೂತಿ ಮಾಡಿಸುವುದುಂಟು. ಹೀಗೆ ಹುಟ್ಟಿನ ಕ್ಷಣವನ್ನು ನಿರ್ಣಯಿಸುವುದು ವೈದ್ಯನ ಕೈಯಲ್ಲಿರುವಾಗ ಹುಟ್ಟಿಗೆ ಕಾರಣ ಗ್ರಹಚಾರವೆನ್ನುವುದಕ್ಕಿಂತ ವೈದ್ಯಚಾರ ಎನ್ನುವುದೇ ಹೆಚ್ಚು ಅರ್ಥವತ್ತಾಗುತ್ತದೆಯಷ್ಟೆ. ಹುಟ್ಟಿನ ವಿಷಯದಲ್ಲಿ ಹೇಗೆ ಇಚ್ಚೆಯಂತೆ ಪರಿವರ್ತನೆಗೆ ಅವಕಾಶವಿದೆಯೆಂದು ತೋರುತ್ತದೆಯೋ ಸಾವಿನ ವಿಷಯದಲ್ಲಿಯೂ ಅಂತಹ ಪ್ರಸಂಗವಿದೆಯೆಂಬುದನ್ನು ಕೆಲವಾರು ವಿನೋದದ ಘಟನೆಗಳ ಮೂಲಕ ನಿರೂಪಿಸುವುದುಂಟು. ಒಮ್ಮೆ ಒಬ್ಬ ರಾಜಕುಮಾರನು ಜ್ಯೋತಿಷ್ಕನೊಬ್ಬನಲ್ಲಿ ತನ್ನ ಆಯುಷ್ಯದ ಬಗ್ಗೆ ಪ್ರಶ್ನಿಸಿದನಂತೆ. ಆ ಜ್ಯೋತಿಷ್ಕನು ಗ್ರಹಗತಿಗಳ ಲೆಕ್ಕದ ಮೇಲೆ 'ಆಯುಷ್ಯವು ತಮಗೆ ತುಂಬಾ ಕಡಿಮೆಯಿದೆ. ಅತ್ಯಗತ್ಯವಾಗಿ ಮಾಡಬೇಕಾದ ಕರ್ತವ್ಯಗಳಿದ್ದರೆ ದಯಮಾಡಿ ಮುಗಿಸಿಕೊಳ್ಳುವುದು ಉತ್ತಮ' ಎಂದು ಹಿತೈಷಿಯಾಗಿ ನುಡಿದನಂತೆ. ಯೌವನದ ನವೋತ್ಸಾಹದಲ್ಲಿ ಮತ್ತನಾಗಿದ್ದ ರಾಜಕುಮಾರನಿಗೆ ಇದು ಹಿಡಿಸದ ವಿಷಯವಾಗಿತ್ತು. ತನ್ನ ಭುಜಬಲದ ಪರಾಕ್ರಮಗಳಿಗೆ ಅವನ ಮಾತು ಅವಹೇಳನ ಮಾಡಿದಂತಿತ್ತು. ಅದರ ಪ್ರಭಾವವಾಗಿ ಕುಪಿತನಾಗಿ ರಾಜಕುಮಾರ ಎಲ್ಲ ಮಾತುಕತೆ ಮುಗಿದ ಅನಂತರ 'ಇದುವರೆಗೆ ನನ್ನ ಆಯುಷ್ಯದ ಭವಿಷ್ಯ ಆಲಿಸಿದ್ದಾಗಿದೆ. ನಿಮ್ಮ ಭವಿಷ್ಯವಾಣಿ ಅದೆಷ್ಟು ಸತ್ಯವೆಂಬುದನ್ನು ತಾವೇ ಈಗ ಮನಗಾಣಬಹುದು. ದಯವಿಟ್ಟು ತಮ್ಮ ಆಯುಷ್ಯ ಇನ್ನೆಷ್ಟಿದೆ? ಲೆಕ್ಕಿಸಿ ಹೇಳಬಹುದೇ?' ಎಂದು ಪ್ರಶ್ನಿಸಿದನಂತೆ. ಒಂದು ವೇಳೆ ಆಯುಷ್ಯ ಮುಗಿದಿದೆ ಎಂದು ಹೇಳಿದರೆ ಅವನ ಭವಿಷ್ಯವಾಣಿಯನ್ನು ಸುಳ್ಳಾಗಿಸಿ ಅವನನ್ನು ವಧಿಸದೇ ಕಳುಹಿಸಿಕೊಡುವವನಾಗಿದ್ದಾನೆ. ಒಂದು ವೇಳೆ ಆಯುಷ್ಯವಿನ್ನು ಉಳಿದಿದೆ ಎಂದು ನುಡಿದರೆ ಅದನ್ನು ಸುಳ್ಳಾಗಿಸಲು ಈ ಕೂಡಲೇ ಅದೇ ಸ್ಥಳದಲ್ಲೇ ಅವನ ತಲೆಯನ್ನು ಕತ್ತರಿಸಲು ಕರವಾಲವು ಸಿದ್ಧವಾಗಿದೆ. ಏನೇ ಮಾತನಾಡಿದರೂ ಅದು ಸುಳ್ಳಾಗುವ ಪ್ರಸಂಗ! ಇದೇ ರೀತಿ ಇನ್ನೊಂದು ಪ್ರಸಂಗವನ್ನು ಜ್ಯೋತಿಷದ ವಿಷಯದಲ್ಲಿ ಕುಚೋದ್ಯವಾಗಿ ಹೇಳುವುದುಂಟು. ಒಬ್ಬ ಜ್ಯೋತಿಷಶಾಸ್ತ್ರದ ಬಗ್ಗೆ ಪ್ರತಿಕಕ್ಷಿಯಾಗಿದ್ದ. ತನ್ನ ನಿಲುವಿನ ಸಾಧನೆಗೆ ಅವನೊಂದು ಬುದ್ಧಿವಂತಿಕೆ ಹೂಡಿದ. ಒಂದು ಗಿಳಿಯನ್ನು ಕತ್ತಿನ ಜಾಗದಲ್ಲಿ ಕೈಯಿಂದ ಹಿಡಿದುಕೊಂಡು ಜ್ಯೋತಿಷ್ಕನಲ್ಲಿ ಈ ಗಿಳಿಗೆ ಆಯುಷ್ಯವೆಷ್ಟಿದೆ? ಎಂದು ಪ್ರಶ್ನಿಸಿದನಂತೆ. ಆಯುಷ್ಯವಿನ್ನೂ ಇದೆ ಎಂದು ಭವಿಷ್ಯ ನುಡಿಯುವುದಾದರೆ ಈ ಕೂಡಲೇ ಅದರ ಕತ್ತು ಹಿಸುಕಿ ಕೊಂದು ಬಿಡಲಿದ್ದಾನೆ. ಆಯುಷ್ಯವಿಲ್ಲವೆಂದು ನುಡಿದರೆ ಅದನ್ನು ಉಳಿಸಿ ಪಂಜರದಲ್ಲಿಟ್ಟು ಕಾಪಾಡಲಿದ್ದಾನೆ. ಏನೇ ಭವಿಷ್ಯ ನುಡಿದರೂ ಅದನ್ನು ಸುಳ್ಳು ಮಾಡುವ ಸಾಮರ್ಥ್ಯ ತನಗಿದೆಯೆಂಬುದು ಅವನ ಪ್ರಯೋಗದ ಹಿನ್ನೆಲೆಯಲ್ಲಿರುವ ನಿಲುವು. ಗಂಡು ಹೆಣ್ಣಿನ ಜಾತಕಗಳು ಹೊಂದಾಣಿಕೆಯಾಗುತ್ತವೆಯೇ ಎಂದು ಜ್ಯೋತಿಷ್ಕರನ್ನು ಪರಿಶೀಲನೆಗಾಗಿ ಭೇಟಿಯಾಗುವುದುಂಟು. ಅವರು ಬಹಳ ಚೆನ್ನಾಗಿ ಹೊಂದಾಣಿಕೆಯಾಗುತ್ತದೆ ಎಂದು ಹೇಳಿ ವಿವಾಹಕ್ಕೆ ಬೀಜಾವಾಪ ಮಾಡಿಸುತ್ತಾರೆ. ಆದರೆ ವಿವಾಹವಾದನಂತರ ಕೆಲವೇ ದಿನಗಳಲ್ಲಿ ವೈಮನಸ್ಯ ಆರಂಭವಾಗುತ್ತದೆ. ಎಷ್ಟೋ ಸಂಧಾನಕಾರ್ಯ! ಎಷ್ಟೋ ಹಿತೋಪದೇಶಗಳು! ಕೊನೆಗೂ ಮುಗಿಯದ ಯುದ್ಧಕಾಂಡ ಎಂದು ಪರಿಹಾಸವನ್ನು ಮಾಡುವುದುಂಟು. ಮುಹೂರ್ತ ನೋಡಿ ಕಾರ್ಯ ಮಾಡುವ ಪರಿಯ ಬಗ್ಗೆಯೂ ಪರಿಹಾಸವಿಲ್ಲದಿಲ್ಲ. ಅದಕ್ಕೆ ರಾಮನ ಜೀವನದಂತಹ ಪ್ರಸಿದ್ಧವಾದ ಇತಿಹಾಸದ ಉದಾಹರಣೆಗಳನ್ನು ಉಲ್ಲೇಖಿಸಿ ಸಮರ್ಥಿಸುವುದಿದೆ. ತುಂಬಾ ವಿವೇಕಶೀಲರಾದ ತಂದೆ–ತಾಯಿಗಳು ದಶರಥ ಕೌಸಲ್ಯಾದಿಗಳು. ಶ್ರೀರಾಮನ ಪಟ್ಟಾಭಿಷೇಕಕ್ಕಾಗಿ ದಶರಥನಿಂದ ನಿರ್ಣಯ. ವಸಿಷ್ಠರಂತಹ ಕುಲಗುರುಗಳು. ಪಟ್ಟಾಭಿಷೇಕಕ್ಕೆ ಮುಹೂರ್ತವು ಬಹಳ ಜವಾಬ್ದಾರಿಯೊಡನೆ ನಿರ್ಣಯವಾಗಿದೆ. ಆದರೆ ನಿರ್ಣಯವಾದ ಕೆಲವೇ ದಿನಗಳಲ್ಲಿ ಅತ್ಯಂತ ವಿಪರೀತವಾದ ಘಟನೆ. ರಾಮನಿಗೆ ಪಟ್ಟಾಭಿಷೇಕವು ಸಂಪನ್ನಗೊಳ್ಳಲಿಲ್ಲವೆಂಬುದು ಮಾತ್ರವಲ್ಲ, ರಾಜ್ಯಸೌಖ್ಯವೆಲ್ಲವನ್ನೂ ತ್ಯಜಿಸಿ ಸೀತಾಸಮೇತವಾಗಿ ಕಾಡುಪಾಲಾಗುವ ವಿಪರೀತಪ್ರಸಂಗ! ದಶರಥನಿಗೆ ಪುತ್ರವಿಯೋಗ ಪೂರ್ವಕವಾದ ಪ್ರಾಣವಿಯೋಗ! ರಾಜ್ಯದಲ್ಲೆಲ್ಲಾ ದುಃಖದ ಮಡು! ಇದೇನು ವಸಿಷ್ಠಾದಿಗಳಿಗೂ ಅಂದಿನ ಕಾಲದಲ್ಲಿ ಮುಹೂರ್ತಜ್ಞಾನವಿರಲಿಲ್ಲವೇ? ಉದ್ದೇಶಪೂರ್ವಕವಾಗಿ ಇಂತಹ ಮುಹೂರ್ತವಿಟ್ಟರೇ? ಅನಿವಾರ್ಯವಾಯಿತೇ? ಹೀಗೆ ಪರಿಪರಿಯಾಗಿ ವಿಶ್ಲೇಷಿಸಿ ತಮ್ಮ ತಮ್ಮ ನಿಲುವು–ಧೋರಣೆಗಳನ್ನು ಬಹಿರಂಗಪಡಿಸುವುದಿದೆ. ಹೀಗೆಲ್ಲ ವಿವಾದಗಳಿಗೆ ಎಡೆಯಾಗಿದೆ ಜ್ಯೋತಿಷಶಾಸ್ತ್ರ. ಇಂತಹ ಶಾಸ್ತ್ರದ ಮೇಲೆ ಬೆಳೆದ ವಿಧಿವಾದ ಅದೆಷ್ಟು ಸಂಗತ ಎಂದು ಪ್ರಶ್ನೆ ಸಹಜವಾಗಿದೆ. ಈ ಬಗ್ಗೆ ಅನುಸಂಧಾನ ಮಾಡಬೇಕಾದ ವಿಷಯಗಳನ್ನು ಮುಂದಿನ ಲೇಖನದಲ್ಲಿ ನೋಡೋಣ.

**(ಮುಂದುವರೆಯುವುದು)**

# ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯರು

**– ಕೈವಾರ ಕೃಷ್ಣಮೂರ್ತಿ**




ಪ್ರಪಂಚದಲ್ಲಿ ಭಾರತದೇಶ **"ವೇದಭೂಮಿ"** ಎಂದು ಹೆಸರು ಪಡೆದುಕೊಂಡಿದೆ. ಇಂದು ನಮ್ಮ ಹಿಂದೂ ಸಂಸ್ಕೃತಿ ವೇದಗಳು ಎಲ್ಲವನ್ನು ವಿದೇಶಗಳಲ್ಲಿ ಕಲಿಯುತ್ತಿರುತ್ತಾರೆ ಆದರೆ ನಾವು ಭಾರತೀಯರು ವಿದೇಶಿ ಸಂಸ್ಕೃತಿಯನ್ನು ಅನುಸರಿಸುತ್ತಿದ್ದೇವೆ. ಮೊದಲು ನಮ್ಮ ಸಂಸ್ಕೃತಿ ಸಂಸ್ಕಾರ ಜೀವನಶೈಲಿಗಳನ್ನು ಗೌರವಿಸಬೇಕು ಮತ್ತು ಪಾಲಿಸಬೇಕು.

ಕಲ್ಪಾರಂಭದಲ್ಲಿ ಮಹಾವಿಷ್ಣುವು ದೈತ್ಯನ ವಧೆ ಮಾಡಿ ಆತನು ಅಪಹರಿಸಿದ್ದ ವೇದವನ್ನು ಬ್ರಹ್ಮದೇವನಿಗೆ ಮರಳಿ ತಂದುಕೊಟ್ಟಿದ್ದನು. ಬ್ರಹ್ಮದೇವನು ಅದನ್ನು ಎರಡು ಭಾಗಗಳಾಗಿ ವಿಂಗಡಿಸಿ ಒಂದು ಭಾಗವನ್ನು ಸೂರ್ಯನಿಗೆ, ಇನ್ನೊಂದು ಭಾಗವನ್ನು ತನ್ನ ವಸಿಷ್ಠ ಪ್ರಭೃತಿ ಪುತ್ರರಿಗೆ ಕೊಟ್ಟನು. ದ್ವಾಪರ ಯುಗದ ಅಂತ್ಯ ಮತ್ತು ಕಲಿಯುಗ ಪ್ರಾರಂಭದಲ್ಲಿ ಮಹರ್ಷಿ ವೇದವ್ಯಾಸರು ಕಲಿಯುಗದಲ್ಲಿ ಮನುಷ್ಯನ ಆಯಸ್ಸು ಕಡಿಮೆ, ಮಂದಮತಿಗಳು ಮತ್ತು ಅಲ್ಪಸಮರ್ಥರು ಆಗುವರೆಂಬುದನ್ನು ಅರಿತು ವೇದರಾಶಿಯನ್ನು ಪುನಃ ನಾಲ್ಕು ಭಾಗಗಳಾಗಿ ವಿಂಗಡಿಸಿ ಕ್ರಮವಾಗಿ ಪೈಲಿನಿಗೆ–ಋಗ್ವೇದ, ವೈಶಂಪಾಯನಿಗೆ–ಯಜುರ್ವೇದ, ಜೈಮುನಿಗೆ–ಸಾಮವೇದ ಮತ್ತು ಸುಮಂತನಿಗೆ–ಅಥರ್ವವೇದವನ್ನು ಹಂಚಿದರು.

**ಋಗ್ವೇದ** : ದೇವತೆಗಳನ್ನು ಬಹುವಿಧವಾಗಿ ಸ್ತುತಿಸುವ ವೈದಿಕ ಮಂತ್ರಗಳು.

**ಯಜುರ್ವೇದ** : ದೇವತೆಗಳನ್ನು ಅರ್ಚಿಸುವ ವಿಧಿ, ಯಜ್ಞವಿಧಿ, ಹೇಳಿಕೊಡುತ್ತದೆ.

**ಸಾಮವೇದ** : ದೇವತೆಗಳನ್ನು ಪ್ರೀತಿಯಿಂದ ಲಯ, ತಾಳ, ಸುಸ್ವರಗಳಿಂದ ಗಾನ ಮಾಡುವುದು ಹೇಳುತ್ತದೆ.

**ಅಥರ್ವವೇದ** : ದೇವತೆಗಳ ಸ್ತೋತ್ರಗಳು ಸಿದ್ಧಿಗಾಗಿ ವಿಧಾನಗಳನ್ನು ಬೋಧೀಸುವುದು.

ನಂತರದ ಕಾಲದಲ್ಲಿ ಶ್ರೀ ಯಾಜ್ಞವಲ್ಕ್ಯರ ಅವತಾರವಾಯಿತು. ತಮ್ಮ ಸೋದರಮಾವನಾದ ವೈಶಂಪಾಯನರ ಹತ್ತಿರ ಯಜುರ್ವೇದವನ್ನು ಕಲಿತ. ಆ ಸಂಧರ್ಭದಲ್ಲಿ ಕಾರಣಾಂತರದಿಂದ ಯಾವುದೋ ಒಂದು ವಿಷಯದ ಬಗ್ಗೆ ಮಾತಾಗಿ ವೈಶಂಪಾಯನರು ನಾನು ಕಲಿಸಿದ ಯಜುರ್ವೇದವನ್ನು ವಾಪಸ್ಸು ಕೊಟ್ಟುಬಿಡು ಎಂದು ಹೇಳಿದರು. ಆಗ ಯಾಜ್ಞವಲ್ಕ್ಯರು ತಾವು ಕಲಿತ ಯಜುರ್ವೇದವನ್ನು ವಮನದ ಮೂಲಕ ವಾಪಸ್ಸು ಕೊಟ್ಟುಬಿಟ್ಟರು– ಅಲ್ಲಿದ್ದ ವೈಶಂಪಾಯನರು ಶಿಷ್ಯರನ್ನು ಕುರಿತು ಯಾಜ್ಞವಲ್ಕ್ಯರು ವಮನದ ಮೂಲಕ ಕೊಟ್ಟಂತಹ ಯಜುರ್ವೇದವು ಬೆಂಕಿಯ ಉಂಡೆಗಳ ರೂಪದಲ್ಲಿ ಮಾಡಿದ ವಮನವನ್ನು ಸ್ವೀಕರಿಸಲು ಹೇಳಿದಾಗ ಆ ಶಿಷ್ಯರು ಬೆಂಕಿಯನ್ನು ನುಂಗುವ ತಿತ್ತಿರಿ ಪಕ್ಷಿಗಳ ರೂಪವನ್ನು ಧರಿಸಿ ಅದನ್ನು ಸ್ವೀಕರಿಸಿದರು. ಅಲ್ಲಿಂದ ತೈತ್ತಿರೀಯ ಶಾಖೆಯೆಂದು ಹೆಸರು ಪಡೆಯಿತು– ಈಗ ಕೃಷ್ಣ ಯಜುರ್ವೇದದಲ್ಲಿರುವ ತೈತ್ತರೀಯ ಶಾಖೆ, ಒಂದು ರೀತಿಯಲ್ಲಿ ತೈತ್ತರೀಯ ಶಾಖೆಯ ದ್ರಷ್ಠಾರರು ಯಾಜ್ಞವಲ್ಕ್ಯರಾದರು.

ಯಾಜ್ಞವಲ್ಕ್ಯರು ವಮನ ಮಾಡಿದ ಮೇಲೆ ಜಾಹ್ನವಿ ನದಿಗೆ ಹೋಗಿ ಪವಿತ್ರ ಜಲದಲ್ಲಿ ಮಿಂದು ಮಹಾವಿಷ್ಣುವನ್ನು ಕುರಿತು ಧ್ಯಾನ ಮಾಡಿ ಗಾಯಿತ್ರಿ ಮಂತ್ರಾನುಷ್ಠಾನ ಮಾಡಲು ದ್ಯುಕ್ತರಾದರು. ಆಗ ಗಾಯಿತ್ರಿ ಮಾತೆಯು ದರ್ಶನವಿತ್ತಾಗ ಯಾಜ್ಞವಲ್ಕ್ಯರು ಪ್ರಾರ್ಥಿಸಿದರು. ಓಂ ಭಗವತಿ ವಿಶ್ವಕುಟುಂಬಿನೀ ನಾನು ನಾಲ್ಕು ವೇದಗಳ ಪ್ರಾಜ್ಞನಾಗಬಯಸುತ್ತೇನೆ. ಇಂದಿನವರೆಗೂ ವೈಶಂಪಾಯನಾದಿ ಇತರ ಯಾರಿಗೂ ಅರಿಯದ ಸರ್ವತೋ ಸಂಪನ್ನ ಯಜುರ್ವೇದ ಅನಾದಿ ಗುರುವಿನ ಮೂಲಕ ಉಪದೇಶವಾಗುವಂತೆ ಮಾಡು ಗಾಯಿತ್ರಿಮಾತೆಯು ಯಾಜ್ಞವಲ್ಕ್ಯರಿಗೆ ಹೇಳಿದಳು–ಹೇ ಯಾಜ್ಞವಲ್ಕ್ಯನೇ ನಿನ್ನ ತಾಯಿಯ ಗರ್ಭದಲ್ಲಿರುವಾಗಲೇ ನಿನಗೆ ಮಹಾಗುರುವಾದ ಶ್ರೀಮನ್ನಾರಾಯಣನಿಂದ ಉಪದೇಶವಾಗಿದೆ. ವೇದವ್ಯಾಸಾದಿಗಳಿಂದ ಅಂತಃಪ್ರೇರಣಾಶಕ್ತಿ ಬಲವಾಗಿದೆ. ನೀನು ಎಲ್ಲಾ ಶಕ್ತಿಗಳನ್ನು ಸಂಪಾದಿಸಲು ಪಾತ್ರನಾಗಿರುವೆ– ಮಿಮಿಥಕಾ ಎಂಬ ಪ್ರಳಯಕಾಲದಲ್ಲಿ ಸೋಮಕ ಎಂಬ ರಾಕ್ಷಸನು ವೇದಗಳನ್ನು ಕದ್ದಿರುವನು, ಮಹಾವಿಷ್ಣುವು ಅವನನ್ನು ಸಂಹಾರ ಮಾಡಿ ಮರಳಿಪಡೆದನು. ವೇದವ್ಯಾಸರು ಅವುಗಳ ವಿಭಜನೆಯ ಪೂರ್ವದಲ್ಲಿ ಮಹತ್ವವಾದ ಯಜುರ್ವೇದವನ್ನು ಸೂರ್ಯನಾರಾಯಣನಲ್ಲಿರಿಸಿದನು. ಸೂರ್ಯನಾರಾಯಣನನ್ನು ಕುರಿತು ಅನುಷ್ಠಾನ ಮಾಡು ಎಂದು ಹೇಳಿ ಅದೃಶ್ಯಳಾದಳು– ಗಾಯಿತ್ರಿಮಾತೆಯು ಸ್ತೋತ್ರ ಬಲದಿಂದ ಯೋಗ್ಯ ಗುರುಗಳನ್ನು ದೊರಕಿಸಿಕೊಳ್ಳುವಲ್ಲಿ ಸಮರ್ಥರಾದರು. ಅದಕ್ಕಾಗಿ ಯಾಜ್ಞವಲ್ಕ್ಯರು ಹಟಕೇಶ್ವರ ಎಂಬ ಪಟ್ಟಣಕ್ಕೆ ಹೋಗಿ, ವಿಶ್ವಾಮಿತ್ರ ಹರದಾ ಎಂಬ

ಸರೋವರದಲ್ಲಿ ಮಿಂದು ಸೂರ್ಯನಾರಾಯಣನನ್ನು ಕುರಿತು ಅನುಷ್ಠಾನ ಮಾಡಿದರು. "ಓಂ ನಮೋ ಭಗವತೇ ಆದಿತ್ಯಾಯ" ಎಂಬ ಮಂತ್ರದಿಂದ ಸೂರ್ಯನಾರಾಯಣನನ್ನು ಪ್ರಾರ್ಥಿಸಿದರು. ಮೂರು ಲೋಕಗಳಿಗೂ ಪ್ರಕಾಶವನ್ನೀಯುವವನು ಆದಿಭೌತಿಕ– ಆದಿದೈವಿಕ– ಆಧ್ಯಾತ್ಮಿಕ ಜ್ಞಾನಕ್ಕೆ ಮೂಲಪುರುಷನಾದವನು, ವೇದತ್ರಯಗಳಲ್ಲಿ ವಿದ್ಯಮಾನನಾದವನು ಸಕಲ ಜೀವರಾಶಿಗಳಿಗೂ ಚೈತನ್ಯದಾತಾರನೂ ಆದ ಸೂರ್ಯನಾರಾಯಣನನ್ನು ಕುರಿತ ಕಠೋರ ಅನುಷ್ಠಾನಗೈದರು. ಯಾಜ್ಞವಲ್ಕ್ಯರ ಅಮೂಲ್ಯ ಸಾಧನ ಫಲವಾಗಿ ಸೂರ್ಯದೇವನು ದರ್ಶನವಿತ್ತನು. (ಮಹಾಭಾರತ–ಸಂಧಿಪರ್ವ–ಅಧ್ಯಾಯ323–ಶ್ಲೋಕ 2 ರಿಂದ 16).

ಪ್ರಥಮ ಪ್ರಧಾನವೇದವೆನಿಸಿದ ಶುಕ್ಲಯಜುರ್ವೇದವನ್ನು ತೇಜೋರೂಪದಲ್ಲಿ ಸರಸ್ವತಿದೇವಿಯೊಂದಿಗೆ ನಿನ್ನಾಮುಖದಲ್ಲಿರುಸುವೆ. ಆಗ ನೀನು ಸರ್ವತೋಮುಖಪರಿ ಸಮರ್ಥನಾಗುವೆ. ಅಲ್ಲಿ ಕೊಳದಲ್ಲಿ ಮಿಂದು ಬಾ, ಬಳಿಕ ಸೂರ್ಯನಾರಾಯಣನು ಆಗಲೇ ಆ ಕೊಳದಲ್ಲಿಯೇ ಸಾರ–ಬೀಜಾಕ್ಷರಗಳನ್ನು ಬಿತ್ತಿದ್ದನು ಅದರಿಂದ ದಿವ್ಯಜ್ಞಾನ ಪ್ರಾರಂಭವಾಯಿತು. ಸೂರ್ಯನ ತೇಜದಂತೆ, ತೇಜವನ್ನು ವೇಗದಂತೆ ವೇಗವನ್ನು ಪಡೆದವನಾಗಿರೆಂದು ಸೂರ್ಯನು ಅನುಗ್ರಹಿಸಿದನು. ಸೂರ್ಯನಾರಾಯಣನು ಯಾಜ್ಞವಲ್ಕ್ಯರ ನಿಷ್ಠೆಯನ್ನು ಪರೀಕ್ಷಿಸಿ, ಆ ಕುದುರೆಗಳನ್ನು ಆತನ ರಥಕ್ಕೆ ಸಂಯೋಜಿಸಿ ತನ್ನೊಟ್ಟಿಗೆ ಆಕಾಶದಲ್ಲಿ ಸಂಚರಿಸಲು ಸಂಚರಿಸುವಾಗ ಸೂರ್ಯಮಾಲೆಯಲ್ಲಿ ಸೂರ್ಯದ್ವಯರಾಗಿ ಕಂಡರು. ಆ ಸನ್ನಿವೇಶದಲ್ಲಿ ಶುಕ್ಲಯಜುರ್ವೇದವನ್ನು ಉಪದೇಶಿಸಿದರು. ಆ ಸೂರ್ಯಭಗವಾನನಿಂದ ಪಡೆದ ಆಯತಯಾಮ ವೇದವನ್ನು ಚಾಚೂ ತಪ್ಪದಂತೆ ಯಾಜ್ಞವಲ್ಕ್ಯರು ಕೂಡಲೇ ಅಭ್ಯಸಿಸಿದರು. ಯಾರಿಗೂ ಗೊತ್ತಿರದ ಮತ್ತು ಗೌಪ್ಯ ವಿಷಯವುಳ್ಳ ಅನೇಕ ಇತರ ವೇದಗಳನ್ನು ಉಪದೇಶಿಸಿದರು. ಈ ಪ್ರಕಾರ 4 ವೇದಗಳನ್ನು, 6ಶಾಸ್ತ್ರಗಳನ್ನೂ ಯಾಜ್ಞವಲ್ಕ್ಯರು ಉಪದೇಶೀಸಲ್ಪಟ್ಟರು. ನಂತರ ಯಾಜ್ಞವಲ್ಕ್ಯರು ವೈಶಿಷ್ಟ್ಯ ಪೂರ್ಣ ತಪೋಮಯ ಜೀವನ ಪ್ರಭಾವದಿಂದ ಅತುಲ, ಅದ್ವಿತೀಯ ವೇದವೇತ್ತರಾದರು. ಅದಕ್ಕೆ ತಕ್ಕಂತೆ ಬುದ್ಧಿಯಲ್ಲಿ ಸನ್ಯಾಸಭಾವ ಮೂಡಿತು. ಸನ್ಯಾಸಿಯಾಗಲು ಸೂರ್ಯನಾರಾಯಣನು ಸಮ್ಮತಿಸದೇ ಗೃಹಸ್ಥಾಶ್ರಮಿಯಾಗಲು ಆಜ್ಞಾಪಿಸಿದರು. ಸೂರ್ಯಲೋಕದಿಂದ ಭೂಲೋಕಕ್ಕೆ ಆಗಮಿಸಿ ಸಾರ್ಥಕ ಸತ್‌ಗೃಹಸ್ಥರಾಗಿ ವೇದ, ವೇದಾಂತ, ಶಾಸ್ತ್ರ ವಿದ್ಯೆಗಳನ್ನು ಪ್ರಕಾಶ ಮಾಡಿ ಮಾನವ ಕಲ್ಯಾಣ ಸಾಧಿಸಿದರು, ವೈದಿಕ ಜ್ಞಾನಲಾಭ ಯಾಜ್ಞವಲ್ಕ್ಯರಿಂದ ಪಡೆಯುವ ಭೂಲೋಕ ವಾಸಿಯಾದ ಮಾನವ ಪರಮಧನ್ಯ.

ಈ ಮಧ್ಯೆ ಯಾಜ್ಞವಲ್ಕ್ಯರಿಗೆ ಬುಡಿಲರ ಮೊಮ್ಮಗಳು ಕಾತ್ಯಾಯಿನಿಯೊಂದಿಗೆ ವಿವಾಹವು ಜರುಗುತ್ತದೆ. ಎಷ್ಟಾದರೂ ಕಾತ್ಯಾಯಿನಿ ಲೌಕಿಕ ಬಯಕೆಯ ಸ್ತ್ರೀ. ಆದರೆ ಅನುಗಾಲವೂ ಬ್ರಹ್ಮಜ್ಞಾನವನ್ನರಿಸಿ ಹೊರಟ ಯಾಜ್ಞವಲ್ಕ್ಯರಿಗೆ ವೇದಾಂತ ಚರ್ಚೆಗೆ ಅನುಕೂಲೆಯಾಗಿದ್ದವಳು ತಾಯಿ ಆಲಾಪನಿಯವರ ಕಿರಿಯ ಸೋದರನ ಮಗಳು ಮೈತ್ರೇಯಿ, ಆಕೆಗೆ ವಿವಾಹದ ಬಯಕೆಯೇ ಇಲ್ಲ. ತಾನು ಯಾಜ್ಞವಲ್ಕ್ಯನಂತೆ ಬ್ರಹ್ಮ ಸಾಕ್ಷಾತ್ಕಾರದ ಹಾದಿಯಲ್ಲಿ ನಡೆಯಬೇಕೆಂಬುದೇ ಅವಳ ಇಚ್ಛೆ. ಹೀಗಾಗಿ ಆಕೆ ಹಗಲಿರುಳು ಅವನ ನೆರಳಾಗಿ ಇರುತ್ತಾಳೆ. ಲೋಕದ ಕಣ್ಣಿಗೆ ಯಾಜ್ಞವಲ್ಕ್ಯರಿಗೆ ಇಬ್ಬರೂ ಪತ್ನಿಯರೇ, ಕಾತ್ಯಾಯಿನಿ ಧರ್ಮಪತ್ನಿ ಯಾದರೆ ಮೈತ್ರೇಯಿ ಮೋಕ್ಷ ಪತ್ನಿ.

ಮಹರ್ಷಿ ಪತಂಜಲಿಯು ಯಜುರ್ವೇದದಲ್ಲಿ 101 ಶಾಖೆಗಳಿರುವವು ಎಂದು ಘೋಷಿಸಿದರು – ಯಜುರ್ವೇದದಲ್ಲಿ ವಿಸ್ತಾರವಾದ ಎರಡು ವಿಭಾಗಗಳಿರುವವು. 1. ಶುಕ್ಲಯಜುರ್ವೇದ 2. ಕೃಷ್ಣಯಜುರ್ವೇದ, ಯಜುರ್ವೇದ 101 ಶಾಖೆಗಳಲ್ಲಿ 15 ಪೂರ್ವ ಅಥವಾ ಪ್ರಥಮ ಶಾಖಾ ಎಂದು ಕರೆಯಿಸಲ್ಪಟ್ಟು ಭಗವಾನ್ ಸೂರ್ಯನಾರಾಯಣನಿಂದ ರಕ್ಷಿಸಲ್ಪಟ್ಟಿದ್ದವು. ಬ್ರಹ್ಮ, ವಿಷ್ಣು, ಮಹೇಶ್ವರರು ಶುಕ್ಲಯಜುರ್ವೇದದ ಪ್ರಥಮ ಶಾಖಾ ಸಿದ್ಧಾಂತವನ್ನೇ ಅನುಸರಿಸುತ್ತಿದ್ದರು. ಉಳಿದ 86 ಶಾಖೆಗಳು ಕೃಷ್ಣಯಜುರ್ವೇದಕ್ಕೆ ಸಂಭಂಧಿಸಿದ್ದು, ವೇದಗಳನ್ನು ವಿಭಾಗ ಮಾಡುವ ಪೂರ್ವದಲ್ಲಿ ಪ್ರಚಾರಾರ್ಥವಾಗಿ 86 ಶಾಖೆಗಳನ್ನು ವೈಶಂಪಾಯನರ ಮೂಲಕ ಪ್ರಚಾರ ಮಾಡಿಸಿ, ಇನ್ನುಳಿದ 15 ಶಾಖೆಗಳನ್ನು ಪ್ರಚಾರ ಮಾಡಲು, ಮಹಾಯುಗದ ಆರಂಭದಲ್ಲಿ ಯೋಗೀಶ್ವರ ಯಾಜ್ಞವಲ್ಕ್ಯರ ಜನನವನ್ನು ಯೋಜಿಸಿ ನಿಯಮಿಸಿದನು.

## ಶುಕ್ಲಯಜುರ್ವೇದದಲ್ಲಿ 15 ಶಾಖೆಗಳಿವೆ

**1. ಕಾಣ್ವ 2. ಮಾಧ್ಯಂದಿನ 3. ಸಭ್ಯ 4. ಸ್ಥಾಪನೀಯ 5. ಕಸಾರ 6. ಪೌಂಡ್ರವತ್ಸರ 7. ಅವಂತಿಕಾಲ 8. ಪರಮಾವಟಿಕಾ 9. ಪಾರಾಶರ್ಯ 10. ವೈಧೇಯ 11. ವೈನೇಯ 12. ಔಖೇಯ 13. ವೈಯಜೇಯ 14. ಗಾಲವ 15. ಬೈಜವ.**

ಪ್ರಸ್ತುತ ಶುಕ್ಲಯಜುರ್ವೇದದಲ್ಲಿ ಎರಡೇ ಪಾಠಕ್ರಮಗಳು ಪ್ರಬಲವಾಗಿ ಉಪಲಬ್ಧವಾಗಿವೆ. 1. ಕಾಣ್ವಸಂಹಿತೆ 2. ಮಾಧ್ಯಂದಿನ ಸಂಹಿತೆ. ಇವೆರಡನ್ನೂ ವಾಜಸೇನೇಯಿ ಸಂಹಿತೆಯೆಂದು ಕರೆಯುವರು. ಈ ವಾಜಸನೇಯೀ ಶಾಖೆಯ 40ನೇ ಅಧ್ಯಾಯವೇ ಈಶವಾಸ್ಯುಪನಿಷತ್. ನಿಜವಾಗಿಯೂ ಶುಕ್ಲಯಜುರ್ವೇದವು ಭಗವದನುಗ್ರಹ ಸಂಪನ್ನ ಸಂಹಿತೆ, ಶತಪಥ ಬ್ರಾಹ್ಮಣಯುಕ್ತವಾದದ್ದು ಯಾವುದರಲ್ಲಿ ಬೃಹದಾರಣ್ಯಕ ಉಪನಿಷತ್ ಇದ್ದು ಅದರಲ್ಲಿ ಯಾಜ್ಞವಲ್ಕ್ಯರ ಮಹಿಮೆಯು ಸುಂದರವಾಗಿ ಪ್ರತಿಪಾದಿತವಾಗಿದೆ. ಅಮೃತತ್ವ, ಸಂನ್ಯಾಸ, ಮೋಕ್ಷ ಇತ್ಯಾದಿಗಳ ವಿಷಯಗಳನ್ನು ಕುರಿತು ಆಕರ್ಷಕ ವಿವರಣೆ ನೀಡಲಾಗಿದೆ. ಶುಕ್ಲಯಜುರ್ವೇದದ ಶ್ರೌತಸೂತ್ರ–ಕಾತ್ಯಾಯನ ಸೂತ್ರ, ಗೃಹ್ಯಸೂತ್ರ ಯಾಜ್ಞವಲ್ಕ್ಯರು ಶುಕ್ಲಯಜುರ್ವೇದದ ಪ್ರವರ್ತಕರಾದರೂ 4 ವೇದಗಳನ್ನೂ ಕಲಿಸುತ್ತಿದ್ದರು. ವೇದಾಂಗಗಳನ್ನೂ ಭೋಧಿಸುತ್ತಿದ್ದರು. ಬ್ರಹ್ಮಚಿಂತನೆಯ ಕಲೆಯನ್ನು ಉದ್ಬೋಧಿಸುತ್ತಿದ್ದರು, ಸ್ವತಃ ಸದಾಜಪ–ತಪಾನುಷ್ಠಾನಗಳಲ್ಲಿ ನಿರತರಾಗಿರುತ್ತಿದ್ದರು.

ಶುಕ್ಲಯಜುರ್ವೇದಕ್ಕಿಂತಲೂ ಉಳಿದ ಯಾವ ವೇದಗಳೂ ಮೋಕ್ಷ ವಿಷಯದಲ್ಲಿ ಸ್ಪಷ್ಟವಾಗಿ ವಿವರಿಸಿರುವುದಿಲ್ಲ. ಅಷ್ಟೇ ಅಲ್ಲದೇ ಈ ಶುಕ್ಲಯಜುರ್ವೇದವು ಯಾವ ರಾಕ್ಷಸರಿಂದಲೂ ಅಪಹೃತವಾಗಿರುವುದಿಲ್ಲ ಎಂದು ವರಾಹಪುರಾಣ ಕೂಗಿ ಹೇಳುತ್ತದೆ. ಮಿಕ್ಕ ವೇದಗಳು ಸೋಮಕಾಸುರನಿಂದ ಅಪಹರಿಸಲ್ಪಟ್ಟಿದ್ದವು ಎಂದು ಭಾಗವತ ಪ್ರಕಟಿಸುತ್ತದೆ.

# ಭಾರತೀಯ ನ್ಯಾಯಶಾಸ್ತ್ರದ ಅಡಿಗಲ್ಲು, ಮೂಲಾಧಾರವಾದ ಶ್ರೀಯಾಜ್ಞವಲ್ಕ್ಯರ ಶೃತಿ ಮತ್ತು ಸ್ಮೃತಿ

**– ಕೈವಾರ ಕೃಷ್ಣಮೂರ್ತಿ**



ನ್ಯಾಯ ಅಥವಾ ನಾವು ಯಾವುದನ್ನು ಆಧುನಿಕ ಸಂದರ್ಭದಲ್ಲಿ ಕಾನೂನು ಎಂದು ಕರೆಯುತ್ತೇವೆಯೋ ಅವಶ್ಯಕವಾಗಿ ಧರ್ಮಮೂಲವಾಗಿರುವುದರಿಂದ ನ್ಯಾಯಶಾಸ್ತ್ರವನ್ನು ಸ್ವಾಭಾವಿಕವಾಗಿ ಧರ್ಮಶಾಸ್ತ್ರವೆಂದು ಕರೆಯಲಾಗುತ್ತದೆ. **"ಧರ್ಮಶಾಸ್ತ್ರ"** ಎಂದರೆ ಭಾರತೀಯ ಸಂಧರ್ಭದಲ್ಲಿ ಹಿಂದೂ ಧರ್ಮಶಾಸ್ತ್ರವಲ್ಲದೆ ಬೇರೇನು ಅಲ್ಲ. **ಹಿಂದು** ಎಂಬುದು ಒಂದು ಧರ್ಮವಾಗಿರದೆ ಅದೊಂದು ಜೀವನ ವಿಧಾನವೂ ಸನಾತನ ಸಂಸ್ಕೃತಿಯೂ ಆಗಿದೆ. ಹಿಂದೂ ಧರ್ಮಕ್ಕೆ ಅಥವಾ ಸಂಸ್ಕೃತಿಗೆ ಬೆಳವಣಿಗೆ ಉಂಟೆ ಹೊರತು ಹುಟ್ಟು ಎಂಬುವುದಿಲ್ಲ. ಬೇರೆ ಧರ್ಮಗಳಿಗಿರುವಂತೆ ಹಿಂದೂ ಧರ್ಮಕ್ಕೆ ಸಂಸ್ಥಾಪಕರಿಲ್ಲ.

ನ್ಯಾಯವು ಧರ್ಮದ ಒಂದು ಪ್ರಮುಖ ಕಲ್ಪನೆಯಾಗಿರುವಂತೆ ಧರ್ಮದ ಇನ್ನೊಂದು ಸ್ವರೂಪ ಮತ್ತು ಕರ್ತವ್ಯವಾಗಿದೆ ವೇದಗಳಿಂದ ಹಿಡಿದು ಆಧುನಿಕ ನ್ಯಾಯ ನಿರ್ಣಯ ಪದ್ಧತಿಯವರೆಗೆ ಹಲವಾರು ನ್ಯಾಯದಾನ ಪದ್ಧತಿಯ ಘಟ್ಟಗಳನ್ನು ಗುರುತಿಸಲಿಕ್ಕೆ ಸಾಧ್ಯತೆ ಇದೆ ಆದರೆ ಪ್ರಮುಖವಾಗಿ ಕಾನೂನು ಶಾಸ್ತ್ರದ ಸಾಹಿತ್ಯವನ್ನು ಸ್ಥೂಲವಾಗಿ ಎರಡು ವಿಭಾಗಗಳಾಗಿ ಗುರುತಿಸಬಹುದು..

1. **ಕಾನೂನು ಹಾಗೂ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದಂತೆ ತತ್ವಗಳನ್ನು ಒಳಗೊಂಡ ಧಾರ್ಮಿಕ ಗ್ರಂಥಗಳು ಈ ತತ್ವಗಳೇ ಮುಂದೆ ಕಾನೂನುಗಳಾಗಿ ಬೆಳೆದು ಬಂದವು.**
2. **ಸ್ಮೃತಿಗಳು ಧರ್ಮಶಾಸ್ತ್ರಗಳು ಮತ್ತು ವ್ಯಾಖ್ಯಾನಗಳು ನಿರ್ದಿಷ್ಟವಾಗಿ ನಾಗರಿಕ ಮತ್ತು ಅಪರಾಧ ಸಂಹಿತೆಯ ಅಂಶಗಳನ್ನು ಒಳಗೊಂಡವುಗಳಾಗಿವೆ.**

ಯೋಗೀಶ್ವರ ಯಾಜ್ಞವಲ್ಕ್ಯರ ಪ್ರಕಾರ ಶೃತಿ ಮತ್ತು ಸ್ಮೃತಿಗಳೇ ಶಾಸನಗಳ ಮೂಲಾಧಾರವಾಗಿವೆ. ಶೃತಿಗಳೆಂದರೆ ವೇದಗಳೆ ಆಗಿವೆ. ದೈವೀ ಪ್ರೇರಣೆಯಿಂದ ದಾರ್ಶನಿಕರಾದ ಋಷಿ,ಮುನಿ,ಯೋಗಿಗಳಿಗೆ ಲಭ್ಯವಾದ ಜ್ಞಾನ ಸಂಪತ್ತು ಶೃತಿ ಎನಿಸಿಕೊಂಡಿವೆ. ಬರವಣಿಗೆಯ ರೂಪದಲ್ಲಿರದೆ ಸಹಸ್ರಾರು ವರ್ಷಗಳಿಂದ ಪಾಠ ಪ್ರವಚನಗಳ ಮೂಲಕ ಜನಾಂಗದಿಂದ ಜನಾಂಗಕ್ಕೆ ಸಾಗಿ ಬಂದಿವೆ. ಶೃತಿಗಳ ಕರಾರುವಾಕ್ಕೂ ಕಾಲವನ್ನು ಗುರುತಿಸಲು ಸಾಧ್ಯವಾಗಿಲ್ಲ. ಕ್ರಿಸ್ತಪೂರ್ವ ನಾಲ್ಕು ಸಾವಿರದಿಂದ ಸಾವಿರವರೆಗಿನ ಅವಧಿಯನ್ನು ಶೃತಿಯುಗವೆಂದು ಭಾವಿಸಲಾಗಿದೆ.

ವೇದಗಳು, ಶೃತಿಗಳು ಅಪ್ಪಟ ಧಾರ್ಮಿಕ ಗ್ರಂಥಗಳಾಗಿದ್ದರೂ ನ್ಯಾಯ ಪದ್ಧತಿಯ ಕೆಲವು ಮೂಲಭೂತ ಅಂಶಗಳು ಅವುಗಳಲ್ಲಿ ಕಾಣಬಹುದು ವೇದಗಳಲ್ಲಿ ಶಾಸನ ಪ್ರಜ್ಞೆಯನ್ನು ಗುರುತಿಸುವುದು ಕಷ್ಟವಾಗಬಹುದಾದರೂ ಅವುಗಳಲ್ಲಿ ಮನುಷ್ಯ ಜೀವನದ ನಡವಳಿಕೆಯ ಉನ್ನತ ಮೌಲ್ಯಗಳನ್ನು ಸಮೃದ್ಧವಾಗಿ ಕಾಣಬಹುದು.

**ಸತ್ಯಂ ವದ** (ಸತ್ಯವನ್ನೇ ನುಡಿ)

**ಧರ್ಮಂಚರ** (ಧರ್ಮದಲ್ಲಿ ನಡೆ)

**ಮಾತೃದೇವೋಭವ, ಪಿತೃದೇವೋಭವ** (ತಾಯಿ ತಂದೆಯರನ್ನು ದೇವರೆಂದು ತಿಳಿ)

ಇತ್ಯಾದಿ ನಿರ್ದೇಶನಗಳು ಬರಿ ಆಚರಣಾ ಧರ್ಮಕ್ಕೆ ಸಂಬಂಧಿಸಿದಂತೆ ಜಾತಿ, ಮತ, ಪ್ರದೇಶ, ಜನಾಂಗ, ಭಾಷೆ, ಲಿಂಗ ಇತ್ಯಾದಿ ಯಾವುದೇ ಭೇದವಿಲ್ಲದೆ ಎಲ್ಲರು ಪಾಲಿಸಬೇಕಾದ ಮಾನವ ಸಹಜ ಧರ್ಮದ ಉದಾತ್ತ ಧ್ಯೇಯಗಳಾಗಿವೆ. ವೇದ ಉಪನಿಷತ್ತುಗಳಲ್ಲಿ ಹೇರಳವಾಗಿ ಕಾಣಿಸಿಗುವ ಈ ಕಟ್ಟಳೆಗಳು ಭಾರತೀಯ ನ್ಯಾಯ ಪದ್ಧತಿಯ ಆಧಾರ ಸ್ತಂಭಗಳಾಗಿವೆ.

ಧರ್ಮಶಾಸ್ತ್ರಗಳಲ್ಲಿ ಪ್ರಥಮ ಸ್ಥಾನ ದೊರೆಯುವುದು ಧರ್ಮಸೂತ್ರಗಳಿಗೆ, ಧರ್ಮಸೂತ್ರಗಳು ತತ್ವ ಮತ್ತು ಆಚರಣಾ ಕ್ರಮಗಳಿಂದ ಪ್ರತ್ಯೇಕವಾಗಿ ರೂಪಿಸಲ್ಪಟ್ಟವು. ವಿಷಯಗಳನ್ನು ಸಾಧ್ಯವಾದಷ್ಟು ಸಂಗ್ರಹವಾಗಿ, ಸಂಕ್ಷಿಪ್ತವಾಗಿ ಹೇಳುವುದೇ ಸೂತ್ರಗಳ ವೈಶಿಷ್ಟ. ಧರ್ಮಸೂತ್ರಗಳು ಶಾಸ್ತ್ರ ಭೋದಕರಿಗೆ ಒಂದು ರೀತಿಯ ಕೈಪಿಡಿಗಳಿದ್ದಂತೆ ಈ ಸೂತ್ರ ಸಾಹಿತ್ಯದ ಸಹಾಯದಿಂದಲೇ ಧರ್ಮಜ್ಞರು ನ್ಯಾಯ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸಲಾರಂಭಿಸಿದರು. ವಿವಿಧ ಸ್ವರೂಪದ ನ್ಯಾಯಾಲಯಗಳ ಕಲ್ಪನೆ ಮೈದಳದದ್ದು ಧರ್ಮಸೂತ್ರಗಳಲ್ಲಿಯೇ.

ಧರ್ಮ ಸೂತ್ರಗಳ ನಂತರ ಬಂದವು ಸ್ಮೃತಿಗಳು, ನ್ಯಾಯಶಾಸ್ತ್ರ ಬೆಳವಣಿಗೆಯ ಬಹುಮುಖ್ಯ ಆಧಾರಗಳೆಂದರೆ ಸ್ಮೃತಿಗಳೇ ಆಗಿವೆ. ಪ್ರಾಚೀನ ಸ್ಮೃತಿಗಳೇ ಆಧುನಿಕ ನ್ಯಾಯಿಕ ಸಂಹಿತೆಗಳನ್ನು ಹೋಲುತ್ತವೆ.

ವೇದಗಳಲ್ಲಿ ಅಲ್ಲಲ್ಲಿ ಹರಿದು ಹಂಚಿ ಹೋಗಿದ್ದ ನ್ಯಾಯಶಾಸ್ತ್ರದ ಅಂಶಗಳನ್ನು ಧರ್ಮಸೂತ್ರಗಳಲ್ಲಿ ಹೇಳಲಾಗಿರುವ ನ್ಯಾಯಿಕ ತತ್ವಗಳನ್ನು ಸಮಾಜ ಒಪ್ಪಿಕೊಂಡು ಬಂದಿದ್ದ ಆಚರಣೆ, ಸಂಪ್ರದಾಯ, ರೀತಿರಿ ವಾಜು ವಾಡಿಕೆ ಪದ್ಧತಿ ಇತ್ಯಾದಿಗಳನ್ನು ಸಂಗ್ರಹ ರೂಪದಲ್ಲಿ ವಿಷಯ ಅನುಕ್ರಮಣಿಕೆಯಲ್ಲಿ ಕ್ರಮಬದ್ಧವಾಗಿ ಹೇಳುತ್ತವೆ..

**ಸ್ಮೃತಿಗಳು :** ಸ್ಮೃತಿ ಎಂದರೆ ನೆನಪು ಹಲವು ಸ್ಮೃತಿಕಾರರು ದೈವೀ ಪ್ರೇರಣೆಯಿಂದ ಪ್ರಕರ ಜ್ಞಾನಾರ್ಜನೆಯಿಂದ ಸಂಪಾದಿಸಿದ್ದ ಅನೇಕ ತತ್ವಗಳನ್ನು ತಮ್ಮ ಸಾಧಾರಣ ಸ್ಮರಣ ಶಕ್ತಿಯಿಂದ ಸಂಗ್ರಹಿಸಿ ಕೃತಿಗಿಳಿಸಿದರು ಹಿಂದೂ ನ್ಯಾಯಶಾಸ್ತ್ರದ ಬೆಳವಣಿಗೆಯಲ್ಲಿ ಸ್ಮೃತಿಗಳು ಅತ್ಯಂತ ಮಹತ್ವದ ಪಾತ್ರವಹಿಸಿವೆ ಭಾರತೀಯ ನ್ಯಾಯ ಪದ್ಧತಿಗೆ ಭದ್ರಬುನಾದಿ ಹಾಕಿದ ಸ್ಮೃತಿಗಳು ನ್ಯಾಯ ವ್ಯವಹಾರಗಳು ದೃಷ್ಟಿಯಿಂದ ಪ್ರಥಮ ಮೂಲ ಗ್ರಂಥವಾಗಿದೆ.

ಸ್ಮೃತಿ ಶಾಸ್ತ್ರಗಳು ಬರೀ ನ್ಯಾಯಿಕ ತತ್ವಗಳನ್ನು ಮಾತ್ರ ಹೇಳಲಿಲ್ಲ ನ್ಯಾಯದಾನ ಪದ್ಧತಿ ಕುರಿತಾಗಿಯೂ ಅವು ಚಿಂತಿಸಿದೆ. ನ್ಯಾಯ ವ್ಯವಸ್ಥೆಯ ರೂಪರೇಷೆ, ನ್ಯಾಯಾಲಯಗಳ ವರ್ಗೀಕರಣ, ನ್ಯಾಯಾಧೀಶರ ನೇಮಕ ಅವರಿಗೆ ಇರಬೇಕಾದ ಅರ್ಹತೆಗಳು, ಕಾನೂನು ಜಾರಿಯ ವಿಧಾನಗಳು ಇತ್ಯಾದಿಗಳನ್ನು ಸ್ಮೃತಿಗಳು ಒಳಗೊಂಡಿವೆ. ವ್ಯವಸ್ಥಿತವಾಗಿ ಕ್ರಮಬದ್ಧವಾಗಿ ಬೆಳೆದು ಬಂದ ಭಾರತದ ಪ್ರಾಚೀನ ನ್ಯಾಯ ಪದ್ಧತಿಯನ್ನು ಸ್ಮೃತಿಗಳು ತಿಳಿಸಿಕೊಡುತ್ತವೆ ಅತ್ಯಂತ ಪ್ರಮುಖವೆಂದು ಆರು ಸ್ಮೃತಿಗಳನ್ನು ಹೆಸರಿಸಬಹುದು...

1. ಮನುಸ್ಮೃತಿ
2. ಯಜ್ಞವಲ್ಕ್ಯ ಸ್ಮೃತಿ
3. ನಾರದ ಸ್ಮೃತಿ
4. ಪರಾಶರ ಸ್ಮೃತಿ
5. ಗೌತಮ ಸ್ಮೃತಿ
6. ಕಾತ್ಯಾಯನ ಸ್ಮೃತಿ

ಸ್ಮೃತಿಗಳು ನ್ಯಾಯಶಾಸ್ತ್ರದ ಪ್ರಮುಖ ಆಧಾರಗಳಾಗಿದ್ದರೂ ಅವು ತಮ್ಮಷ್ಟಕ್ಕೆ ತಾವೇ ನ್ಯಾಯಶಾಸ್ತ್ರದ ಗ್ರಂಥಗಳಾಗಲಾರವು ಧಾರ್ಮಿಕ ಪ್ರಜ್ಞೆಯೇ ಪ್ರಧಾನವಾಗಿದ್ದ ಕಾಲದಲ್ಲಿ ಸ್ಮೃತಿಗಳ ರಚನೆಯಾಗಿದ್ದರಿಂದ ವ್ಯವಹಾರ ವಿಷಯಗಳಿಗೆ ಅವು ಅಷ್ಟೊಂದು ಮಹತ್ವವನ್ನು, ಪ್ರಾಧಾನ್ಯವನ್ನು ಕೊಟ್ಟಿರಲಾರವು. ಲೌಕಿಕ ವ್ಯವಹಾರದ ಎಲ್ಲ ಸಮಸ್ಯೆಗಳಿಗೂ ವಿವರವಾದ ಸಂದರ್ಭ ಅನುಸಾರ ಅನುಷ್ಠಾನ ಯೋಗ್ಯ ಪರಿಹಾರಗಳು ಅವುಗಳಲ್ಲಿ ದೊರೆಯಲಾರವೇನೋ? ಈ ಹಿನ್ನೆಲೆಯಲ್ಲಿ ಜನಸಮುದಾಯ ಕಾಲಾನುಕಾಲದಿಂದ ಅನುಸರಿಸಿಕೊಂಡೆ ಬಂದ ರೂಢಿ ಸಂಪ್ರದಾಯ ಪದ್ಧತಿ ನಂಬುಗೆ ಆಚರಣೆ ಇತ್ಯಾದಿಗಳಿಗೆ ಶಾಸ್ತ್ರಕಾರರು ಶೃತಿ–ಸ್ಮೃತಿಗಳ ನಂತರದ ಸ್ಥಾನವನ್ನು ನೀಡಿದ್ದಾರೆ.

ಸ್ಮೃತಿಕಾರರಲ್ಲಿ ಮೊದಲಿಗನೂ, ಅಗ್ರಗಣ್ಯನೂ ಆಗಿರುವ ಮನುವನ್ನು ಮಾನವ ಕುಲದ ಪಿತೃ ಎಂದು ಕರೆಯಲಾಗಿದ್ದರೂ, ಯಾಜ್ಞವಲ್ಕ್ಯ ಸ್ಮೃತಿಯು ಹೆಚ್ಚು ಕಡಿಮೆ ಮನುಸ್ಮೃತಿಯ ಮಾದರಿಯಲ್ಲಿದ್ದರೂ, ಇಲ್ಲಿ ವಿಷಯಗಳ ತಾರ್ಕಿಕತೆ, ಸಮ್ಮಿಳನ, ಪ್ರತಿಪಾದನೆ ಮುಂತಾದವುಗಳು ಅತ್ಯಂತ ಸ್ಪಷ್ಟವಾಗಿವೆ. ಕೆಲವು ವಿಷಯಗಳಲ್ಲಿ ಮನುಸ್ಮೃತಿಯಲ್ಲಿನ ಕಾಠಿಣ್ಯ ಇಲ್ಲಿ ಕಂಡು ಬರುವುದಿಲ್ಲ. ಬಹಳಷ್ಟು ವಿಷಯಗಳಲ್ಲಿ ಸಾಕಷ್ಟು ಮೃದುದೋರಣೆಯನ್ನು ತಾಳಿರುವುದಲ್ಲದೆ, ವಿಷಯಗಳನ್ನು ಮಾನವೀಯ ನೆಲೆಯಲ್ಲಿ ನೋಡುವಲ್ಲಿ, ಪರಾಮರ್ಶಿಸುವಲ್ಲಿ ಮತ್ತು ನಿರ್ಣಯಕ್ಕೆ ಬರುವಲ್ಲಿ ಪ್ರಗತಿಪರ ಚಿಂತನೆ, ಕಾಳಜಿಯನ್ನು ಮೆರೆದಿದ್ದರೆ, ವ್ಯವಹಾರಿಕ ವಿಧಾನಗಳಿಗೆ ಸಂಬಂಧಿಸಿದ ನಿಯಮಗಳಿಗೆ ಮನುಸ್ಮೃತಿಯಲ್ಲಿ ಮಹತ್ವವಿರಲಿಲ್ಲ ಆದರೆ ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಅವು ವ್ಯವಸ್ಥಿತವಾಗಿ ಉಲ್ಲೇಖಗೊಂಡಿರುವುದನ್ನು ಕಾಣಬಹುದು.

ಮನುಸ್ಮೃತಿಗೆ ಹೋಲಿಸಿದಲ್ಲಿ ಯಾಜ್ಞವಲ್ಕ್ಯ ಸ್ಮೃತಿ ಸಂಕ್ಷಿಪ್ತವೂ ವೈಜ್ಞಾನಿಕವೂ ಮತ್ತು ಪ್ರಾಯೋಗಿಕವೂ ಅಗಿದೆ. ಅವರ ಅಭಿವ್ಯಕ್ತಿಗಳು ಕ್ಲುಪ್ತವೂ, ವೈಶಿಷ್ಟ್ಯದಿಂದ ಕೂಡಿದವೂ ಅಗಿವೆ. ಸ್ಪಷ್ಟತೆ, ಮೃದುತ್ವ, ಮಾನಿವೀಯತೆ, ಪ್ರಯೋಗಾರ್ಹತೆ, ಸಂಕ್ಷಿಪ್ತತೆ, ಸರಳತೆ, ಪ್ರಗತಿಪರತೆ ಇವೆಲ್ಲವೂ ಯಾಜ್ಞವಲ್ಕ್ಯ ಸ್ಮೃತಿಯ ಸ್ತುತ್ಯರ್ಹ ಗುಣಲಕ್ಷಣಗಳಾಗಿವೆ.

ಪರಿವರ್ತನಾಶೀಲ ಸಮಾಜದ ಬೇಕು ಬೇಡಗಳ ಹಿನ್ನೆಲೆಯಲ್ಲಿ ಪ್ರಾಚೀನ ನಿಯಮಗಳನ್ನು ಧೈರ್ಯದಿಂದ ವಿಮರ್ಶಿಸಿ ವಿಶ್ಲೇಷಿಸಿ ಅಗತ್ಯ ಕಂಡುಬಂದಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿ ಹಿಂದೂ ನ್ಯಾಯ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸಿದ ಶ್ರೇಯಸ್ಸು ವ್ಯಾಖ್ಯಾನ ಕಾರರಿಗೆ ಸಲ್ಲುತ್ತದೆ. ನ್ಯಾಯಾಡಳಿತದಲ್ಲಿ ಅನೇಕ ಸಂದರ್ಭಗಳಲ್ಲಿ ಮೂಲ ಕಾನೂನಿಗಿಂತಲೂ ಅದರ ವಿಮರ್ಶೆ, ವ್ಯಾಖ್ಯಾನಗಳು ಮುಖ್ಯವಾಗಿರುತ್ತದೆ. ಎಲ್ಲಾ ಸ್ಮೃತಿಗಳಿಗೂ ವ್ಯಾಖ್ಯಾನ ಬರೆಯಲಾಗಿದೆ. ಆದರೆ ಕೇವಲ ಕೆಲವೇ ವ್ಯಾಖ್ಯಾನಗಳನ್ನು, ಭಾಷ್ಯಗಳನ್ನು, ಟೀಕೆಗಳನ್ನು, ವಿಮರ್ಶೆಗಳನ್ನು ಸಮಾಜ ಹಾಗೂ ವ್ಯವಸ್ಥೆ ಒಪ್ಪಿಕೊಂಡಿವೆ.

ಇಂತಹ ವ್ಯಾಖ್ಯಾನಕಾರರಲ್ಲಿ ಸರ್ವ ಶ್ರೇಷ್ಠರು ಸಾರ್ವಕಾಲಿಕ ಮಾನ್ಯರು ಮತ್ತು ಸ್ಮೃತಿಗಳ ಎಲ್ಲಾ ವ್ಯಾಖ್ಯಾನಕಾರರಲ್ಲಿ ಅತ್ಯುನ್ನತ ಸ್ಥಾನ ಅಲಂಕರಿಸಿದವರು ಯಾಜ್ಞವಲ್ಕ್ಯ ಸ್ಮೃತಿಗೆ ವ್ಯಾಖ್ಯಾನ ಬರೆದವರು ಆದ ವಿಜ್ಞಾನೇಶ್ವರರು. ಅವರ ಕೃತಿ **"ಮಿತಾಕ್ಷರ"** ಭಾರತೀಯ ನ್ಯಾಯಶಾಸ್ತ್ರದ ಬೆಳವಣಿಗೆಯ ಅಡಿಗಲ್ಲು, ಭಾರತ ಎಂದೆಂದೂ ಮರೆಯಲಾಗದ ಮೇರು ವ್ಯಕ್ತಿಗಳಲ್ಲಿ ಮಹಾನ್ ಪುರುಷರ ಪಂಕ್ತಿಯಲ್ಲಿ ವಿಜ್ಞಾನೇಶ್ವರ ಪ್ರಮುಖರು.

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ 41ನೇ ವಾರ್ಷಿಕ ಸರ್ವಸದಸ್ಯರ ಸಭೆ
















PERIODICAL RATE

VIPRANUDI KANNADA MONTHLY

RNI No. KARKAN/2009/29931. Posted at BG PSO, Mysore Road, Bangalore-560 026,

Permitted to Post on 25-04-2023 Date of Publishing 22-04-2023




If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R) "Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070. And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar